
ಸಂಪುಟ 24 ಸಂಚಿಕೆ 29-30
ಜುಲೈ 28, 2002 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ


http:// www.geocities.com/aikyaranga




ವಿದೇಶಿ ಕಂಪನಿಗಳಿಗೆ ಮಾಧ್ಯಮ ಮಾರಾಟ



ಕೊಪ್ಪಳ : ಇನ್ನೂ ಹೊರಗುಳಿದ ಅಪರಾಧಿಗಳು !





ವರ್ಲ್ಡ್ ಕಾಂ-ಕ್ಸೆರಾಕ್ಸ್ ಹಗರಣ ಸೂಟುಬೂಟಿನ ದರೋಡೆಖೋರರು




ಮುಗಿದ ರಾಷ್ಟ್ರಪತಿ ಚುನಾವಣೆ ಮುಂದುವರೆದ ಹೋರಾಟ

ಕಾಂ. ಸೂರಿ: ಕಾರ್ಮಿಕರ ಸಂಘಟನೆ, ಹೋರಾಟ, ಪಕ್ಷ-ಇದೇ ಅವರ ಜೀವನವಾಗಿತ್ತು

— ಜಿ.ವಿ.ಶ್ರೀರಾಮರೆಡ್ಡಿ

ಏನು ಹೇಳಬೇಕು, ಕಾಂ ಸೂರಿ ಇನ್ನಿಲ್ಲ ಎಂಬ ...ರ್ತೆ ಒಂದು ಬರಸಿಡಿಲಿನಂತೆ ಬಂದು ಎರಗಿತು. ...ರ್ಯನಾರಾಯಣ ರಾವ್ ಇಲ್ಲದ ಕಮ್ಯುನಿಸ್ಟ್ ...ಕ್ಷವನ್ನು ನೆನೆಯುವುದೇ ಒಂದು ಅನಾಥ ಭಾವನೆ ...ರುತ್ತದೆ. ಮತ್ತು ಕಾರ್ಮಿಕ ವರ್ಗದ ಜೊತೆ ತಮ್ಮ ...ದೀರ್ಘ ಸಂಬಂಧ ಆ ರೀತಿಯಲ್ಲಿ ಬೆಳೆದು ಬಂದಿದೆ. ...ಡೀ ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಹೋರಾಟ ...ಂದರೆ ಕಾಂ. ಸೂರಿ, ಸೂರಿ ಎಂದರೆ ಕಾರ್ಮಿಕರು ...ಂಬ ರೀತಿಯಲ್ಲಿ ಕರ್ನಾಟಕದ ಜನತೆ ಭಾವಿಸಿದ್ದರು. ...ು. 21.6.2002 ಕೋಲಾರ ಜಿಲ್ಲಾ ಪಕ್ಷದ ಜಿಲ್ಲಾ ...ಮಿತಿಗೆ ಬಂದಿದ್ದಾಗಲೇ ಅವರ ನನ್ನ ಕಡೆಯ ಭೇಟಿ ...ಗುತ್ತೆ ಎಂದು ನಾನು ನೆನೆಸಿರಲಿಲ್ಲ.

ನಾನು ಕಾಂ.ಸೂರಿಯವರನ್ನು ಮೊಟ್ಟ ಮೊದಲ ...ಾರಿಗೆ ನೋಡಿದ್ದು 1971 ರಲ್ಲಿ. ನಾವು ಆಗತಾನೆ ...ಸ್‌ಎಫ್‌ಐ ನ ಸ್ಥಾಪನ ಸಮ್ಮೇಳನ ದಲ್ಲಿ ಭಾಗವಹಿಸಿ ...ತುವನಂತಪುರ ದಿಂದ ಬಂದು ಆಗಿನ ಸುಲ್ತಾನ್ ...ೀಟೆಯ ಪಕ್ಷದ ಕಛೇರಿಯಲ್ಲಿ ...ಾತಿದ್ದೆ. ಅಲ್ಲಿಗೆ ಬಂದ ಕಾಂ. ಸೂರಿ ...ವರನ್ನು ನನಗೆ ಅಲ್ಲಿದ್ದ ...ಂಗಾತಿಯೊಬ್ಬರು ಪರಿಚಯ ...ಾಡಿಕೊಟ್ಟರು. ಓಹೋ, ನೀನು ...ಕೆ.ಗಂಗಿರೆಡ್ಡಿಯವರ ಸಂಬಂಧಿ ...ನಯ್ಯ. ಚೆನ್ನಾಗಿ ಸಂಘಟನೆ ...ಟ್ಟಬೇಕಯ್ಯ ಎಂದು ಹೇಳಿದ ...ಾತುಗಳು ನನಗೆ ಇನ್ನೂ ಹಚ್ಚ ...ಸಿರಾಗಿಯೇ ಉಳಿದಿದೆ. ಅಲ್ಲಿಂದ ...ೂನ್ 21ನೇ ತಾರೀಖಿನವರೆಗೂ ...ಾವಾಗಲೇ ಸಿಕ್ಕಲಿ, ಎಲ್ಲೇ ಇರಲೀ ...ಂಘಟನೆ ಕೆಲಸ, ಪಕ್ಷದ ಕೆಲಸ, ...ಹೋರಾಟಗಳನ್ನು ಬಿಟ್ಟರೆ ಬೇರೆ ...ನನ್ನೂ ಕೇಳುತ್ತಿದ್ದದ್ದು ವಿರಳ. ತನ್ನ ...ೀವನದ ಉದ್ದಕ್ಕೂ ಕಾರ್ಮಿಕರ ...ಂಘಟನೆ, ಹೋರಾಟ, ಪಕ್ಷ ಇದೇ ...ವರ ಜೀವನವಾಗಿತ್ತು. ...ಹೋರಾಟಗಳ ಸಂದರ್ಭದಲ್ಲಿ ಎಂತಹ ...ರಿಸ್ಥಿತಿಯಲ್ಲೂ ಅವರು ತೋರುತ್ತಿದ್ದ ...ದೆಗಾರಿಕೆ ಅಸಾಮಾನ್ಯ. ಭಯ ...ನ್ನುವ ಆತಂಕವೆಂಬುದೇ ಅವರಿಗೆ ...ಾತ್ತಿರಲಿಲ್ಲ. ಕಾರ್ಮಿಕ ಸಂಘಗಳನ್ನು ಮುರಿಯುವ ...ಗೂಂಡಾಗಳನ್ನು ಮಾಲಿಕರ ಏಜೆಂಟರನ್ನು ಅವರು ...ದುರಿಸುತ್ತಿದ್ದ ರೀತಿ ಅಸಮಾನ್ಯ. 1978 ರ ...ಮಯದಲ್ಲಿ ಮೈಕೋ ಯೂನಿಯನ್ನು ಸಂಘಟನೆ ...ಷಯದಲ್ಲಿ ದೇವಾಂಗ ಸಂಘದ ಹಾಲಿನಲ್ಲಿ ನಡೆದ ...ಟನೆ ನನಗೆ ಇನ್ನೂ ನೆನಪಿದೆ. ಒಳಗಡೆ ಸಭೆ ...ಡೆಯುತ್ತಿದ್ದರೆ ಅತ್ತಕಡೆ ನಮ್ಮ ವಿರೋಧಿಗಳ ಗುಂಪು ...ದೊಣ್ಣೆ ಮತ್ತು ರಾಡುಗಳನ್ನು ಹಿಡಿದು ಆ ಸಭೆಯನ್ನು ...ಡೆಯದ ಹಾಗೆ ಮಾಡಲು 10-12 ಕಾರುಗಳಲ್ಲಿ ಬಂದು ...ಾಲಿನ ಸುತ್ತಲೂ ನಿಂತಿದ್ದಾರೆ. ನಾನು ಮತ್ತು ಕಾಂ. ...ಿ.ಜಗನ್ನಾಥ್ ಒಂದು ಬಾಗಿಲಲ್ಲಿ ನಿಂತು ತಡೆಯುವ ...ಪ್ರಯತ್ನ ಮಾಡುತ್ತಿದ್ದೇವೆ. ಗಂಭೀರವಾದ ಸ್ಥಿತಿ ...ಉಂಟಾಗಿದೆ. ಕಾಂ. ಸೂರಿ ಅವರು ...ಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ. ಯಾರೋ ಹೋಗಿ ಗೂಂಡಾಗಳು ಬಂದಿರುವ ಸುದ್ದಿಯನ್ನು ಕಾಂ.ಸೂರಿ ಅವರಿಗೆ ತಿಳಿಸಿದ ತಕ್ಷಣ ಅವರ ಪ್ರತಿಕ್ರಿಯೆಗೆ ಇಡೀ ಸಭೆ ಅವಕ್ಕಾಯಿತು. "ಏ ನಾನು ಕಮ್ಯುನಿಸ್ಟ್ ಕ್ರಾಂತಿಕಾರಿ. ನಾನು ಸಾವಿಗೆ ಹೆದರುವವನಲ್ಲ. ಅವರಿಗೆ ತಾಕತ್ತಿದ್ದರೆ ಒಳಗಡೆ ಬರಲಿಕ್ಕೆ ಹೇಳು" ಎಂದು ಅಲ್ಲೆ ಗುಡುಗಿದ ಅವರ ಎದೆಗಾರಿಕೆಗೆ ಯಾರಾದರೂ ಅಭಿನಂದಿಸಲೇಬೇಕು.



ಕಾರ್ಮಿಕ ಚಳುವಳಿಯಲ್ಲಿ ಮತ್ತು ಪಕ್ಷದ ರಾಜಕೀಯ ಜೀವನದಲ್ಲಿ ಅವರಿಗೆ ಬಂದ ಎಲ್ಲಾ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದ ರೀತಿ ಬಹಳ ಸೋಜಿಗ ಮತ್ತು ಆದರ್ಶ ಪ್ರಾಯವಾಗಿತ್ತು. 1964 ರಲ್ಲಿ ಪಕ್ಷದಲ್ಲಿ ಒಳಗಡೆ ಪರಿಷ್ಕರಣ ವಾದಿಗಳ ವಿರುದ್ಧ ನಡೆದ ಹೋರಾಟದಲ್ಲಿ ಅವರು ಪರಿಷ್ಕರಣವಾದಿಗಳನ್ನು ಎದುರಿಸಿ ಮತ್ತು ಅವರ ವಿರುದ್ಧ ಕೊನೆಯವರೆಗೂ ಹೋರಾಡಿದ ರೀತಿ ಸಂಗಾತಿಗಳಿಗೆ ಅನುಸರಣೀಯ'ಆಗಿದೆ. ತನ್ನ ಇಡೀ ಜೀವನದಲ್ಲಿ ಕಾರ್ಮಿಕರ ಪರ ಚಿಂತನೆ ಬಿಟ್ಟು ಬೇರೆ ಏನನ್ನೂ ಅವರು ಆಲೋಚನೆ ಮಾಡಿದ್ದು ನನಗೆ ಜ್ಞಾಪಕ ಇಲ್ಲ. ಕಾರ್ಮಿಕ ವರ್ಗದ ಬಗ್ಗೆ ಮತ್ತು ಆ ವರ್ಗದ ಕ್ರಾಂತಿಕಾರಿ ಶಕ್ತಿಯ ಬಗ್ಗೆ ಅವರಿಗೆ ಇದ್ದ ನಂಬಿಕೆ ಅಚಲ. ಅದು ಇಷ್ಟು ಇಳಿವಯಸ್ಸಿನಲ್ಲೂ ಅವರನ್ನು ಒಬ್ಬ ಯುವಕನ ಹಾಗೆ ಮಾಡಿತ್ತು. ದಣಿವರಿಯದ ಅವರ ಕೆಲಸ ಯಾರಿಗಾದರೂ ಆಶ್ಚರ್ಯ ಮೂಡಿಸುತ್ತಿತ್ತು. ಇಷ್ಟು ಇಳಿ ವಯಸ್ಸಿನಲ್ಲೂ ಇಡೀ ದೇಶದ ಉದ್ದಗಲಕ್ಕೂ ಅವರು ತಿರುಗಾಡುತ್ತಿದ್ದ ಪರಿ ನೋಡಿದರೆ ಅವರಿಗಿಂತ ಎಷ್ಟೋ ವರ್ಷಗಳು ಕಿರಿಯವರಾದ ನಮಗೆ ನಾಚಿಕೆ ಆಗುತ್ತಿತ್ತು. ಅವರ ಜ್ಞಾಪಕ ಶಕ್ತಿ ಅಗಾಧ. ಅವರು ಡೈರಿಯನ್ನು ಇಟ್ಟು ತಾರೀಖುಗಳು, ಕಾರ್ಯಕ್ರಮಗಳನ್ನು ಗುರುತು ಹಾಕಿಕೊಂಡಿದ್ದನ್ನು ನನ್ನ 30 ವರ್ಷದ ಸಾಂಗತ್ಯದಲ್ಲಿ ನೋಡೇ ಇಲ್ಲ. ಅವರ ಮಿದುಳೇ ಒಂದು ಕಂಪ್ಯೂಟರ್ ರೀತಿಯಲ್ಲಿ ಯಾವ ತಾರೀಖಿಗೆ ಎಲ್ಲಿಗೆ ಹೋಗಬೇಕು, ಏನು ಕಾರ್ಯಕ್ರಮ ಎಂದು ಟಕಟಕ ಹೇಳಿ ಬಿಡುತ್ತಿದ್ದರು. ಹಾಗೆ ಯಾವುದೇ ರಾಜಕೀಯ ಸಂದಿಗ್ಧ ಪರಿಸ್ಥಿತಿಗಳು, ಕ್ಲಿಷ್ಟ ಸಮಸ್ಯೆಗಳು ಎದುರಾದಂತಹ ಸಂದರ್ಭದಲ್ಲಿ ಅವರ ಆಲೋಚನೆ ಎಷ್ಟು ಮೊನಚಾಗಿರುತ್ತಿತ್ತು ಎಂದರೆ ಅದು ಊಹೆಗೂ ಅಸಾಧ್ಯವಾಗುತ್ತಿತ್ತು.

ಇಂದು ನಮ್ಮ ಪಕ್ಷ ಮತ್ತು ಕರ್ನಾಟಕ ರಾಜ್ಯದ ಕಾರ್ಮಿಕ ಚಳುವಳಿ ಕಾಂ. ಸೂರಿಯವರಿಲ್ಲದೆ ಅನಾಥವಾಯಿತು. ರಾಜಕೀಯವಾಗಿ ಅವರನ್ನು ವಿರೋಧಿಸುತ್ತಿದ್ದವರೂ ಕಾರ್ಮಿಕರ ಪ್ರಶ್ನೆ ಬಂದಾಗ ಅವರ ನಾಯಕತ್ವವನ್ನು ಒಪ್ಪುತ್ತಿದ್ದರು. ಇಂದು ಕಾಂ. ಸೂರಿಯವರು ನಮ್ಮನ್ನು ಅಗಲಿದ್ದಾರೆ. ಅವರ ಜೀವನದ ಉದ್ದಕ್ಕೂ ಯಾವ ಕಾರ್ಮಿಕ ವರ್ಗಕ್ಕಾಗಿ ದುಡಿದರೋ ಆ ಕಾರ್ಮಿಕ ವರ್ಗವನ್ನು ಬಲಿಷ್ಟವಾಗಿ ಕಟ್ಟಿ ಕಾರ್ಮಿಕ ವರ್ಗದಲ್ಲಿ ವರ್ಗ ಜಾಗೃತಿಯನ್ನು ಮತ್ತು ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವುದೇ ನಾವು ಅವರಿಗೆ ಅರ್ಪಿಸುವ ನಿಜವಾದ ಶ್ರದ್ಧಾಂಜಲಿ ಆಗುತ್ತದೆ. ಇಂದು ಸಂದಿಗ್ಧ ಸ್ಥಿತಿಯಲ್ಲಿರುವ ನಮ್ಮ ದೇಶದ ಮತ್ತು ರಾಜ್ಯದ ರಾಜಕೀಯದಲ್ಲಿ ಸೂರಿಯವರಿಲ್ಲದ ಶೂನ್ಯತೆಯನ್ನು ನಮ್ಮ ಪಕ್ಷ ತುಂಬಬೇಕಿದೆ. ಕಾಂ.ಸೂರಿ ಅವರ ಆಶಯವನ್ನು ಪೂರೈಸುತ್ತೇವೆಂದು ಪಣ ತೊಡೋಣ. ಕಡೆಯದಾಗಿ ಕಾಂ ಸೂರಿಯವರಿಗೆ ಕ್ರಾಂತಿಕಾರಿ ಕೆಂಪು ವಂದನೆಗಳು.

○

ಸ್ವಾತಂತ್ರ್ಯ ಹೋರಾಟದ ಕೊನೆಯ ಕೊಂಡಿ ಕಳಚಿ ಬಿದ್ದಿದೆ

— ವಿ.ಜೆ.ಕೆ.ನಾಯರ್

ಕಾಮ್ರೇಡ್ ಸೂರಿಯವರ ನಿಧನದೊಂದಿಗೆ ಕರ್ನಾಟಕದ ಎಡಪಂಥೀಯ ಪಕ್ಷಗಳಲ್ಲಿ ಸ್ವಾತಂತ್ರ್ಯ ಹೋರಾಟದೊಂದಿಗೆ ಇದ್ದ ಕೊನೆಯ ಕೊಂಡಿ ಕಳಚಿ ಬಿದ್ದಿದೆ.

ಪ್ರಚಂಡ ಭಾಷಣಕಾರ, ಕಾರ್ಮಿಕ ವರ್ಗದ ಕ್ರಾಂತಿಯ ಬದ್ಧ ಪ್ರತಿಪಾದಕ ಹಾಗೂ ಕರ್ನಾಟಕದ ಅತ್ಯಂತ ಪರಿಣಾಮಕಾರಿ ಟ್ರೇಡ್ ಯೂನಿಯನ್ ಮುಖಂಡ- ಇವು ಮೂರೂ ಮೇಳವಿಸಿದ್ದ ಇವರ ನಿಧನದೊಂದಿಗೆ ಒಂದು ದೊಡ್ಡ ಶೂನ್ಯ ಉಂಟಾಗಿದೆ. ಏಕೆಂದರೆ ಎಸ್. ಸೂರ್ಯನಾರಾಯಣ ರಾವ್ ರವರು ಕರ್ನಾಟಕ ದಲ್ಲಿ ಕಾರ್ಮಿಕ ವರ್ಗದ ಪಕ್ಷದ, ರಾಜ್ಯದ ಅತ್ಯಂತ ಪರಿಣಾಮಕಾರಿ ಕಾರ್ಮಿಕ ಸಂಘಟನೆ ಸಿಐಟಿಯುನ ಸೂತ್ರ ಹಿಡಿದಿದ್ದವರು, ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್, ಮೈಕೋ ಎಂಪ್ಲಾಯೀಸ್ ಅಸೋಸಿಯೇಶನ್, ಹರಿಹರ ಪಾಲಿಫೈಬರ್ಸ್ ಎಂಪ್ಲಾಯೀಸ್ ಯೂನಿಯನ್, ವಿಕ್ರಾಂತ್ ಇತ್ಯಾದಿ ಕಾರ್ಮಿಕ ಸಂಘಗಳ ಮುಖಂಡರು.

ಸ್ವಾತಂತ್ರ್ಯ ಆಂದೋಲನದ ಕೊನೆಯ ಹಂತದಲ್ಲಿ ಚಳುವಳಿಗೆ ಧುಮುಕಿದ ಸೂರಿ ಯವರು ಸ್ವಾತಂತ್ರ್ಯದ ನಂತರವೂ ಅದನ್ನು ಮುಂದಕ್ಕೊಯ್ದರು. ಏಕೆಂದರೆ ಬಿಳಿ ತೊಗಲಿ ನವರ ಜಾಗದಲ್ಲಿ ಬಿಳಿ ಟೋಪಿ ಯವರನ್ನು ಕೂರಿಸಿದರೆ ಜನತೆಗೆ ಸ್ವಾತಂತ್ರ್ಯ ಸಿಕ್ಕಂತಾಗಲಿಲ್ಲ ಎಂದು ಅವರು ಅರಿತಿದ್ದರು. ವಿದ್ಯಾರ್ಥಿಗಳನ್ನು, ಕಾರ್ಮಿಕರನ್ನು, ರೈತರನ್ನು ಸಂಘಟಿಸಿ ಹೋರಾಟವನ್ನು ಮುಂದುವರೆಸಿದರು. ನೆಹರೂ ಸರಕಾರ ಪಕ್ಷದ ಮೇಲೆ ನಿಷೇಧ ಹೇರಿದಾಗ ಅವರು ಭೂಗತವಾಸ ನಡೆಸಿದರು.

ಐವತ್ತರ ದಶಕದ ಆರಂಭದಲ್ಲಿ ಅವರು ಜವಳಿ, ರೇಶ್ಮೆ ಇತ್ಯಾದಿ ಹಲವಾರು ವಲಯಗಳ ಕಾರ್ಮಿಕರನ್ನು ಅಪಾರ ಸಂಖ್ಯೆಯಲ್ಲಿ ಸಂಘಟಿಸಿ ದರು. ಜವಳಿ ಕಾರ್ಮಿಕರ ಆಂದೋಲನದಲ್ಲಿ ಅವರೊಬ್ಬ ಪ್ರಮುಖ ಮುಖಂಡರಾಗಿದ್ದರು- ರಾಜಾ ಮಿಲ್, ಮಿನರ್ವ ಮಿಲ್, ಸುಭದ್ರಾ ಮಿಲ್, ರಾಮ್‌ಕುಮಾರ ಮಿಲ್, ದಾವಣಗೆರೆಯ ಗಣೇಶ ಮಿಲ್ ಇತ್ಯಾದಿ.

ಪಕ್ಷದಲ್ಲಿ ಒಡಕು ಬಂದಾಗ ತೆನಾಲಿ ಸಮಾವೇಶದಲ್ಲಿ ಭಾಗವಹಿಸಿದ ಮೊದಲಿಗರಲ್ಲಿ ಅವರೊಬ್ಬರು. ಅವರೊಂದಿಗೆ ಎಂ ಹೆಚ್ ಕೃಷ್ಣಪ್ಪ, ಹೆಚ್.ಎಸ್.ರಾಮರಾವ್ ಮತ್ತು ಚಂದುಕುಟ್ಟಿ ನಾಯರ್ ಭಾಗವಹಿಸಿದರು.

ಭಾರತ- ಚೀಣಾ ಯುದ್ಧದ ಸಮಯದಲ್ಲಿ ಕಾಮ್ರೇಡ್ ಸೂರಿ ಬಂಧನಕ್ಕೊಳಗಾದರು.

ಎಪ್ಪತ್ತರ ದಶಕದ ಆರಂಭದಲ್ಲಿ ಅವರನ್ನು ದಾವಣಗೆರೆಯ ಒಂದು ಕೊಲೆ ಕೇಸಿನಲ್ಲಿ ಸಿಲುಕಿಸಲಾಗಿತ್ತು. ಇದರಿಂದಾಗಿ ಸಿಐಟಿಯು ಸ್ಥಾಪನೆಗೊಂಡಾಗ ಕಲ್ಕತ್ತೆಗೆ ಹೋಗಲು ಅವರಿಗಾಗಿರಲಿಲ್ಲ. ಆದರೂ ಸಿಐಟಿಯು ರಾಜ್ಯ ಸಮ್ಮೇಳನ ಅವರನ್ನು ಅಧ್ಯಕ್ಷರಾಗಿ ಆರಿಸಿತು.

ನಿಜವಾಗಿ ಎಐಟಿಯುಸಿಯ ಒಡಕಿನ ಮೊದಲ ದಿನಗಳಲ್ಲಿ ಸೂರಿಯವರು ಕರ್ನಾಟಕ ಪ್ರದೇಶ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ತುರ್ತು ಪರಿಸ್ಥಿತಿ ಸಮಯದಲ್ಲಿ ರೋರಿಕ್ ಕುಟುಂಬದ ಒಡೆತನದ ತಾತಗುಣಿ ಎಸ್ಟೇಟ್‌ನ ಕಾರ್ಮಿಕರನ್ನು ಸಂಘಟಿಸಿದ್ದಕ್ಕೆ ಅವರನ್ನು ಜತೆಗೆ ಪಿ. ಜಗನ್ನಾಥ್ ಮತ್ತು ದೇವಿಕಾ ರಾಣಿಯ ಡ್ರೈವರ್ ಚಿನ್ನಪ್ಪರನ್ನು ಬಂಧಿಸಲಾಗಿತ್ತು.

ಮೈಕೋ ಮತ್ತು ಐಟಿಸಿಯ ಕಾರ್ಮಿಕರನ್ನು ಸಂಘಟಿಸುವ ಕೆಲಸ ಕೈಗೆತ್ತಿಕೊಂಡ ಸೂರಿಯವರು ಇದರಿಂದಾಗಿ ಬಹಳ ಕಷ್ಟಗಳನ್ನು ಅನುಭವಿಸ ಬೇಕಾಯಿತು.

ಕಾಮ್ರೇಡ್ ಸೂರಿ 1983ರಲ್ಲಿ ಮುಂಬೈಯಲ್ಲಿ ನಡೆದ ಸಿಐಟಿಯುನ ಅಖಿಲ ಭಾರತ ಅಧಿವೇಶನ ದಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

ಜನಗಳಿಗೆ ಅವರ ಬದ್ಧತೆ ಹಾಗೂ ಅವರ ಅನುಭವಗಳು, ವಿಶೇಷವಾಗಿ ಭೂಗತ ಚಳುವಳಿಯ ಒತ್ತಡಗಳು ಅವರ ಸ್ವಭಾವವನ್ನು ಗಮನಾರ್ಹಗೊಳಿಸಿದ್ದವು. ಅಲ್ಲಿ ನಯ- ನಾಜೂಕಿಗೆ ಸ್ಥಾನವಿರಲಿಲ್ಲ. ಅವರ ತೀಕ್ಷ್ಣ ನಾಲಗೆಯ ಏಟು ತಿನ್ನದವರಿಲ್ಲ. ಆದರೆ ಅವು ಎಂದೂ ಅವರ ನಿಜವಾದ ಆಶಯಗಳನ್ನು ತೋರಿಸಲಿಲ್ಲ. ಅವರ ಆಶಯ ಪ್ರಶ್ನಾತೀತವಾಗಿತ್ತು.

ಕಾಮ್ರೇಡ್ ಸೂರಿಯವರನ್ನು ಕಳಕೊಂಡು ಉಂಟಾಗಿರುವ ತೆರವು ನಿಜಕ್ಕೂ ದೊಡ್ಡದು. ಯಾವುದೇ ಒಬ್ಬ ವ್ಯಕ್ತಿ ಅದನ್ನು ತುಂಬಲು ಸಾಧ್ಯವಿಲ್ಲ.

1978 ರ ನಂತರ ಸಿಐಟಿಯುವಿನಲ್ಲಿ ಅವರದ್ದು ಒಂದು ಬೃಹತ್ ವ್ಯಕ್ತಿತ್ವ.

○


ಕಾಮ್ರೇಡ್ ಸೂರಿಯವರ ಕುರಿತು ವಿಶೇಷ ಸಂಚಿಕೆ

ದುಡಿವ ವರ್ಗದ ಧೀಮಂತ ನಾಯಕ, ಹಿರಿಯ ಸಂಗಾತಿ ಕಾಮ್ರೇಡ್ 'ಸೂರಿ'ಯವರ ಬದುಕು-ಹೋರಾಟಗಳ ಕುರಿತಂತೆ ವಿಶಿಷ್ಟ ಫೋಟೋ, ಲೇಖನಗಳನ್ನೊಳಗೊಂಡ ವಿಶೇಷ ಸಂಚಿಕೆಯನ್ನು ಹೊರತರಲು ದುಡಿವ ಜನರ ಪ್ರಾಣ ಮಿತ್ರ 'ಐಕ್ಯರಂಗ' ನಿರ್ಧರಿಸಿದೆ. ಈ ಸಂಚಿಕೆ ಬಹುವರ್ಣದಲ್ಲಿ ಮುದ್ರಿತವಾಗುವ ಕಾಯ್ದಿರಿಸಿಕೊಳ್ಳಬೇಕಾದ ಸಂಚಿಕೆ. ಈ ಸಂಚಿಕೆಗಾಗಿ ಅವರೊಂದಿಗೆ ಒಡನಾಡಿದ ಅನೇಕರ ನೆನಪುಗಳ ಸಂಗ್ರಹ, ಹೋರಾಟಗಳ ಕುರಿತ ಲೇಖನ, ಫೋಟೋ ಸಂಗ್ರಹಿಸಲು ಈಗಾಗಲೇ ಐಕ್ಯರಂಗದ ತಂಡ ಕಾರ್ಯೋನ್ಮುಖವಾಗಿದೆ. ಈ ಸಂಚಿಕೆಗೆ ಅವರೊಂದಿಗಿನ ನೆನಪುಗಳು, ಜೀವನದ ವಿವರಗಳು, ಭಾವಚಿತ್ರಗಳು ನಿಮ್ಮಲ್ಲಿದ್ದರೆ ದಯವಿಟ್ಟು ಕಳಿಸಿಕೊಡಿ ಅಥವಾ ಸಂಗ್ರಹಿಸಿ ನೀಡಿ.

ಆಗಸ್ಟ್ 24 ರಂದು ಕಾಂ. ಸೂರಿಯವರ ಜನ್ಮದಿನದಂದು ವಿಶೇಷ ಕಾರ್ಯಕ್ರಮದಲ್ಲಿ ಈ ಸಂಚಿಕೆ ಬಿಡುಗಡೆಯಾಗಲಿದೆ.

ಆದ್ದರಿಂದ ಅವೆಲ್ಲಾ ಬರಹ, ಫೋಟೋ, ದಾಖಲೆಗಳು ಆಗಸ್ಟ್ 10 ರೊಳಗೆ ತಲುಪಬೇಕು. ಇಂತಹ ಅವಿಸ್ಮರಣೀಯ ದಾಖಲೆಯ ಸಂಚಿಕೆಗೆ ಎಲ್ಲಾ ನೆರವು-ಸಹಕಾರ ನೀಡಿ ಹಾಗೆಯೇ ಜಾಹೀರಾತುಗಳನ್ನು ಕೂಡ.

- ಸಂಪಾದಕರು



ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 4

1990 ರ ಐಕ್ಯರಂಗದಲ್ಲಿ ಪ್ರಕಟವಾದ ಲೇಖನವನ್ನು ಮತ್ತೆ ಪ್ರಕಟಿಸಲಾಗಿದೆ

ಆಗ ನಾನು ಶೇಷಾದ್ರಿಪುರದ ಒಂದು ಹಾಸ್ಟೇಲಿನಲ್ಲಿದ್ದೆ. ಅಲ್ಲಿಗೂ ಅವರು ಬಂದು ಹೋದರು. ಅವರು ಬಂದಾಗ ನಾನಿರಲಿಲ್ಲ. ನನಗೆ ವಿಷಯ ತಿಳಿದ ಕೂಡಲೇ ರಾತ್ರಿಯಿಡೀ ಪ್ರತಿಯೊಂದು ಕೊಠಡಿಗೂ ಹೋಗಿ ಕೇಂದ್ರ ಸರ್ಕಾರದ ನೌಕರರ ಮುಷ್ಕರದ ಮಹತ್ವವನ್ನು ವಿವರಿಸಿ ಕಾಂಗ್ರೆಸ್ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಹೇಳಿ ಯಾರೂ ಕೆಲಸಕ್ಕೆ ಹೋಗಕೂಡದೆಂದು ಮನವಿ ಮಾಡಿಕೊಂಡೆ. ಮಾರನೆಯ ದಿನ ಅದೇ ಹಾಸ್ಟೇಲಿನಲ್ಲಿದ್ದ ವೆಂಕಟಸುಬ್ಬರೆಡ್ಡಿ 'ಮೀರು ಕಮ್ಯುನಿಸ್ಟಲು ಏಮಿ ಜಾದೂ ಚೇಸ್ತೀರಯ್ಯಾ, ಒಕ್ಕರೂ ಪನಿಕೆ ಪೋಲೇದೇ' (ನೀವು ಕಮ್ಯುನಿಸ್ಟರು ಏನು ಜಾದೂ ಮಾಡಿದಿರಯ್ಯಾ, ಒಬ್ಬರೂ ಕೆಲಸಕ್ಕೆ ಹೋಗಲಿಲ್ಲವೇ) ಎಂದು ಹೇಳಿದಾಗಲೇ ಹಿಂದಿನ ರಾತ್ರಿಯ ನನ್ನ ಪ್ರಯತ್ನ ಸಂಪೂರ್ಣ ಫಲ ಕೊಟ್ಟಿದ್ದು ತಿಳಿಯಿತು.

1960ರಲ್ಲಿ ನನ್ನ ನಿರ್ಧಾರವನ್ನು ಪ್ರಕಟಿಸಿದಾಗ ಗೆಳೆಯರು, ಹಿತಚಿಂತಕರೂ ನನ್ನ ನಿರ್ಧಾರವನ್ನು ವಿರೋಧಿಸಿದರು. ಈಗಲೇ ನೀವು ಈ ರೀತಿ ಕೆಲಸ ಮಾಡಲು ಹೋದರೆ ಒಬ್ಬ ನಿರುದ್ಯೋಗಿ ಹೊಟ್ಟೆಪಾಡಿಗಾಗಿ ಏನೋ ಮಾಡುತ್ತಿದ್ದಾನೆ ಎಂದು ಆಡಿಕೊಳ್ಳುತ್ತಾರೆ. ಆದ್ದರಿಂದ ಸ್ವಲ್ಪಕಾಲ ಕೆಲಸ ಮಾಡಿ ಆಮೇಲೆ ಈ ಬಗ್ಗೆ ವಿಚಾರ ಮಾಡಿ ಎಂದು ಹೇಳಿದ್ದಲ್ಲದೇ ಬೆಂಗಳೂರು ನಗರ ಸಭೆಯ ನೀರು ಸರಬರಾಜು ವಿಭಾಗದಲ್ಲಿ ಒಂದು ಹಂಗಾಮಿ ಕೆಲಸವನ್ನು ಕೊಡಿಸಿದರು.

ಕ್ಯೂಬಾದ ಘಟನೆ, ಭಾರತ-ಚೀನ ಗಡಿವಿವಾದಗಳು, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ನಡೆಯುತ್ತಿದ್ದ ಚರ್ಚೆ ನನ್ನ ಮನಶ್ಶಾಂತಿಯನ್ನು ಕೆಡಿಸಿದ್ದವು. ಕನಸಿನಲ್ಲೆಲ್ಲಾ ಕ್ರುಶ್ಚೇವ್, ಕೆನಡಿ ಕಾಣಿಸಲಾರಂಭಿಸಿದರು.

(ಮುಂದುವರಿಯುವುದು)

ಅಂಬೇಡ್ಕರ್ ಪ್ರತಿಮೆಗೆ ಅವಮಾನ : ಪಿತೂರಿಗಾರರರು ಯಾರು?

ಕೊಪ್ಪಳದ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದ ಅಪರಾಧಿಗಳನ್ನು ಪೋಲೀಸರು ಪತ್ತೆ ಹಚ್ಚಿ ಬಂಧಿಸಿದ್ದಾರೆ. ವ್ಯಕ್ತಿಗತ ಜಗಳವನ್ನು ಕೋಮುದಳ್ಳುರಿ ಹಚ್ಚಲು 'ಪಿತೂರಿ ಹೆಣೆದ' ನರೇಂದ್ರಮೋದಿ ಸಂತತಿಯ ಕೈವಾಡವನ್ನು ಸರ್ಕಾರ ಯಾಕಿನ್ನೂ ಬಯಲಿಗೆಳೆದಿಲ್ಲ?

ಅಪರಾಧಿಗಳು ಸಿಕ್ಕಿಬಿದ್ದಾರೆ. ಡಾ। ಅಂಬೇಡ್ಕರ್ ಪ್ರತಿಮೆಗೆ ಅವಮಾನವಾಯಿತೆಂದು ಗುಲ್ಲೆಬ್ಬಿಸಿ, ಮರುಕ್ಷಣವೇ ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸಬೇಕೆಂದು ಪ್ರತಿಭಟನೆ ನಡೆಸಿದವರೇ, ಆ ಅಪರಾಧಿಗಳು, ತಮ್ಮ ದುಷ್ಕೃತ್ಯಗಳನ್ನು ಮುಚ್ಚಿಕೊಳ್ಳಲು ರಾಷ್ಟ್ರ ನಾಯಕನ ಬಗೆಗಿನ ಗೌರವದ ಭಾವನೆಗಳನ್ನು ಘಾಸಿ ಗೊಳಿಸಿ, ಕೋಮುದಳ್ಳುರಿ ಹಬ್ಬಿಸಲು ಹೇಸದ ದುಷ್ಟರವರು. ಎಷ್ಟೆಲ್ಲಾ ನಾಟಕವಾಡಿದರೂ ಕೊನೆಗೂ ಪೋಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ.


ನಿಯೋಗ ಭೇಟಿ

ಕೊಪ್ಪಳದಲ್ಲಿ ಡಾ। ಅಂಬೇಡ್ಕರ್‌ರವರ ವಿಗ್ರಹಕ್ಕೆ ಅವಮಾನವಾಗಿದೆಯೆಂದು ತಪ್ಪಿತಸ್ಥರನ್ನು ಬಂಧಿಸಬೇಕೆಂದು ಆಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆದಿದ್ದವು. ಹುಬ್ಬಳ್ಳಿ, ಬೆಳಗಾವಿಗಳಲ್ಲಿ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯುಂಟು ಮಾಡಲಾಗಿತ್ತು. ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದ ಘಟನೆಯ ವಿವರಗಳನ್ನು ಅರಿಯಲು ಸಿಪಿಐ(ಎಂ)ನ ರಾಜ್ಯ ಸಮಿತಿಯ ನಿಯೋಗ ಜುಲೈ 15 ರಂದು ಕೊಪ್ಪಳಕ್ಕೆ ಭೇಟಿ ನೀಡಿತ್ತು. ನಿಯೋಗವು ಒಟ್ಟು ವಿವರಣೆ ಮಾಹಿತಿಗಳನ್ನು ಸಂಗ್ರಹಿಸುತ್ತಾ ಹೋದಂತೆ ಪ್ರತಿಮೆಗಾದ ಘಟನೆಯಾಚೆಗೆ ಅನೇಕ ಗಂಬೀರವಾದ ಹಲವು ವಿದ್ಯಾಮಾನಗಳು ಸ್ಪಷ್ಟವಾಗಿ ಬೆಳಕಿಗೆ ಬಂದವು.

ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಕೆ.ನೀಲಾ, ಕೊಪ್ಪಳ-ರಾಯಚೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಂಟನಗೌಡ, ಜಿಲ್ಲಾ ಸಮಿತಿ ಸದಸ್ಯ ರಾಜು ಬಾಗಲ್, ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಿ.ವೆಂಕಟರಮಣ, ಪತ್ರಕರ್ತ ಪರುಶುರಾಮ ಇದ್ದರು.

ವ್ಯಕ್ತಿಗತ ಜಗಳ

ಜೂನ್ 30 ರಂದು ಕೊಪ್ಪಳದಲ್ಲಿನ ಮರ್ದಾನಲಿ ಎಂಬುವವರ ಮಗಳ ಮದುವೆಗೆಂದು 29 ರಂದು ಬಂದಿಳಿದರು. ಹುಲಿಗಿಯ ಶ್ರೀಮತಿ ಖಾಜಾಬನಿ ಮತ್ತವರ ಪರಿವಾರ. ಎಲ್ಲಾ ಬಂಧುಗಳನ್ನು ಅಂಬೇಡ್ಕರ್ ಕಾಲೋನಿಯಲ್ಲಿರುವ ಅಂಬೇಡ್ಕರ್ ಭವನದಲ್ಲಿ ತಂಗಲು ವ್ಯವಸ್ಥೆಗೊಳಿಸಲಾಗಿತ್ತು. ಈ ಭವನದ ಹತ್ತಿರದಲ್ಲೇ ಇರುವ ಮರ್ದಾನಪ್ಪ ಎಂಬುವರ ಟ್ರಾಕ್ಟರೊಂದರ ಬೋಲ್ಟ್ ನಟ್‌ನ್ನು ಖಾಜಾಬನಿಯವರ ಆರು ವರುಷದ ಮಗ ಅಮೀರ್ ಪಾಷಾ ಬಿಚ್ಚಿದ್ದಾನೆಂದು ಆತನನ್ನು ಮರ್ದಾನಪ್ಪ ಮತ್ತು ಮನೆಯ ಕೆಲವು ಹೆಂಗಸರು ಬೈಯ್ದುದ್ದಲ್ಲದೇ ಹೊಡೆದಿದ್ದಾರೆ. ಅಲ್ಲೇ ಇದು ಹುಡುಗನ ತಾಯಿ ಇದಕ್ಕೆ ಆಕ್ಷೇಪವೆತ್ತಿದ್ದಾಳೆ. ಇದು ಮಾತಿಗೆ ಮಾತು ಬೆಳೆದು ಮರ್ದಾನಪ್ಪ, ಆತನ ಮಗ ಕಾಶಪ್ಪ ಮುಂತಾದವರು ಕೂಡಿ ಖಾಜಬನಿಯನ್ನ ಹೊಡೆದಿದ್ದಲ್ಲದೆ ಆಕೆಯ ಸೀರೆಯನ್ನು ಬಿಚ್ಚಿ ಬೆತ್ತಲೆಗೊಳಿಸಲು ಮುಂದಾಗಿದ್ದಾರೆ. ಆಕೆ ಪ್ರತಿಭಟಿಸಿದಾಗ ಇನ್ನೂ ತೀವ್ರವಾಗಿ ಹೊಡೆದು ಜಾತಿ ಎತ್ತಿ ಅವಾಚ್ಯವಾಗಿ ಬೈಯ್ದಿದ್ದಾರೆ. ಗಾಯಗೊಂಡ ಖಾಜಾಬನಿ ಆಸ್ಪತ್ರೆಗೆ ದಾಖಲಾಗಿದ್ದಾಳೆ. ಆಕೆಯ ಸಂಬಂಧಿ ಘಟನೆಯ ಒಟ್ಟು ವಿವರ ನೀಡಿ ಪೊಲೀಸರಿಗೆ ದೂರು ನೀಡಿದ್ದಾರೆ. ಆಕೆಯ ಬಂಧುಗಳು ಪೊಲೀಸರು ಕೂಡಲೇ ಕ್ರಮ ಜರುಗಿಸಲು ಒತ್ತಾಯಿಸಿದ್ದಾರೆ. ಏನು ಕ್ರಮ ವಹಿಸುವರೆಂದು ಕಾದಿದ್ದಾರೆ. ಆದರೆ ದಿನವೆರಡಾದರೂ ಪೊಲೀಸ್ ಅಧಿಕಾರಿಗಳು ದೂರಿನಂತೆ ಹಲ್ಲೆಖೋರ ಪರಿವಾರದ ಮರ್ದಾನಪ್ಪ, ಕಾಶಪ್ಪನವರ ಮೇಲೆ ಕ್ರಮ ಜರುಗಿಲ್ಲ, ಬದಲಾಗಿ ನಿರ್ಲಕ್ಷಿಸಿದ್ದಾರೆ. ಇದರಿಂದ ಕುಪಿತಗೊಂಡ ಸುಮಾರು 100 ರಷ್ಟು ಜನ ಜುಲೈ 1 ರಂದು ಮರ್ದಾನಪ್ಪ, ಕಾಶಪ್ಪನವರ ಮನೆಗೆ ತೆರಳಿ ಹಲ್ಲೆ ನಡೆಸಿದ್ದಾರೆ. ಅವರಿಬ್ಬರು




ಪ್ರತಿಮೆಗೆ ಅವಮಾನ ಎಸಗಿದ ಕಾಶಪ್ಪ

ತಪ್ಪಿಸಿಕೊಂಡಿದ್ದಾರೆ. ಹಾರೆ ಬಡಿಗೆಗಳಿಂದ ಮನೆಯನ್ನು ಧ್ವಂಸ ಮಾಡಲು ಯತ್ನಿಸಲಾಯಿತೆಂದು ಮರ್ದಾನಪ್ಪನವರು ಹೇಳುತ್ತಾರೆ. ದಾಳಿಯಿಂದ ಹೆಂಚು, ಅಲ್ಮೇರಾದ ಕನ್ನಡಿ ಗೋಡೆ ಒಡೆದ ಕುರುಹುಗಳು ಕಂಡುಬರುತ್ತವೆ. ಈ ಮನೆ ಬಿಟ್ಟು ಬೇರಾವ ಕಡೆಗೂ ಹಾನಿ ಆಗಿಲ್ಲ ಎಂಬುದು ವಿಶೇಷ. ಮರ್ದಾನಪ್ಪನವರ ಮನೆಯಲ್ಲಿಯೂ ಮದುವೆ ಇದ್ದು, ಅಡುಗೆಯನ್ನು ಹಾಳು ಮಾಡಲಾಗಿದೆಯೆಂದು ದೂರು ನೀಡಿದ್ದಾರೆ. ಅಲ್ಲದೇ ಮದುವೆ ನಡೆಸಲು ಪೋಲೀಸರು ಪೂರ್ಣವಾದ ಭದ್ರತೆ ಒದಗಿಸಿದ್ದಾರೆ.

ಈ ಘಟನೆಗಳು ಮತ್ತೇ ಮುಂದುವರಿಯಲಾರದೆಂದು ಎರಡೂ ಕಡೆಯ ಮುಖಂಡರು, ಶಾಸಕ ಕರಡಿ ಸಂಗಣ್ಣ ಹಾಗೂ ಪೊಲೀಸರು ಮಧ್ಯಪ್ರವೇಶಿಸಿ ರಾಜಿ ಮಾಡಿದ್ದಾರೆ. ಈ ರಾಜಿ ಏರ್ಪಡುವುದರೊಂದಿಗೆ ಎಲ್ಲರೂ ಮುಗಿಯಿತೆಂದುಕೊಂಡಿದ್ದಾರೆ.

ಹುನ್ನಾರ

ಆದರೆ ಜುಲೈ 9 ರಂದು ಬೆಳಗಿನ ಜಾವ 5 ಗಂಟೆ ಸುಮಾರಿಗೆ ಗಾಬರಿಯಾದ ಸುದ್ದಿ ಹೊರಬಿದ್ದಿದೆ. ದಲಿತ-ಮುಸ್ಲಿಂ ಜನ ಹೆಚ್ಚಾಗಿ ವಾಸಿಸುವ ಕಾಲೋನಿಗಳ ನಡುವೆ ಇರುವ ಡಾ। ಅಂಬೇಡ್ಕರ್‌ರವರ ಪ್ರತಿಮೆಗೆ ಹಸಿರು ಬಣ್ಣ ಸುರಿದು, ಹಸಿರು ಬಳೆ ಇಡಲಾಗಿದೆ. ತಲೆಯ ಮೇಲೆ ಮೌಲ್ವಿಗಳು ಧರಿಸುವ ಹಸಿರು ಟೊಪ್ಪಿಗೆಯನ್ನು ಅಂಟಿಸಲಾಗಿದೆ. ಅಂದರೆ ಈ ಕೃತ್ಯವನ್ನು ಮುಸ್ಲಿಮರು ಎಸಗಿದ್ದಾರೆಂದು ಬಿಂಬಿಸುವುದು, ಆನಂತರ ದಲಿತರು-ಮುಸ್ಲಿಮರ ನಡುವೆ ಘರ್ಷಣೆ ಹುಟ್ಟುಹಾಕಿ, ಅದನ್ನು ಅನುಸರಿಸಿ ಕರ್ನಾಟಕದಲ್ಲಿ ಹಿಂದೂ-ಮುಸ್ಲಿಂ ಘರ್ಷಣೆಗಳನ್ನು ಹಬ್ಬಿಸುವುದು ಹುನ್ನಾರ.



ಪುರಸಭಾ ಮಾಜಿ ಅಧ್ಯಕ್ಷ ಶ್ರೀ ಖಾದ್ರಿ

ನಮ್ಮ ನಿಯೋಗ ಕಂಡಂತೆ ಈ ಕೃತ್ಯಗಳನ್ನು ಮುಸ್ಲಿಮರು ಖಂಡಿತ ಮಾಡುವ ಸಾಧ್ಯತೆಯಿಲ್ಲ. ಅದೂ ಬಹಳಷ್ಟು ಗೌರವಿಸುವ ಮೌಲ್ವಿ ಟೊಪ್ಪಿಗೆಯಂತಹ ಧಾರ್ಮಿಕ ಸಂಕೇತಗಳನ್ನು ಇದಕ್ಕೆ ಬಳಸುವುದು ಅಸಾಧ್ಯವೆನ್ನುತ್ತಾರೆ ಅಲ್ಲಿಯ ದಲಿತ ಹಾಗೂ ಮುಸ್ಲಿಂ ನಾಯಕರು. ಮೇಲಾಗಿ ಇಂತಹದ್ದನ್ನು ಮಾಡಿ ತಾವಾಗಿಯೇ ಮೈಮೇಲೆ ಯಾಕೆ ಹಾಕಿಕೊಳ್ಳುವರು ಎಂಬುದು ಸಹಜ ಪ್ರಶ್ನೆ. ಅಲ್ಲದೇ ಮುಸ್ಲಿಮರು ಈ ಕಡೆಗೆ ಬಂದು, ಮಾಡಿ ಹೋಗಲು ಅಲ್ಲಿ ಜನನಿಬಿಡ ಪ್ರದೇಶದಲ್ಲಿ ಅವಕಾಶ ಇಲ್ಲ. ಅಲ್ಲದೇ ಇಡೀ ಆ ಪ್ರದೇಶ ಹಾಗೂ ಕೊಪ್ಪಳ ಪಟ್ಟಣವೇ ದಲಿತ ಮತ್ತು ಮುಸ್ಲಿಮರ ನಡುವೆ ಉತ್ತಮ ಬಾಂಧವ್ಯವಿದೆ. ಅಲ್ಲಿಯ ಮಾಜಿ ಪುರಸಭಾ ಅಧ್ಯಕ್ಷ ಶ್ರೀ ಖಾದ್ರಿಯವರು ಹೇಳುವಂತೆ ನೂರು ವರುಷಗಳ ಹಿಂದಿನಿಂದಲೂ ಈ ಎರಡು ಸಮುದಾಯದ ನಡುವೆ ವಾಣಿಜ್ಯ-ವ್ಯವಹಾರಗಳಲ್ಲಿ ಸೌಹಾರ್ದತೆಯಿಂದ ಬಾಳುವ ಇತಿಹಾಸವಿದೆ ಎನ್ನುತ್ತಾರೆ. ಎಂ.ಪಿ., ಎಂಎಲ್ಎ ಚುನಾವಣೆಗಳಲ್ಲಿಯೂ ಒಂದಾಗಿಯೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರಂತೆ. ಆದ್ದರಿಂದ ಘಟನೆ ಬೆಳಕಿಗೆ ಬಂದ ದಿನದಂದೇ ದಲಿತ ಸಂಘಟನೆಗಳು ಪ್ರತಿಭಟನೆಗೆ ಮುಂದಾದರೂ ನಗರದ ನಾಗರೀಕರು, ವಾಣಿಜ್ಯೋದಮಿಗಳು ಅಷ್ಟಾಗಿ ಸ್ಪಂದಿಸಿಲ್ಲ. ಬದಲಾಗಿ ಇದು ತೀರಾ ವೈಯಕ್ತಿಕವಾದ ದ್ವೇಷ ಸಾಧನೆಯದ್ದು ಎಂದೇ ವಿರೋಧಿಸಿದ್ದಾರೆ.

ಅಂದರೆ ಇದನ್ನು ಮಾಡಿದವರ್‍ಯಾರು? ನಮ್ಮ

ಪುಟ 4 ಕ್ಕೆ



ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಜಿ.ಎನ್.ನಾಗರಾಜ್

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಸಭೆ ದಿನಾಂಕ 13.7.02ರಂದು ಕೆ.ಆರ್. ಶ್ರೀಯಾನ್ ಅಧ್ಯಕ್ಷತೆಯಲ್ಲಿ ನಡೆದು ಜಿ.ಎನ್. ನಾಗರಾಜ್ ಅವರನ್ನು ರಾಜ್ಯ ಕಾರ್ಯದರ್ಶಿಯನ್ನಾಗಿ ಆಯ್ಕೆಮಾಡಿದೆ.

ಸೂರ್ಯನಾರಾಯಣರಾವ್ ಅವರ ನಿಧನದಿಂದಾಗಿ ತೆರವಾಗಿರುವ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಸ್ಥಾನದಲ್ಲಿ ಜಿ.ಎನ್.ನಾಗರಾಜ್ ಅವರನ್ನು ಆಯ್ಕೆ ಮಾಡಲಾಗಿದೆ. ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ.ನಾಯರ್‌ರವರು ಅವರ ಹೆಸರನ್ನು ಸೂಚಿಸಿದ್ದು, ಕೆ.ಆರ್.ಶ್ರೀಯಾನ್ ಅನುಮೋದಿಸಿದ್ದಾರೆ. ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರ ಪಿಳ್ಳೈ, ಕೇಂದ್ರ ಸಮಿತಿ ಸದಸ್ಯರಾಗಿರುವ ಎಂ.ಎ. ಬೇಬಿ ಹಾಗೂ ಕೆ. ವರದರಾಜನ್ ಅವರು ಉಪಸ್ಥಿತರಿದ್ದರು.

ಜಿ.ಎನ್. ನಾಗರಾಜ್ ಅವರ ಸಂಕ್ಷಿಪ್ತ ಪರಿಚಯ

ಹೊಸದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿರುವ ಜಿ.ಎನ್. ನಾಗರಾಜ್ (50 ವರ್ಷ) ಅವರು ಪಕ್ಷದ ವಲಯಗಳಲ್ಲಿ ಜಿ.ಎನ್. ಎಂದೇ ಪ್ರಚಲಿತರಾದ ಗೂಳೂರು ನರಸಯ್ಯ ನಾಗರಾಜ್ ಅವರು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದಿಂದ 1973ರಲ್ಲಿ ಸ್ನಾತಕೋತ್ತರ ಪದವಿ ಎಂ.ಎಸ್ಸಿ (ಅಗ್ರಿ) ಪಡೆದಿದ್ದಾರೆ. ಅದೇ ವರ್ಷ ಕೆಲಸಕ್ಕೆ ಸೇರಿದರು. ನಂತರ ಸಹಾಯಕ ನಿರ್ದೇಶಕರಾಗಿ ಹಾಗೂ ಉಪ ನಿರ್ದೇಶಕರಾಗಿ ಪದೋನ್ನತಿ ಪಡೆದರು.

1978ರಲ್ಲಿ ಧಾರವಾಡ ಜಿಲ್ಲೆಯ ನರಗುಂದ ತಾಲೂಕದಲ್ಲಿ ಕೆಲಸ ಮಾಡುತ್ತಿರುವ ಕಾಲದಲ್ಲೇ ರೈತರ ಧೀರ ಹೋರಾಟವು ಬೆಟರ್‌ಮೆಂಟ್ ತೆರಿಗೆ ಹೇರಿಕೆ ವಿರುದ್ಧ, ಕೃಷಿ ಉತ್ಪನ್ನಗಳ ಬೆಲೆ ಕುಸಿತದ ವಿರುದ್ಧ ಭುಗಿಲೆದ್ದಿತ್ತು. ಇಡೀ ರಾಜ್ಯದ ಗಮನ ಸೆಳೆದ ಮತ್ತು ರಾಜ್ಯದ ರಾಜಕೀಯದ ಮೇಲೆ ಪರಿಣಾಮ ಬೀರಿದ ನರಗುಂದ ರೈತರ ಹೋರಾಟದ ಮೇಲೆ ಗುಂಡುರಾವ್ ನೇತೃತ್ವದ ಅಂದಿನ ಕಾಂಗ್ರೆಸ್ ಸರಕಾರ, ಲಾಠಿಚಾರ್ಜ್, ಗುಂಡಿನ ಸುರಿಮಳೆ ಮತ್ತು ತೀವ್ರ ಧಮನವನ್ನು ನಡೆಸಿತು. ಇದನ್ನು ಕಂಡ ಕಾಂ। ನಾಗರಾಜ್ ಅವರು 1983ರಲ್ಲಿ ಸರಕಾರಿ ಅಧಿಕಾರಿ ಹುದ್ದೆಗೆ ರಾಜಿನಾಮೆ ನೀಡಿ ಸಿಪಿಐ(ಎಂ)ನ ಪೂರ್ಣ ಕಾಲದ ಕಾರ್ಯಕರ್ತರಾಗಿ ಚಳುವಳಿಯ ಹಾದಿಗಿಳಿದರು. 1988 ರಲ್ಲಿ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. 1989 ರಲ್ಲಿ ಮತ್ತು 1995 ರ ನಂತರ ಕಾರ್ಯದರ್ಶಿ ಮಂಡಳಿ ಸದಸ್ಯರಾದರು.

ನಂತರ ಪಕ್ಷದ ಶಾಸಕಾಂಗ ವಿಭಾಗದ ಕಾರ್ಯದರ್ಶಿಯಾಗಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಮುಖಂಡರಾಗಿ ಕೆಲಸ ಮಾಡಿದ ಅವರು, ಈಗ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಸಮಿತಿ ಅಧ್ಯಕ್ಷರಾಗಿ ದುಡಿಯುತ್ತಿದ್ದಾರೆ. ಐಕ್ಯರಂಗ ಪತ್ರಿಕೆಯ ಸಂಪಾದಕರಾಗಿದ್ದರು. ಈಗ ರಾಜ್ಯ ಸಮಿತಿಯ ಪರವಾಗಿ ಪತ್ರಿಕೆಯ ಪ್ರಕಾಶಕರಾಗಿದ್ದಾರೆ.

ಕೋಮುವಾದಿಗಳನ್ನು ಕೈಬಿಟ್ಟ ಸರ್ಕಾರ:

ಪೋಲೀಸರು ಆರೋಪಿಗಳನ್ನು ಪತ್ತೆಹಚ್ಚಿದ್ದು ಸ್ವಾಗತಾರ್ಹ. ಆದರೆ ಕೈಬಿಟ್ಟ ಇನ್ನೊಂದು ಅಂಶವೆಂದರೆ ಇಬ್ಬರ ನಡುವಿನ ಜಗಳವನ್ನು ಬಳಸಿ ಕೋಮುಗಲಭೆ ಹಬ್ಬಿಸಲು ಷಡ್ಯಂತ್ರ ರೂಪಿಸಿದ ಸಂಘ ಪರಿವಾರ, ಬಿಜೆಪಿ ನಾಯಕರ ಕೃತ್ಯಗಳನ್ನು ಗೌಣಗೊಳಿಸಿರುವುದು ಅಥವಾ ನಿರ್ಲಕ್ಷಿಸಿರುವುದು ಕೊಪ್ಪಳದಲ್ಲಿ ಇದೇ ಶಕ್ತಿಗಳು ಸತತವಾಗಿ ಗಣೇಶಹಬ್ಬ ಮುಂತಾದ ಸಂದರ್ಭ ಬಳಸಿ ಗಲಭೆ ಎಬ್ಬಿಸಲು ಪ್ರಯತ್ನಿಸುತ್ತಲೇ ಬಂದಿವೆ. ಆದುದರಿಂದ ಇದರತ್ತ ಗಂಭೀರ ಹೆಜ್ಜೆ ಇರಿಸುವುದು ಅತ್ಯಗತ್ಯ. ತನಿಖೆ ಇನ್ನೂ ಮುಂದುವರಿಯಬೇಕು. ಪೂರ್ಣ ತನಿಖೆಯಾದರೆ ಕೊಪ್ಪಳದ ಸ್ಥಳೀಯ ರಾಜಕೀಯ ನಾಯಕರ ಪಾತ್ರ ಸಹ ಬಯಲಿಗೆ.



ಸ್ಥಳಕ್ಕೆ ಭೇಟಿ ನೀಡಿದ್ದ [illegible] ಎಸ್.ವೈ.ಗುರುಶಾಂತ್ [illegible]

ಎಡರಂಗ ಸರ್ಕಾರಕ್ಕೆ 25 ವರ್ಷ

ಬೆಂಗಳೂರಿನಲ್ಲೂ ಸಡಗರ

ಎನ್.ಪ್ರಭಾ



ಜೂನ್ 21, ದೇಶದ ಮಾತ್ರವಲ್ಲದೆ ವಿಶ್ವದ ರಾಜಕೀಯ ರಂಗದಲ್ಲಿ ಐತಿಹಾಸಿಕ ದಾಖಲೆಯೊಂದನ್ನ ಸಮೂದಿಸಿದ ಮಹತ್ವದ ದಿನ. ಅಂತೆಯೆ ದುಡಿಯುವ ಜನತೆಗೆ ಬದುಕಿನ ಭರವಸೆಯನ್ನು ಮೂಡಿಸುವ ವಿಶೇಷ ದಿನ.

ದುಡಿವ ಜನರ ಹಿತಾಸಕ್ತಿ, ಪ್ರಜಾಪ್ರಭುತ್ವ ಹಕ್ಕುಗಳು ಕೋಮು ಸೌಹಾರ್ದತೆಯನ್ನು ಆದ್ಯತೆಯಾಗಿರಿಸಿಕೊಂಡು ಪರ್ಯಾಯ ಮಾರ್ಗದತ್ತ ಹೆಜ್ಜೆ ಇಟ್ಟು ಪ. ಬಂಗಾಳದ ಎಡರಂಗ ಸರ್ಕಾರ ತಾನು ಆರಿಸಿಕೊಂಡ ವಿಶಿಷ್ಟ ಹಾದಿಯಲ್ಲಿ 25 ವರುಷಗಳನ್ನು ಯಶಸ್ವಿಯಾಗಿ ಪೂರೈಸಿದ ಹರುಷದ ದಿನ ಜೂನ್ 21.

ಯಾವುದೇ ಸರ್ಕಾರ ನಿರಂತರ 25 ವರ್ಷ ಆಡಳಿತ ಚುಕ್ಕಾಣಿ ಹಿಡಿಯುವುದೆಂದರೆ ಸಾಮಾನ್ಯವಾದ ವಿಷಯವಲ್ಲ. ಹಾಗೆಯೆ 23 ವರ್ಷಗಳ ಕಾಲ ಒಬ್ಬರೇ ಮುಖ್ಯಮಂತ್ರಿಗಳು ಅಧಿಕಾರ ನಿರ್ವಹಿಸಿದ್ದು ಸುಲಭದ ವಿಚಾರವಲ್ಲ.

ಒಪ್ಪಂದದ ಮೇರೆಗೆ ಕಾಲಾವಧಿಗಳನ್ನು ನಿಗದಿಪಡಿಸಿಕೊಂಡು ಪಂಚಾಯ್ತಿಯಿಂದ ಪಾರ್ಲಿಮೆಂಟಿನ ತನಕ ಅಧಿಕಾರ ಹಂಚಿಕೊಳ್ಳುವ ಸಂದರ್ಭಸಾಧಕ 'ಅಧಿಕಾರದಾಹಿ' ರಾಜಕಾರಣವನ್ನೆ ಸುತ್ತ ಮುತ್ತಲೂ ಕಾಣುತ್ತಿರುವ ಸನ್ನಿವೇಶದಲ್ಲಿ ಪ. ಬಂಗಾಳದ ಎಡರಂಗ ಸರ್ಕಾರ ದೇಶಕ್ಕೆ ಮಾದರಿಯಾದ ಪರ್ಯಾಯ ಸರ್ಕಾರ.

ತುತ್ತೂರಿ ಊದಿಕೊಳ್ಳುವವರ ನಡುವೆ

ಮಂತ್ರಿಮಂಡಲದ ಪುನರ್ರಚನೆ, ವಿಸ್ತರಣೆ, ಖಾತೆಗಳ ಮರುಹಂಚಿಕೆ, ಖಾತೆಗಳಲ್ಲಿ ಖಾತೆಗಳ ಸೃಷ್ಟಿ, ಅಸಂತೃಪ್ತರಿಗೆ ಆ ಬೋರ್ಡಿನ ಈ ಬೋರ್ಡಿನ ಅಧ್ಯಕ್ಷಗಿರಿ, ಮಂಡಳಿ ನಿಗಮಗಳ ರಚನೆ ಮುಂತಾದ ಆಸೆಯಬಲೆಗಳನ್ನು ಬೀಸಿ ಭಿನ್ನಮತವನ್ನು ಓಲೈಸಿಕೊಂಡು (ಇದೇ ದೊಡ್ಡ ಸಾಧನೆ) ಒಂದು ಬಾರಿ ಅಧಿಕಾರಾವಧಿಯನ್ನು ಪೂರೈಸಿದರೆ ಐರಾವತ ಗೆದ್ದ ಇಂದ್ರನ ಹಾಗೆ ದೇಶಕ್ಕೆಲ್ಲಾ ಡಂಗೂರ ಹೊಡೆಯುವ ಬಂಡವಾಳಶಾಹಿ ಪರ ಸರ್ಕಾರಗಳೇನಾದರು ನಿರಂತರ 25 ವರ್ಷ ಪೂರೈಸಿದ್ದಿದ್ದರೆ, ಜ್ಯೋತಿಬಸುರವರ ರೀತಿಯಲ್ಲಿ ಒಬ್ಬರೇ ಮುಖ್ಯಮಂತ್ರಿಗಳಾಗಿದ್ದಿದ್ದರೆ ಯಾವ ಮಟ್ಟದ ಪ್ರಚಾರ ಇರುತ್ತಿತ್ತೆಂಬುದನ್ನ ಒಮ್ಮೆ ಊಹಿಸಿ ನೋಡಿ.

ಶ್ರೀಮಂತರ ಸಲುವಾಗಿ ಅಧಿಕಾರ ನಡೆಸುವ ಬಲಪಂಥೀಯ ಪಕ್ಷಗಳು ಒಂದು ವರ್ಷ ಪೂರೈಸುತ್ತಿದ್ದಂತೆ 'ಟೊಂಕ ಕಟ್ಟಿ ನಿಂತು ತುತ್ತೂರಿ ಊದುವ' ದೃಶ್ಯ ಮಾಧ್ಯಮ ಗಳಿಗಾಗಲಿ ಮುದ್ರಣ ಮಾಧ್ಯಮ ಗಳಿಗಾಗಲಿ ಎಡರಂಗ ಸರ್ಕಾರದ ಸಾಧನೆಗಳು ತೃಣಕ್ಕೆ ಸಮಾನವಾದವು. ತೃಣಮೂಲದ ಮಮತಾ ಬ್ಯಾನರ್ಜಿ ಆಚರಿಸಿದ ಕಪ್ಪುದಿನ ಪ್ರಮುಖವಾದವು. ಚುನಾವಣಾ ಸಂದರ್ಭದಲ್ಲಿ ಮೈಕೊಡವಿ ನಿಂತು ಮಮತಾ ಬ್ಯಾನರ್ಜಿಯನ್ನು ನಾಯಕಿಯಾಗಿ ಬಿಂಬಿಸಿದ ಮಾಧ್ಯಮಗಳು 'ಜನತೆಯ ತೀರ್ಪಿನ' ಮೇರೆಗೆ 25 ವರ್ಷ ಅಧಿಕಾರ ನಡೆಸಿದ ಸರ್ಕಾರವೊಂದರ ಸಾಧನೆಯನ್ನು ಪ್ರಜ್ಞಾಪೂರ್ವಕವಾಗಿ ಮರೆಮಾಚುತ್ತಿರುವುದರ ಔಚಿತ್ಯವೇನಿರಬಹುದು? ಏನಾದರು ಅವುಗಳು ಸಹ ಈ ವ್ಯವಸ್ಥೆಯ ಅಸ್ತ್ರಗಳು ತಾನೆ. ಹಾಗಾಗಿ ಸುಲಿಗೆಕೋರರ ಪರ.

ಆದರೇನಂತೆ ಪ್ರಜಾಸತ್ತೆಯಲ್ಲಿ ನಂಬಿಕೆಯಿಟ್ಟಿರುವ ದೇಶದ ಪ್ರಜ್ಞಾವಂತ ನಾಗರಿಕರು, ಶ್ರಮಜೀವಿಗಳು, ಕೋಮುಸಾಮರಸ್ಯದ ಬಯಕೆ ಹೊತ್ತವರು ಯಾವ ತುತ್ತೂರಿಗಳಿಗೂ ಕಾಯಲಿಲ್ಲ. ವಿಶ್ವಕಪ್ ಪುಟ್‌ಬಾಲ್ ಪಂದ್ಯಾವಳಿಯನ್ನು ನಾಚಿಸುವ ರೀತಿಯಲ್ಲಿ ಎಡರಂಗ ಸರ್ಕಾರದ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. 25ರ ಹರೆಯದ ಎಡರಂಗಕ್ಕೆ ಮನಃಪೂರ್ವಕ ಹರಸಿದರು. ದೀರ್ಘಕಾಲೀನ ಪಯಣಕ್ಕೆ ಬುತ್ತಿಕಟ್ಟಿದರು. ಸರ್ಕಾರದ ಜನಪರ ಸಾಧನೆಗಳನ್ನ ಪ್ರಚುರಪಡಿಸಲು ತಾವೇ ಮಾಧ್ಯಮಗಳಾದರು, ವಾಹಕಗಳಾದರು ದುಡಿವ ಜನರು. ಅಪರೂಪ ಸರ್ಕಾರವೊಂದರ ಬೆಳ್ಳಿಹಬ್ಬವನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಇದರ ಭಾಗವಾಗಿ ಜೂನ್ 30 ರಂದು ಬೆಂಗಳೂರಿನಲ್ಲಿ ಸಹ ಎ.ಡಿ.ಎ ರಂಗಮಂದಿರದಲ್ಲಿ ಕಿಕ್ಕಿರಿದು ಸೇರಿದ್ದ ಸಭಾಂಗಣದಲ್ಲಿ ಸಮಾರಂಭ ಜರುಗಿತು.

ನಮ್ಮ ನಡುವೆ ಬಂದರು ಹಿರಿಯ ಸಚಿವರು

ಪ.ಬಂಗಾಳದ ಎಡರಂಗ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿರುವ ಪ್ರೊ. ಸತ್ಯಸಾದನ ಚಕ್ರವರ್ತಿಯವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಶಿಕ್ಷಣ , ಆರೋಗ್ಯ, ಕೃಷಿ, ಕೈಗಾರಿಕೆ ಭೂಸುಧಾರಣೆ, ಔದ್ಯೋಗಿಕ ಕ್ಷೇತ್ರಗಳಲ್ಲಿನ ಸರ್ಕಾರದ ಸಾಧನೆಗಳನ್ನು ಪಟ್ಟಿಮಾಡಿದ ಸಚಿವರು ದಲಿತರು, ಅಲ್ಪಸಂಖ್ಯಾತರು, ಆದಿವಾಸಿಗಳು, ಮಹಿಳೆಯರ ಹಕ್ಕುಗಳನ್ನು ರಕ್ಷಣೆಯ ಸಲುವಾಗಿ ಸರ್ಕಾರ ತೆಗೆದುಕೊಂಡ ನಿಲುವುಗಳ ಕುರಿತಾಗಿಯೂ ಬಣ್ಣಿಸಿದರು. ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ, ಕೋಮುಸಾಮರಸ್ಯಕ್ಕೆ ಹೆಸರಾಗಿರುವ ಪ. ಬಂಗಾಳ ಇಷ್ಟೆಲ್ಲಾ ಸಾಧನೆಗಳನ್ನು ಮಾಡುವ ಸಲುವಾಗಿ ಅಪಾರ ಸಂಖ್ಯೆಯ ಸಂಗಾತಿಗಳನ್ನು ಕಳೆದುಕೊಳ್ಳಬೇಕಾಯಿತೆಂದು ದುಃಖಿಸಿದರು.

ಉಗ್ರಗಾಮಿಗಳ, ರಾಜಕೀಯ ವಿರೋಧಿಗಳ ಭೂಮಾಲಿಕ ಬಂಡವಾಳಿಗರ ನಿರಂತರ ದಾಳಿ ದಬ್ಬಾಳಿಕೆ ಗೂಂಡಾಗಿರಿಯಿಂದಾಗಿ ಪಕ್ಷದ ಅಸಂಖ್ಯ ಮುಖಂಡರು, ಸದಸ್ಯರು ಹಿತೈಷಿಗಳನ್ನು ಈಗಲು ಕಳೆದುಕೊಳ್ಳುತ್ತಿರುವ ಕುರಿತಾಗಿ ತಿಳಿಸುತ್ತಾ ಪ. ಬಂಗಾಳದ ನಾಗರಿಕರ ಪ್ರಜ್ಞಾವಂತಿಕೆಯನ್ನು ಶ್ಲಾಘಿಸಿದರು. ಪ.ಬಂಗಾಳದ ಎಡರಂಗ ಕೇವಲ 'ಚುನಾವಣಾ ರಂಗ' ಮಾತ್ರವಾಗಿರದೆ ದುಡಿಯುವ ಜನರ ಪರವಾದ ಪರ್ಯಾಯ ವ್ಯವಸ್ಥೆಗಾಗಿ ಹೋರಾಟ ನಡೆಸುವ ರಂಗವೂ ಹೌದೆಂದರು.

ಅಕ್ರಮ ರಾಜಕೀಯ, ಅನೈತಿಕ ಹೊಂದಾಣಿಕೆಗಳು, ಸಂದರ್ಭಸಾಧಕ ಮೈತ್ರಿಗಳು, ಹಣ ಅಧಿಕಾರದ ಲಾಲಸೆಯಿಂದ ದೇಶವನ್ನೇ ಹರಾಜು ಕೂಗುತ್ತಾ ಜನತೆಯ ಹಿತಾಸಕ್ತಿಗಳನ್ನು ಸಂಪೂರ್ಣ ಹೊಸಕಿಹಾಕುವ ಪಾಪಸ್ ಮುಳ್ಳುಗಳ ನಡುವಿನಲ್ಲಿ ಅರಳಿನಿಂತಿರುವ ಅಪರೂಪದ ಈ ಹೂವು ಎಲ್ಲೆಡೆ ಪರಿಮಳವನ್ನರಡಲಿ ಎಂದು ಆಶಿಸೋಣ.

ಸಮಾರಂಭದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ. ನಾಯರ್, ಬಯ್ಯಾರೆಡ್ಡಿ ಪ್ರಸನ್ನಕುಮಾರ್ ಪಾಲ್ಗೊಂಡಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಉಪಸ್ಥಿತರಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್ ವಹಿಸಿದ್ದರು.

ಸಮಾರಂಭಕ್ಕೆ ಮೀನಾಕ್ಷಿ ಸುಂದರಂ ಸ್ವಾಗತಿಸಿ, ಗೋಪಾಲ ಕೃಷ್ಣ ಅರಳಹಳ್ಳಿ ವಂದಿಸಿದರು. ಎನ್. ಪ್ರಭಾ ಕಾರ್ಯಕ್ರಮ ನಿರೂಪಿಸಿದರು.

ಪಶ್ಚಿಮ ಬಂಗಾಳದ ಸಾಧನೆ

I. ದೇಶದ ಒಟ್ಟು ಕೃಷಿ ಭೂಮಿಯಲ್ಲಿ ಶೇ. 3.5 ರಷ್ಟು ಪಾಲು ಮಾತ್ರವೇ ರಾಜ್ಯದ್ದು. ದೇಶಾದ್ಯಂತ ಜಾರಿಯಾದ ಭೂಸುಧಾರಣೆಯಲ್ಲಿನ ಪಾಲು ಶೇ 18 ರಷ್ಟು.

- ★ ಇದರಲ್ಲಿ ಶೇ 55 ಫಲಾನುಭವಿಗಳು ದಲಿತರು ಮತ್ತು ಆದಿವಾಸಿಗಳು
- ★ ಮಹಿಳೆಯರ ಸಲುವಾಗಿ 5.5 ಲಕ್ಷ ಜಂಟಿ ಪಟ್ಟಾಗಳು.

II. ಪಂಚಾಯತ್ ರಾಜ್ ಜಾರಿಗೆ ತಂದು ಜನತೆಯ ಕೈಗೆ ಅಧಿಕಾರ ನೀಡಿ ದೀರ್ಘಕಾಲ ಮುನ್ನಡೆಸಿದ ಕೀರ್ತಿಗೆ ಸರ್ಕಾರ ಪಾತ್ರ

- ★ ಸ್ಥಳೀಯ ಸಂಸ್ಥೆಗಳಲ್ಲಿ ಶೇ 75-90 ರಷ್ಟು ಪ್ರತಿನಿಧಿಗಳು ಭೂಹೀನರು ಮತ್ತು ಸಣ್ಣ ಹಿಡುವಳಿದಾರರು
- ★ 1/3 ಅಧ್ಯಕ್ಷ ಸ್ಥಾನಗಳು ಮಹಿಳೆಯರಿಗಾಗಿ ಮೀಸಲು
- ★ 90 ರ ನಂತರ 'ಗ್ರಾಮ ಸಂಸದ್'ಗಳನ್ನು ರಚಿಸುವ ಮೂಲಕ ಪಂಚಾಯತಿರಾಜ್ ಮತ್ತೂ ಬಲಿಷ್ಟ
- ★ ಸರ್ಕಾರಿ ಯೋಜನೆ ಶೇ 50 ರಷ್ಟು ಪಾಲು ನೇರ ಜಿಲ್ಲೆಗಳಿಗೆ

III. 1977 ರಲ್ಲಿ ದೇಶದ ಉತ್ಪಾದನೆಯಲ್ಲಿ ಕೇವಲ ಶೇ 6 ಪಾಲು. ಪ್ರಸ್ತುತ ದೇಶದಲ್ಲೇ ಅಗ್ರಸ್ಥಾನ.

- ★ ಇತರೆ ರಾಜ್ಯಗಳಿಗಿಂತ ರಾಜ್ಯದ ಕೃಷಿ ಕೂಲಿಕಾರರಿಗೆ ಗರಿಷ್ಟ ಕೂಲಿ.
- ★ ಗ್ರಾಮೀಣರ ಬದುಕಿಗೆ ನೆರವಾದ ವಿಪುಲ ಮೀನುಗಾರಿಕೆ
- ★ ಇಳಿಮುಖವಾಗುತ್ತಿರುವ ಗ್ರಾಮೀಣ ಬಡತನ-ತಲಾದಾಯದಲ್ಲಿ ಗಣನೀಯ ಹೆಚ್ಚಳ

IV. 76-77 ರಲ್ಲಿ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ವೆಚ್ಚ ಶೇ 12 ರಷ್ಟು. 2000-2001 ರಲ್ಲಿ ಮೀಸಲಿರಿಸಿದ್ದು ಶೇ 25 ರಷ್ಟು.

- ★ 77 ರಿಂದ 92 ರ ಅವಧಿಗೆ ಶಾಲಾ ದಾಖಲಾತಿ ಪ್ರಮಾಣ ಶೇ 80 ಕ್ಕೆ ಏರಿಕೆ.
- ★ ಶೇ 61 ವಿದ್ಯಾರ್ಥಿನಿಯರು ಶಾಲೆಯ ಕಡೆಗೆ. ಸಾರ್ವತ್ರಿಕ ಶಿಕ್ಷಣ ಪದ್ಧತಿಗೆ ಆದ್ಯತೆ

V. 1999 ರ ಪ್ರಕಾರ ದುರ್ಮರಣಗಳ ಸಂಖ್ಯೆ, ಅತ್ಯಂತ ಕಡಿಮೆ ಇರುವ ಕೇರಳ ರಾಜ್ಯದ ನಂತರ ಎರಡನೆಯ ಸ್ಥಾನ.

- ★ ಶೇ 70 ಜನರನ್ನು ತಲುಪುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆ.
- ★ ಕಡಿಮೆ ಜನನ ಪ್ರಮಾಣದ ಮೂರನೇ ಸ್ಥಾನ.

VI. 32,000 ದಲಿತ, 28,000 ಆದಿವಾಸಿ ವಿದ್ಯಾರ್ಥಿಗಳಿಗೆ ಪಿಯುಸಿವರೆಗೆ ಹಾಸ್ಟೆಲ್ ಸೌಲಭ್ಯ.

- ★ 50,000 ಮಹಿಳೆಯರಿಗೆ ವಿಧವಾ ಮತ್ತು ವೃದ್ಧಾಪ್ಯ ವೇತನ. 1 ಲಕ್ಷ ಮಹಿಳೆಯರಿಗ ಆರ್ಥಿಕ ನೆರವು.
- ★ ಕೋಮುಸಾಮರಸ್ಯಕ್ಕೆ ಹೆಸರಾದ ರಾಜ್ಯ
- ★ ಅಲ್ಪಸಂಖ್ಯಾತರಿಗೆ ಭಯಮುಕ್ತ ವಾತಾವರಣ.

VII. ಭ್ರಷ್ಟಾಚಾರ ಮುಕ್ತ - ಪಾರದರ್ಶಕ ಆಡಳಿತ

- ★ ಇಷ್ಟೆಲ್ಲಾ ಜನಪರ ಸಾಧನೆಗಳ ಹಿಂದೆ ಸಾವಿರಾರು ಸಂಗಾತಿಗಳ ಬಲಿದಾನ. ಭಯೋತ್ಪಾದಕರಿಂದ, ರಾಜಕೀಯ ವಿರೋಧಿಗಳಿಂದ ನಿರಂತರ ಹತ್ಯೆ. ತೆತ್ತ ಬೆಲೆ ಅಪಾರ.

ಅಂಬೇಡ್ಕರ್ ಪ್ರತಿಮೆಗೆ ಅವಮಾನ.......

ಪುಟ 3 ರಿಂದ

ನಿಯೋಗವು ಹಲವರೊಂದಿಗೆ ಮಾತನಾಡಿದಾಗ ಹೆಸರು ಹೇಳದೇ ಕೆಲವರನ್ನು ಗುರುತಿಸಿದರು. ಮರ್ದಾನಪ್ಪ ಹಾಗೂ ಖಾಜಾಬನಿ ಕುಟುಂಬದ ನಡುವೆ ನಡೆದು ಹೋದ ಕಲಹದ ನಂತರದಲ್ಲಿ ಇದನ್ನು ಕೋಮುಗಲಭೆಗೆ ತಿರುಗಿಸಲು ಕೆಲವರು ಮುಂದಾಗಿದ್ದಾರೆ. ಮರ್ದಾನಪ್ಪ ಸೇಡು ತೀರಿಸಿಕೊಳ್ಳಲು ಯತ್ನಿಸಿರುವುದು ಕಂಡಿತು. ನಮ್ಮ ನಿಯೋಗ ಅನುಮಾನಪಟ್ಟಂತೆ ಈ ಎಲ್ಲಾ ಕೃತ್ಯಗಳನ್ನು ಮರ್ದಾನಪ್ಪಾ, ಅವರ ಮಗ ಕಾಶಪ್ಪ ಭಾಗಿಯಾದ್ದದ್ದು ಬಯಲಾಗಿದೆ. ಅಂದಿನ ರಾತ್ರಿ ಟೋಪಿ ಇಟ್ಟು ಬಣ್ಣ ಬಳಿದಿರುವುದರಲ್ಲಿ ದಲಿತರಾದ ಮರ್ದಾನಪ್ಪ, ಅವರ ಮಗ ಕಾಶಪ್ಪ, ಗವಿಸಿದ್ದಪ್ಪ, ಮಂಜಪ್ಪ, ಬಸವರಾಜ, ಸತೀಶ್ ಅಲಿಯಾಸ್ ಮುದಿಯ ಮುಂತಾದವರು ಭಾಗಿಯಾಗಿದ್ದಾರೆ. ಇವರೇ ಬೆಳಗಿನ ಜಾವ ಸುದ್ದಿ ಹಬ್ಬಿಸಿದ್ದಲ್ಲದೇ ಅವಮಾನ ಖಂಡಿಸಿ ಪ್ರತಿಭಟನೆಯನ್ನು ನಡೆಸಿದರು. ಈ ಕಾಶಪ್ಪ ದಲಿತ ಸಂಘರ್ಷ ಸಮಿತಿಯ ನಾಯಕ. ಆಶ್ರಯ ಸಮಿತಿ ಸದಸ್ಯ ,ಹಣ- ರಾಜಕೀಯದಲ್ಲಿ ಗಟ್ಟಿಗರು. ಪ್ರಭಾವಿಗಳು. ಮತ್ತು 'ದೌರ್ಜನ್ಯ ಇವರ ನಿತ್ಯ ಕರ್ಮ ಎನ್ನುತ್ತಾರೆ ಜನ. ಅಂತೂ ಒಗಟಾಗಿದ್ದ ಕೊನೆಗೆ ಪೋಲೀಸ್ ಇಲಾಖೆ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.

ಮರೆತ ದೌರ್ಜನ್ಯ

ಇವೆಲ್ಲಾ ಗದ್ದಲ-ಕೂಗಾಟ, ಪ್ರತಿಭಟನೆ ತನಿಖೆಗಳ ನಡುವೆ ನಿರ್ಲಕ್ಷ್ಯಕ್ಕೆ ಒಳಗಾದದ್ದು ತೀವ್ರ ಹೊಡೆತ ತಿಂದು ಈಗಲೂ ಚೇತರಿಸಿಕೊಳ್ಳಲು ಹೆಣಗುತ್ತಿರುವ ಖಾಜಬನಿ ಮೇಲಾದ ದೌರ್ಜನ್ಯ ಮರೆಯಾಗುತ್ತಿರುವುದು. ಆಕೆ ಮೂಲತಃ ಹೆಣ್ಣು ಮಗಳು. ಅಲ್ಲದೇ ಮುಸ್ಲಿಂ ಮಹಿಳೆ. ಇವು ನಿರ್ಲಕ್ಷಿಸಲು ಕಾರಣಗಳು. ಈಗಲಾದರೂ ಪೋಲೀಸ್ ಇಲಾಖೆ ಪೂರ್ಣವಾದ ದೂರನ್ನು ದಾಖಲಿಸಿಕೊಂಡು ಕಠಿಣ ಕ್ರಮವನ್ನು ಮರ್ದಾನಪ್ಪ, ಕಾಶಪ್ಪನವರ ಮೇಲೆ ಜರುಗಿಸಬೇಕಿದೆ.

ರಾಷ್ಟ್ರಪತಿ ಆಯ್ಕೆ

ಮುಗಿದ ಚುನಾವಣೆ-ಮುಂದುವರಿದ ಹೋರಾಟ

ರಾಷ್ಟ್ರಪತಿಯಾಗಿ ಡಾ.ಕಲಾಂ ನಿರೀಕ್ಷೆಯಂತೆ ಆಯ್ಕೆಯಾಗಿದ್ದಾರೆ. ಚುನಾವಣೆ ಮುಗಿದಿದೆ. ಆದರೆ ಈ ಸಂದರ್ಭದಲ್ಲಿ ಎತ್ತಿದ ಪ್ರಶ್ನೆಗಳು, ದೇಶದ ಆತಂಕಗಳು ಮುಗಿದಿಲ್ಲ. ಹೀಗಾಗಿ ಸಂಘ ಪರಿವಾರದಿಂದ ಮುಂದಿನ ದಿನಗಳಲ್ಲಿ ಒದಗಲಿರುವ ಅಪಾಯಗಳ ವಿರುದ್ಧ ದೇಶ ಉಳಿಸಲು ಹೋರಾಟ ಮುಂದುವರಿಯಬೇಕಿದ.

ಸೀತಾರಾಂ ಯೆಚೂರಿ

ಐತಿಹಾಸಿಕ ರಾಷ್ಟ್ರಪತಿ ಚುನಾವಣೆ ಮುಗಿದಿದೆ. ಫಲಿತಾಂಶವೂ ಬಂದಾಗಿದೆ. ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಮುಂದಿನ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದಾರೆ. ಆದರೆ ಈ ಚುನಾವಣೆಯಲ್ಲಿ ಎಡಪಕ್ಷಗಳ ಅಭ್ಯರ್ಥಿಯಾಗಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರ ಸ್ಪರ್ಧೆ ಬಿಜೆಪಿ ವಲಯಗಳಲ್ಲಿ ಆತಂಕ ಮೂಡಿಸಿತ್ತು ಎನ್ನುವುದಂತೂ ಸತ್ಯ.

ಬಿಜೆಪಿ ಆತಂಕ

ಹೊಸತಾಗಿ ನೇಮಕಗೊಂಡ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯನಾಯ್ಡುರವರ ಹೇಳಿಕೆಗಳೆ ಅವರ ಆತಂಕಕ್ಕೆ ಹಿಡಿದ ಕನ್ನಡಿಯಾಗಿದೆ. "ಈ ಚುನಾವಣೆಯಲ್ಲಿ ಜನಸಾಮಾನ್ಯರು ಮತದಾರರಲ್ಲ ಎಂಬುದನ್ನು ಎಡಪಕ್ಷಗಳು ಮನಗಾಣಬೇಕು" ಎಂಬ ಅವರ ಮಾತುಗಳು ಬಿಜೆಪಿ ಎಷ್ಟು ಆತಂಕಕ್ಕೆ ಒಳಗಾಗಿತ್ತೆಂಬುದನ್ನು ತಿಳಿಸುತ್ತದೆ. ಜೊತೆಗೆ ಕ್ಯಾಪ್ಟನ್ ಲಕ್ಷ್ಮಿಯವರಿಗೆ ಅಪಾರ ಜನಬೆಂಬಲವಿದೆ ಎಂಬುದನ್ನೂ ತಿಳಿಸುತ್ತದೆ. ಜೊತೆಯೇ ರಾಷ್ಟ್ರಪತಿ ಚುನಾವಣೆಯಲ್ಲಿ 'ವಿಪ್' ಕೊಡಬಾರದ ಸನ್ನಿವೇಶದಲ್ಲಿ ಬಿಜೆಪಿ ಅಧ್ಯಕ್ಷರು ಪಕ್ಷದ ಎಂ.ಪಿ., ಎಂ.ಎಲ್.ಎ.ಗಳಿಗೆ 'ಅಬ್ದುಲ್ ಕಲಾಂರವರಿಗೇ ಓಟು ಕೊಡಿ" ಎಂಬ ಆದೇಶ ಹೊರಡಿಸಿದ್ದು ಕೂಡಾ ಅವರೆಷ್ಟು ಭಯಗೊಂಡಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ. ಏನೇ ಇರಲಿ, ಎಡ ಮತ್ತು ಬೆಂಬಲಿಸಿದ ಪಕ್ಷಗಳು ಸ್ಪಷ್ಟಪಡಿಸಿದಂತೆ ಈ ಚುನಾವಣೆ. ಒಂದು ರಾಜಕೀಯ ಹೋರಾಟ ಜನರೆದುರಿಗೆ ನಿಜವಾದ ಸಂಗತಿಗಳನ್ನು ಚರ್ಚಿಸುವುದೇ ಇದರ ಮುಖ್ಯ ಉದ್ದೇಶವಾಗಿತ್ತು.

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರು ಭೇಟಿ ನೀಡಿದ 10 ರಾಜ್ಯದ ರಾಜಧಾನಿಗಳಲ್ಲಿ ಅವರಿಗೆ ಅಲ್ಲಿನ ನಾಗರಿಕರು ನೀಡಿದ ಉತ್ಸಾಹಭರಿತ ಸ್ವಾಗತ, ಎಲ್ಲ ವಿಭಾಗಗಳ ಜನಸಮುದಾಯದವರು ಸೇರಿ ನಡೆಸಿದ ಯಶಸ್ವೀ ರ‍್ಯಾಲಿಗಳು, ಸಭೆಗಳು, ಬುದ್ಧಿಜೀವಿಗಳನ್ನು ಒಳಗೊಂಡಂತೆ ಲಕ್ಷ್ಮಿಯವರಿಗೆ ಮತ ನೀಡುವಂತೆ ಮಾಡಿದ ಮನವಿಗಳು. ಇವು ವಾಜಪೇಯಿ ಸರ್ಕಾರದ ಜನವಿರೋಧಿ ನೀತಿಗಳು ಮತ್ತು ಕೋಮುವಾದಿ, ಫ್ಯಾಸಿಸ್ಟ್ ಅಜೆಂಡಾದ ವಿರೋಧಿ ಧ್ವನಿಗಳು ಎಂದು ಗುರುತಿಸಬೇಕು.

ಈ ಹೋರಾಟವು ಬಿಜೆಪಿ/ಎನ್‌ಡಿಎ ಯ ಕುತಂತ್ರ ರಾಜಕಾರಣದ ವಿರುದ್ಧ ಪ್ರಬಲ ಹೋರಾಟವನ್ನು ಎಡಪಕ್ಷಗಳು ನೀಡಬಲ್ಲವು ಎಂಬ ಸಂದೇಶವನ್ನು ಜನರಿಗೆ ನೀಡುವಲ್ಲಿ ಯಶಸ್ವಿಯಾಗಿದೆ.

ಮುಸ್ಲಿಂ ಜನಾಂಗದ ಅಬ್ದುಲ್ ಕಲಾಂರವರನ್ನು ರಾಷ್ಟ್ರಪತಿಯಾಗಿಸಿ ಗುಜರಾತ್ ನರಮೇಧದ ರಕ್ತಸಿಕ್ತ ಕೈಗಳನ್ನು ತೊಳೆದುಕೊಳ್ಳಬಯಸಿದ ಬಿಜೆಪಿ/ಆರ್‌ಎಸ್‌ಎಸ್ ನ ಬಣ್ಣವನ್ನು ಈ ಚುನಾವಣೆ ಬಯಲಾಗಿಸಿದೆ. ರಾಷ್ಟ್ರಪತಿ (ಅಭ್ಯರ್ಥಿ)ಗಳು ಜಾತ್ಯಾತೀತ ಧೋರಣೆಯನ್ನು ಎತ್ತಿ ಹಿಡಿಯುವ ಹೇಳಿಕೆಗಳನ್ನು ಕೊಡುವ 'ಗುಜರಾತ' ಘಟನೆಯನ್ನು ಖಂಡಿಸುವ ಅನಿವಾರ್ಯತೆಯನ್ನು ಸ್ಪಷ್ಟಡಿಸಿತು. ಕೆಲವು ಪ್ರಶ್ನೆಗಳಿಗೇ ಕ್ಯಾಪ್ಟನ್ ಲಕ್ಷ್ಮಿಯವರೇ ಉತ್ತರಿಸಿದಂತೆ-ಸೋಲುವ ಯುದ್ಧವೆಂದು ಗೊತ್ತಿದ್ದೂ ಹೋರಾಟ ನಡೆಯಲೇಬೇಕು. ಹೇಡಿಗಳು ಮಾತ್ರ ಸೋಲಿಗೆ ಹೆದರಿ ಯುದ್ಧ ಭೂಮಿಯಿಂದ ಕಾಲ್ತೆಗೆಯುತ್ತಾರೆ. ಆದರೆ ಈ ಹೋರಾಟ ಜನರಲ್ಲಿ ಒಂದು ಸಾಮೂಹಿಕ ಅರಿವು ಮೂಡಿಸುವ ಹೆಜ್ಜೆಯಾಗಿದೆ

ಒರೆಗಲ್ಲು

ಈ ಪ್ರಚಾರದ ಸಂದರ್ಭದಲ್ಲಿ ಹೊರಬಂದ ಅಂಶಗಳು, ಬಿಜೆಪಿ/ಎನ್‌ಡಿಎ ಅಭ್ಯರ್ಥಿಗಳ ಯುದ್ದೋನ್ಮಾದವನ್ನು ಪ್ರಚುರಪಡಿಸಿದ್ದು ಒಬ್ಬ ನಿಜವಾದ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿದ ಕ್ಯಾಪ್ಟನ್ ಲಕ್ಷ್ಮಿ ಬಿಜೆಪಿ/ಆರ್‌ಎಸ್‌ಎಸ್ ಮತ್ತು ಪೊಳ್ಳು ಯೋದ್ಧೋನ್ಮಾದಿ ಧೋರಣೆಗಳನ್ನು ಒರೆಗೆ ಹಚ್ಚಲು ಸಾಧ್ಯವಾಯಿತು. ಹಲವುಕಡೆ ತೀಕ್ಷ್ಣವಾಗಿ ಬಂದ ಪ್ರಶ್ನೆಗಳು ಅಣ್ವಸ್ತ್ರೀಕರಣ ಭಾರತದ ಅಭಿವೃದ್ಧಿಗೆ ಪೂರಕವಾದ ಶಿಕ್ಷಣ, ಆರೋಗ್ಯ, ಬಡತನ, ನಿರುದ್ಯೋಗಗಳತ್ತ ಗಮನ ಅವಶ್ಯಕವೇ?



ಇಡೀ ಪ್ರಚಾರದ ಸಂದರ್ಭದಲ್ಲಿ ಆರ್‌ಎಸ್‌ಎಸ್ / ಬಿಜೆಪಿಗಳೇ ಕಮ್ಯುನಿಸ್ಟರ ಕುರಿತ ಅಪಪ್ರಚಾರವನ್ನು ಸುಳ್ಳಾಗಿಸಲು ಸಾಧ್ಯವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಮ್ಯುನಿಸ್ಟರ ಪಾಲ್ಗೊಳ್ಳುವಿಕೆಯ ಕುರಿತು ಆರ್‌ಎಸ್‌ಎಸ್ ಮಾಡುತ್ತಿದ್ದ ಪೊಳ್ಳು ಪ್ರಚಾರವನ್ನು ಬದಿಗೆ ಸರಿಸಲು ಸಾಧ್ಯವಾಗಿದೆ. ಕ್ಯಾಪ್ಟನ್ ಲಕ್ಷ್ಮಿಯಂತಹ ಐಎನ್‌ಎ ಸೇನಾನಿ ಸಿಪಿಐ(ಎಂ) ಸೇರಿ ಇಂದಿಗೂ ಹೋರಾಟದ ಸ್ಪೂರ್ತಿಯಿಂದ ಮುನ್ನಡೆಯುತ್ತಿರುವುದು, ಬಹಳ ಪ್ರಮುಖ ಅಂಶವಾಗಿ ಬಂದಿದೆ. ಸುಭಾಷ್ ಚಂದ್ರಬೋಸ್‌ರ ಬಗ್ಗೆ ಕಮ್ಯುನಿಸ್ಟರ ಅಭಿಪ್ರಾಯದ ಕುರಿತು ಮತ್ತೆ ಮತ್ತೆ ಬರುತ್ತಿದ್ದ ಪ್ರಶ್ನೆಗೆ ಲಕ್ಷ್ಮಿಯವರ ಅತ್ಯಂತ ತಾಳ್ಮೆಯ ಉತ್ತರ - "ಬ್ರಿಟಿಷ್ ಸರ್ಕಾರದ ಕುತಂತ್ರದ ವಿವರಣೆ ಮತ್ತು ಇಡೀ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಪ್ರೇಮಿ ಕಮ್ಯುನಿಸ್ಟರ ಪಾತ್ರದ ವಿವರಣೆ". ಕೆಲವೊಮ್ಮೆ ಆರ್‌ಎಸ್‌ಎಸ್-ಪತ್ರಕರ್ತರ ತಲೆಹರಟೆ ಪ್ರಶ್ನೆಗಳಿಗೆ ಅವರು ತಿರುಗಿ ಕೇಳುತ್ತಿದ್ದ ಪ್ರಶ್ನೆ "ನಮಗೆ ಶಿಫಾರಸ್ಸು ಪತ್ರ ಕೊಡಲು ಇವರಾರು?. ಮಹಾತ್ಮಗಾಂಧಿಯನ್ನು ಕೊಂದವರು ನಮಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳಿಸುವುದು ಬೇಡ. ನನ್ನ ಇಡೀ ಐಎನ್‌ಎ ಜೀವನದಲ್ಲಿ ನಾನು ಒಬ್ಬನೇ ಒಬ್ಬ ಆರ್‌ಎಸ್‌ಎಸ್ ಜನರನ್ನು ನೋಡಲಿಲ್ಲ. ಸಾವರ್ಕರ್‌ನಿಂದ ವಾಜಪೇಯಿಯವರೆಗೂ ಎಲ್ಲರೂ ಬ್ರಿಟಿಷರಿಗೆ ಮುಚ್ಚಳಿಕೆ ಪತ್ರ ಬರೆದು ಕೊಟ್ಟವರೇ" ಎಂದರು.

ಈ ಎಲ್ಲಾ ಸತ್ಯಗಳೂ ಹೊರಬಿದ್ದು ಮತ್ತೆ ಮತ್ತೆ ಪ್ರಕಟವಾದ ಹಿನ್ನೆಲೆಯಲ್ಲಿ ಇರುಸು-ಮುರುಸುಗೊಂಡ ಆರ್‌ಎಸ್‌ಎಸ್ -ವಿದ್ಯಾರ್ಥಿ ವಿಭಾಗದ ಎಬಿವಿಪಿ ಮಹಾರಾಷ್ಟ್ರದಲ್ಲಿ ಕ್ಷೀಣ ಪ್ರತಿಭಟನೆಗೆ ಪ್ರಯತ್ನಿಸಿ ಅಲ್ಲಿ ಸೇರಿದ್ದ ಜನರಿಂದ ಒದೆ ತಿನ್ನಬೇಕಾಯಿತು.

ಈ ಒಟ್ಟು ಚುನಾವಣಾ ಪ್ರಕ್ರಿಯೆಯಲ್ಲಿ ಹೊರಬಂದ ಅಂಶ ಲಕ್ಷ್ಮಿಯವರನ್ನು ಬೆಂಬಲಿಸಿದ ಎಡ ಮತ್ತು ಜಾತ್ಯಾತೀತ ಶಕ್ತಿಗಳು - ದೇಶದ ಬಹುರಾಷ್ಟ್ರೀಯ ಪರಂಪರೆಯನ್ನು ಎತ್ತಿ ಹಿಡಿಯಲು ಹೋರಾಟಕ್ಕೆಂದೂ ಹಿಂಜರಿಯದ್ದು. ಅವು ಜನರ ಮಧ್ಯೆ ಇದ್ದು ಈ ಹೋರಾಟವನ್ನು ಮುಂದುವರಿಸುತ್ತವೆ ಎಂಬುದು. ಕ್ಯಾಪ್ಟನ್ ಲಕ್ಷ್ಮಿಯವರೇ ಹೇಳಿದಂತೆ ಕಾಂಗ್ರೆಸ್ ಮತ್ತು ಎನ್‌ಡಿಎ ಗಳು ಮಾತ್ರ ಈ ದೇಶದ ಭವಿಷ್ಯ ನಿರ್ಧರಿಸುವವರು ಎಂಬ ಭ್ರಮೆಯಿಂದ ಹೊರಬರಬೇಕು.

ಈ ಚುನಾವಣೆಗಾಗಿ ನಡೆದ 2 ವಾರಗಳ ಪ್ರಚಾರ ಈ ದೇಶವನ್ನು ಬಾಧಿಸುತ್ತಿರುವ ಹಲವು ಸಮಸ್ಯೆಗಳ ಕುರಿತು ವ್ಯಾಪಕ ಚರ್ಚೆಗೆ ವಾಜಪೇಯಿ ಸರ್ಕಾರದ ಅಮೆರಿಕಾ ಪರ ಧೋರಣೆಗೆ ಪ್ರತಿಕ್ರಿಯೆಗಳ ಸಂಗ್ರಹಕ್ಕೆ ಅನುವು ಮಾಡಿದೆ. ಈ ಹೋರಾಟ ಮುಂದುವರೆಯುತ್ತದೆ.

ಈಗಾಗಲೇ ಬಂದ ಫಲಿತಾಂಶದಿಂದ ವ್ಯಕ್ತವಾದಂತೆ ಅಬ್ದುಲ್ ಕಲಂರನ್ನು ಬೆಂಬಲಿಸಿದ ಪಕ್ಷಗಳ ಸಂಸದರೂ/ಶಾಸಕರೂ ಲಕ್ಷ್ಮಿಯವರಿಗೆ ಮತ ಹಾಕಿದ್ದಾರೆ. ಪಾಪ! ವೆಂಕಯ್ಯನಾಯ್ಡು ಇನ್ನಷ್ಟು ಆತಂಕಕ್ಕೆ ಒಳಗಾಗಿ ಇನ್ನೇನು ಆದೇಶಗಳನ್ನು ಹೊರಡಿಸುತ್ತಾರೋ?

ಕ್ಯಾ. ಲಕ್ಷ್ಮಿಯವರಿಗೆ ಸಂಭ್ರಮದ ಸ್ವಾಗತ-ಪುಟ 12

ಯಾರಿಗೆ ಎಷ್ಟು ಮತ?

	ಅಬ್ದುಲ್ ಕಲಾಂ		ಲಕ್ಷ್ಮೀ ಸೆಹಗಲ್	
	ಮತ	ಮೌಲ್ಯ	ಮತ	ಮೌಲ್ಯ
ಸಂಸತ್	638	4,51,704	80	56,640
ಆಂದ್ರಪ್ರದೇಶ	264	39,072	2	296
ಅಸ್ಸಾಂ	113	13,108	1	116
ಬಿಹಾರ	.215	37,195	17	2,941
ಗೋವಾ	34	680	3	60
ಗುಜರಾತ್	174	25,578	2	294
ಹಿಮಾಚಲ ಪ್ರದೇಶ	62	3,162	1	51
ಜಮ್ಮು-ಕಾಶ್ಮೀ	72	5,184	2	144
ಜಾರ್ಖಂಡ್	74	13,024	5	880
ಕರ್ನಾಟಕ	202	26,462	13	1,703
ಕೇರಳ	97	14,744	39	5,928
ಮಧ್ಯಪ್ರದೇಶ	216	28,296	2	262
ಮಹಾರಾಷ್ಟ್ರ	264	46,200	9	1,575
ಮಣಿಪುರ	50	900	4	72
ಮೇಘಾಲಯ	53	901	1	17
ಒರಿಸ್ಸಾ	**130**	**19,370**	**12**	**1,788**
ಪಂಜಾಬ್	87	10,092	9	1,044
ರಾಜಸ್ತಾನ	187	24,381	2	258
ತಮಿಳುನಾಡು	217	38,192	10	1,760
ತ್ರಿಪುರಾ	17	442	41	1,066
ಉತ್ತರಾಂಚಲ	63	4,032	3	192
ಉತ್ತರ ಪ್ರದೇಶ	386	80,288	2	416
ಪಶ್ಚಿಮ ಬಂಗಾಳ	90	13,590	197	29,747
ಹೊಸದಿಲ್ಲಿ	65	3,770	2	116
ನಾಗಾಲ್ಯಾಂಡ್	54	486	-	
ಮಿಜೋರಾಂ	40	320	-	
ಹರಿಯಾಣ	86	9,632	-	
ಛತ್ತೀಸ್ ಗಢ	85	10,965	-	
ಅರುಣಾಚಲ	57	456	-	
ಪುದುಚೇರಿ	28	448	-	
ಸಿಕ್ಕಿಂ	30	210	-	
ಒಟ್ಟು	4152	9,22,884	459	1,07,366

ಬೆಂಗಳೂರಿನಲ್ಲಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್

ದೇಶದ ಸ್ವಾತಂತ್ರ್ಯ ಸಮರದ ವೇಳೆ ನಾಡಿನ ಬಗ್ಗೆ ನಾವು ಕಂಡ ಕನಸು ಇನ್ನೂ ನನಸಾಗಿಲ್ಲ ಎಲ್ಲಾ ಜನರ ಕಲ್ಯಾಣ ಆ ಕನಸನ್ನು ನನಸನ್ನಾಗಿ ಮಾಡಲು ಹೋರಾಟವನ್ನು ಮುಂದುವರಿಸಬೇಕಾಗಿದೆ ಎಂದು ರಾಷ್ಟ್ರಪತಿ ಚುನಾವಣೆಯ ಎಡಪಕ್ಷಗಳು ಹಾಗೂ ಜಾತ್ಯಾತೀತ ಜನತಾದಳದ ಅಭ್ಯರ್ಥಿ ಡಾ. ಕ್ಯಾ.ಲಕ್ಷ್ಮಿ ಸೆಹಲ್ ಹೇಳಿದರು

ಅವರು ನಾಗರಿಕ ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಿದ್ದರು.

ನೇತಾಜಿ ಸುಭಾಸ್‌ಚಂದ್ರಬೋಸರ ಐಎಸ್‌ಎಯ ಝಾನ್ಸಿ ರೆಜಿಮೆಂಟಿನ ಕ್ಯಾಪ್ಟನ್ ಆಗಿದ್ದ ಲಕ್ಷ್ಮಿ ಸೆಹಗಲ್, ನೇತಾಜಿ ಕಂಡ ಭಾರತ ಜನತೆಯ ಒಗ್ಗಟ್ಟಿನ ಪರಿಕಲ್ಪನೆಗೆ ಇಂದು ಅಪಾಯ ಒದಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ದೇಶದ ವಿಭಜನೆಗೆ ನೇತಾಜಿ ವಿರೋಧವಾಗಿದ್ದರು. ಆದರೆ ಇಂದು ದೇಶ ಮತ್ತೆ ಕೋಮುವಾದಿ ಶಕ್ತಿಗಳಿಂದ ಅಪಾಯ ಒದಗಿದೆ, ಇದರ ವಿರುದ್ಧ ಜನರು ಎಚ್ಚರದಿಂದ ಇರಬೇಕು ಎಂದು ಕರೆ ನೀಡಿದರು. ಸ್ವಾತಂತ್ರ್ಯ ಸಮರದ ವೇಳೆಯ ಮೌಲ್ಯಗಳನ್ನು ಉಳಿಸಿಕೊಳ್ಳಬೇಕು, ಅವುಗಳ ಪುನರುತ್ಥಾನವಾಗಬೇಕು ಎಂದು ಹೇಳಿದರು.

ಈ ಚುನಾವಣೆಯಲ್ಲಿ ನನ್ನ ಸೋಲು-ಗೆಲುವು ಮುಖ್ಯವಲ್ಲ, ಇದು ಸೈದ್ಧಾಂತಿಕ ಹಾಗೂ ಮೌಲ್ಯಗಳ ಸಂಘರ್ಷವಾಗಿದೆ. ಕೋಮುವಾದಿ ಹಾಗೂ ಜಾತ್ಯಾತೀತ - ಪ್ರಜಾಸತ್ತಾತ್ಮಕ ಶಕ್ತಿಗಳ ಮಧ್ಯದ ಸಂಘರ್ಷವಾಗಿದೆ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರಿನಲ್ಲಿ ಸಿಕ್ಕಿದ ಅಭೂತಪೂರ್ವ ಸ್ವಾಗತದಿಂದ ನನಗೆ ರೋಮಾಂಚನವಾಗಿದೆ. ಉತ್ಸಾಹ ಇಮ್ಮಡಿಗೊಂಡಿದೆ ಎಂದು ಲಕ್ಷ್ಮಿ ಹೇಳಿದರು.

ಪುಟ 8

ಮಾಧ್ಯಮದ ಮ

ಭಾರತದ ಮುದ್ರಣ ಮಾಧ್ಯಮವನ್ನು ವಿದೇಶಿ ಕಂಪನಿಗಳಿಗೆ ಒಪ್ಪಿಸುವ ಆತ್ಮಹತ್ಯಾಕಾ ಕೈಗೊಂಡಿದೆ. ಇದು ಅತ್ಯಂತ ಅಪಾಯಕಾರಿ. ಅಮೆರಿಕಾದಂತಹ ಪಾಶ್ಚಾತ್ಯ ದೇಶಗಳು ಹಿತಾಸಕ್ತಿಗಳ ರಕ್ಷಕರು ಎಂದು ತಮ್ಮನ್ನು ಬೆಂಬಿಸಿಕೊಳ್ಳುವ ಈ ಪರಿವಾರ ಬಹುರಾ ಹಲ್ಲುಗಿಂಜುತ್ತಿದೆ. ಈ ನಿರ್ಧಾರದ ಪರಿಣಾಮಗಳು ಎಷ್ಟು ಹಾನಿಕರ ಎಂದು ವಿವರಿ

ಹತ್ಯಾಕಾಂಡವನ್ನು ಮುಚ್ಚಿಹಾಕಲು ಎಷ್ಟೇ ಪ್ರಯತ್ನಿಸಿದರೂ ಸತ್ಯ ಬಯಲಾಗಿದೆ. ದೇಶದ

ಟಿ.ಎಲ್.ಕೃಷ್ಣೇಗೌಡ

ವಾಜಪೇಯಿ ನೇತೃತ್ವದ ಎನ್.ಡಿ.ಎ. ಕೇಂದ್ರ ಸರ್ಕಾರ ಆತ್ಮಹತ್ಯಾಕಾರಿ ತೀರ್ಮಾನ ವೊಂದರಲ್ಲಿ ಭಾರತದ ಮುದ್ರಣ ಮಾಧ್ಯಮವನ್ನು ವಿದೇಶಿ ಮಾಲಿಕತ್ವ ಮತ್ತು ನಿಯಂತ್ರಣಕ್ಕೆ ತೆರೆದಿದೆ. ರಾಜಕೀಯ ಪಕ್ಷಗಳು, ವೃತ್ತಿನಿರತ ಮಾಧ್ಯಮದ ಸಂಘಟನೆಗಳು ಮತ್ತು ಸಾರ್ವಜನಿಕರ ಬಲವಾದ ವಿರೋಧವಿದ್ದಾಗ್ಯೂ, ಮುದ್ರಣ ಮಾಧ್ಯಮದಲ್ಲಿ ವಿದೇಶಿ ಮಾಲೀಕತ್ವವನ್ನು ನಿರಾಕರಿಸಿದ್ದ 1955ರ ಸಂಪುಟ ನಿರ್ಣಯವನ್ನು ಹಿಂತೆಗೆದುಕೊಳ್ಳಲಾಗಿದೆ.

ವಿದೇಶಿ ಹೂಡಿಕೆಗೆ ಸಂಬಂಧಿಸಿದ ಬೇರೆ ಯಾವೊಂದು ತೀರ್ಮಾನವೂ ರಾಷ್ಟ್ರದ ಸಾರ್ವಭೌಮತ್ವ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಮುದ್ರಣ ಮಾಧ್ಯಮವನ್ನು ವಿದೇಶಿ ಬಂಡವಾಳಕ್ಕೆ ತೆರೆಯುವುದು ಮಾಡುವಷ್ಟು ಹಾನಿಯನ್ನುಂಟು ಮಾಡುವುದಿಲ್ಲ, ಬಿಜೆಪಿ ನೇತೃತ್ವದ ಸರ್ಕಾರ ಇಂತಹ ನೀಚ ಕೆಲಸವನ್ನು ಮಾಡಿದೆ.

ಸ್ಥಾಯಿ ಸಮಿತಿಗೂ ವಂಚನೆ :

ಕೇವಲ ಮೂರು ತಿಂಗಳ ಹಿಂದೆ, ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು ಮುದ್ರಣ ಮಾಧ್ಯಮದಲ್ಲಿ ವಿದೇಶಿ ಮುದ್ರಣ ಮಾಧ್ಯಮಕ್ಕೆ ಅವಕಾಶ ಅಥವಾ ವಿದೇಶಿ ನೇರ ಹೂಡಿಕೆಯ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು. ಸೋಮನಾಥ ಚಟರ್ಜಿಯವರ ಅಧ್ಯಕ್ಷತೆಯ ಸ್ಥಾಯಿ ಸಮಿತಿ ಎಲ್ಲಾ ಜನವಿಭಾಗಗಳ ಅಭಿಪ್ರಾಯವನ್ನು ಆಲಿಸಿದ ನಂತರ ಒಂದು ವರದಿಯನ್ನು ಅಂಗೀಕರಿಸಿತ್ತು. ಬಹುಮುಖ್ಯವಾಗಿ ಸ್ಥಾಯಿ ಸಮಿತಿಯಲ್ಲಿದ್ದ ಬಿಜೆಪಿ ಸಂಸದರು ಮುದ್ರಣಮಾಧ್ಯಮದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಲು ಭಾರಿ ಲಾಭಿ ನಡೆಸಿದರು. ಈ ಪ್ರಸ್ತಾವನೆಯ ಅತ್ಯಂತ ಪ್ರಮುಖ ಪ್ರತಿಪಾದಕರೆಂದರೆ ಬಿಜೆಪಿಯ ರಾಜ್ಯ ಸಭಾ ಸದಸ್ಯರಾದ ನರೇಂದ್ರ ಮೋಹನ್. ಈತ ಹಿಂದಿ ದೈನಿಕ 'ದೈನಿಕ ಜಾಗರಣ್'ನ ಮಾಲಿಕ ಕೂಡ. ಮತ್ತೊಬ್ಬ ಬಿಜೆಪಿ ಸಂಸದ ಬಲಬೀರ್ ಕೆ. ಪುಂಜ್ ಮುದ್ರಣ ಮಾಧ್ಯಮವನ್ನು ವಿದೇಶಿ ಬಂಡವಾಳಕ್ಕೆ ತೆರೆಯಲು ಬಲವಾಗಿ ಪ್ರತಿಪಾದಿಸುತ್ತಿದ್ದು, ಈತ ಆರ್.ಎಸ್.ಎಸ್. ಆಪ್ತ ವಲಯದಲ್ಲಿರುವ ವ್ಯಕ್ತಿಕೂಡ. ಆದರೆ ಇವರ ತೀವ್ರ ಪ್ರಯತ್ನಗಳ ಹೊರತಾಗಿಯೂ, ಇವರು ಸಮಿತಿಯಲ್ಲಿ ಅಲ್ಪಸಂಖ್ಯಾತರಾಗಿಯೇ ಉಳಿಯಬೇಕಾಯಿತು.

ಸುಷ್ಮಾ ಸ್ವರಾಜ್ ಪ್ರಯತ್ನ


ವಾರ್ತಾ ಮತ್ತು ಪ್ರಸಾರ ಖಾತೆ ಮಂತ್ರಿ ಸುಷ್ಮಾ ಸ್ವರಾಜ್‌ರಂತೂ 1955 ರ ಸಂಪುಟ ತೀರ್ಮಾನವನ್ನು ತಿರುವು ಮುರುವುಗೊಳಿಸಲು ತೀವ್ರವಾಗಿ ಪ್ರಯತ್ನಿಸಿದರು. ಈಕೆ ಇನ್ನೂ ಮುಂದೆ ಹೋಗಿ ನರೇಂದ್ರ ಮೋಹನರನ್ನು ಒಳಗೊಂಡಂತೆ 5 ಜನ ಸಂಪಾದಕರುಗಳ ಕೈಯಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷರಿಗೊಂದು ಪತ್ರ ಬರೆಸಿ ತಮ್ಮ ಅಭಿಪ್ರಾಯಗಳನ್ನು ಪರಿಗಣಿಸಲು ಕೋರಿಸಿದ್ದರು.

ಭಾರತೀಯ ಮುದ್ರಣ ಮಾಧ್ಯಮದ ಇಷ್ಟೊಂದು ಬೆಳವಣಿಗೆಯು ಸ್ವಾತಂತ್ರ್ಯ ಸಮರದಿಂದ ಬೆಳೆದು ಬಂದು ಪ್ರಜಾಪ್ರಭುತ್ವ ವ್ಯವಸ್ಥೆಯೊಡನೆ ಹಾಸುಹೊಕ್ಕಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೂಡಿಬಂದ ಗಣನೀಯ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದ ರುವಾರಿಗಳಾದವು ಮತ್ತು ರಾಷ್ಟ್ರೀಯ ದೃಷ್ಟಿಕೋನವನ್ನು ಬಿತ್ತಿದವು. ಈಗ ಮುದ್ರಣ ಮಾಧ್ಯಮವು ಭಾರತದ ಎಲ್ಲಾ ಭಾಷೆಗಳಿಗೆ ವಿಸ್ತರಣೆಯಾಗಿದೆ ಮತ್ತು ಈ ದಿನ 18 ಕೋಟಿ ಓದುಗರನ್ನು ಹೊಂದಿದೆ. ಪ್ರತಿಯೊಂದು ಪ್ರಮುಖ ರಾಜಕೀಯ ಮತ್ತು ಸಾಮಾಜಿಕ ವಿಷಯವೂ ಪತ್ರಿಕೆಗಳ ಕಾಲಮುಗಳಲ್ಲಿ ಚರ್ಚೆಯಾಗುತ್ತವೆ ಮತ್ತು ವಿವಿಧ ಅಭಿಪ್ರಾಯಗಳು ಪ್ರತಿಫಲನಗೊಳ್ಳುತ್ತವೆ. 1975-77ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಮರ್ದನ ಮಾಡಲು ಪ್ರಯತ್ನಿಸಿದ್ದು ಪ್ರಜಾಪ್ರಭುತ್ವದ ಮೇಲಿನ ನೇರ ಹಲ್ಲೆಯಾಗಿತ್ತು. ಇದು ಕೊನೆಗೆ ಕಾಂಗ್ರೆಸ್‌ಗೇ ತಿರುಗುಬಾಣವಾಯಿತು.

ವಿದೇಶಿ ಮಾಧ್ಯಮ ಏಕಸ್ವಾಮ್ಯ ;

ಬಿಜೆಪಿ ಲಾಗ ಹಾಕುತ್ತಿರುವುದು ತುರ್ತು ಪರಿಸ್ಥಿತಿಯ ಕಾಲಕ್ಕಿಂತಲೂ ಹೇಯವಾದುದು. ಪ್ರಪಂಚದಲ್ಲಿ ಇಂದು ಮಾಧ್ಯಮ ಮತ್ತು ಮಾಹಿತಿ ಹರಿಯುವಿಕೆಯನ್ನು ನಿಯಂತ್ರಿಸುವ ಜಾಗತಿಕ ಮಾಧ್ಯಮ ಸಂಸ್ಥೆಗಳಿವೆ. ಅಂತಹ ಒಂದು ಅತಿದೊಡ್ಡ ಮಾಧ್ಯಮ ಕಂಪನಿಯೆಂದರೆ ZOL - ಟೈಮ್ ವಾರ್ನರ್. ಇದರ ಒಟ್ಟು ಮೌಲ್ಯ 165 ಮಿಲಿಯನ್ ಡಾಲರುಗಳು. ರೂಪರ್ಟ್ ಮರ್ಡೋಕ್ ಎಂಬ ಮಾಧ್ಯಮ ಸಾಮ್ರಾಟ ಬ್ರಿಟನ್ನಿನ ಪ್ರಮುಖ ವೃತ್ತಿಪತ್ರಿಕೆಗಳ ಒಡೆತನ ಹೊಂದಿದ್ದಾನೆ.

ಮುದ್ರಣ ಮಾಧ್ಯಮದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡುವುದೆಂದರೆ ಇಂತಹ ದೊಡ್ಡ ಕಂಪನಿಗಳಿಗೆ ಅವಕಾಶ ನೀಡುವುದು ಮತ್ತು ಅವುಗಳ ನಿಯಂತ್ರಣ ಹೊಂದಲು ಅವಕಾಶ ನೀಡುವುದು ಎಂದೇ ಅರ್ಥ. ಈ ಸಂದರ್ಭದಲ್ಲಿ ಭಾರತೀಯ ಹಿತಾಸಕ್ತಿಗಳನ್ನು ಕಾಪಾಡಲು ಕ್ರಮಕೈಗೊಳ್ಳುತ್ತೇವೆ ಎಂಬುದು ಅರ್ಥ ಹೀನವಾದುದು. ಶೇ. 26 ಷೇರುಗಳಿಗೆ ಮಾತ್ರ ಅವಕಾಶ ನೀಡುವುದರಿಂದ ವಿದೇಶಿ ಏಜೆನ್ಸಿಗಳು ಮಾಧ್ಯಮದ ಮೇಲೆ ನಿಯಂತ್ರಣ ಸಾಧಿಸುವುದನ್ನು ತಡೆಯಲಾಗುವುದು. ಸಂಪಾದಕರು ಭಾರತೀಯರಾಗಿರಬೇಕು, ಸಂಪಾದಕ ಮಂಡಳಿಯಲ್ಲಿ 3/4 ಭಾರತೀಯ ನಿವಾಸಿಗಳೇ ಆಗಿರಬೇಕೆಂಬುದು ವಿದೇಶಿ ಕಂಪನಿಗಳು ತಮ್ಮ ನೀತಿಗಳನ್ನು ಜಾರಿ ಮಾಡುವುದನ್ನು ತಡೆಯುತ್ತದೆ ಎಂಬ ವಿಶ್ವಾಸವೇನೂ ಇಲ್ಲ. ಭಾರತದಲ್ಲಿರುವ ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳೂ ಪ್ರಮುಖ



ಈ ಸ್ವದೇಶಿ ಮಹಿಳೆಗೆ ಮಾಧ್ಯಮವನ್ನು ವಿದೇಶಿ ಕಂಪನಿಗಳಿಗೊಪ್ಪಿಸಲು ಅದೆಷ್ಟು ಕಾತುರ, ಏನೆಲ್ಲಾ ಹುನ್ನಾರ?

ಸ್ಥಾನಗಳಲ್ಲಿ ಭಾರತೀಯರನ್ನೇ ಇಟ್ಟುಕೊಂಡು ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತಿವೆ.

ವಿದೇಶಿ ಬಂಡವಾಳಕ್ಕೆ ಮುದ್ರಣ ಮಾಧ್ಯಮವನ್ನು ತೆರೆಯಬೇಕೆಂದು ಪ್ರತಿಪಾದಿಸುತ್ತಿರುವ ಕೆಲವೇ ಮಾಲಿಕರು ಮತ್ತು ಸಂಪಾದಕರುಗಳ ವಾದ ಕೂಡ ಅಪ್ರಸ್ತುತವಾದುದು. ಅವರ ಅಭಿಪ್ರಾಯದಂತೆ ಇನ್ನೂ ಹೆಚ್ಚಿನ ಸಂಖ್ಯೆಯ ಜನರು ಮಾಧ್ಯಮ ಕ್ಷೇತ್ರಕ್ಕೆ ಪ್ರವೇಶ ಮಾಡಬಾರದೆಂದು. ಈ ಏಕಸ್ವಾಮ್ಯವಾದಿಗಳ ವಿಚಾರವನ್ನು ಬೇರೆ ವೇದಿಕೆಯಲ್ಲಿ ಚರ್ಚಿಸಬಹುದು.

ಸಿಪಿಐ(ಎಂ) ಪಕ್ಷವು ನಿರಂತರವಾಗಿ ಮಾಧ್ಯಮ ಕ್ಷೇತ್ರದಲ್ಲಿ ಏಕಸ್ವಾಮ್ಯ ಸಂಸ್ಥೆಗಳು ಬೆಳೆಯುವುದನ್ನು ತಡೆಯಬೇಕು ಮತ್ತು ಆಸ್ಟ್ರೇಲಿಯಾ, ಕೆನಡಾಗಳಲ್ಲಿರುವಂತೆ ಅಡ್ಡ ಮಾಲೀಕತ್ವಕ್ಕೆ ಅವಕಾಶ ನೀಡಬಾರದೆಂದು ಪ್ರತಿಪಾದನೆ ಮಾಡಿದೆ.

ಸಾಮಾನ್ಯವಾಗಿ ವಿದೇಶಿ ಹೂಡಿಕೆಯನ್ನು ಸಮರ್ಥಿಸುವವರ ವಾದವು ಈಗಾಗಲೇ ವಿದೇಶಿ ಟಿ.ವಿ. ಚಾನೆಲ್‌ಗಳು ನಮ್ಮ ದೇಶದಲ್ಲಿ ಪ್ರವೇಶ ಮಾಡಿವೆ ಎಂಬುದೇ ಆಗಿದೆ. ಎಲೆಕ್ಟ್ರಾನಿಕ್ ಮಾಧ್ಯಮದಲ್ಲೂ ವಿದೇಶಿ ಕಂಪನಿಗಳು ಕೆಲಸ ನಿರ್ವಹಿಸಲು ಅವಕಾಶ ನೀಡುವುದೂ ಮೊದಲಿಗೇ ತಪ್ಪು ಕ್ರಮವಾಗಿದೆ. ಭಾರತದಲ್ಲಿ ಕೆಲಸ ನಿರ್ವಹಿಸುತ್ತಿರುವ ವಿದೇಶಿ ಚಾನಲ್‌ಗಳನ್ನು ನಿಯಂತ್ರಿಸಲು ತುರ್ತಾಗಿ ಕ್ರಮಕೈಗೊಳ್ಳಬೇಕಾದ ಅಗತ್ಯವಿದೆ. ಮುಂದುವರೆದು ಅದು ಮುದ್ರಣ ಮಾಧ್ಯಮವಿರಲಿ, ಎಲೆಕ್ಟ್ರಾನಿಕ್ ಮಾಧ್ಯಮವಿರಲಿ ವಿದೇಶಿ ಬಂಡವಾಳವನ್ನು ಭಾರತೀಯ ಮಾಧ್ಯಮ ಕ್ಷೇತ್ರಕ್ಕೆ ಬರಲು ಅವಕಾಶ ನೀಡುವುದೇ ತಪ್ಪು.


ಅಂತಿಮವಾಗಿ, ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ವಿಕಾಸಗೊಳಿಸುವಲ್ಲಿ ಪತ್ರಿಕೆಗಳಿಗೆ ಮತ್ತು ಮುದ್ರಣ ಮಾಧ್ಯಮಕ್ಕೆ ತನ್ನದೇ ಆದ ಪಾತ್ರವಿದೆ ಮತ್ತು ನೇರವಾಗಿ ಸಂಬಂಧಿಸಿದೆ ಮತ್ತು ಕ್ಷೇತ್ರವನ್ನು ವಿದೇಶಿ ಬಂಡವಾಳದ ವ್ಯಾಪ್ತಿಯಿಂದ ಹೊರಗೇ ಇಡಬೇಕಿದೆ.

ಮುದ್ರಣ ಮಾಧ್ಯಮ - ಪ್ರಜಾಪ್ರಭುತ್ವದೊಡನೆ ಅಂತರ್ಗತ :

ಭಾರತದಲ್ಲಿ ಮುದ್ರಣ ಮಾಧ್ಯಮದ ಬೆಳವಣಿಗೆಯ ಪ್ರಮುಖ ಕ್ಷೇತ್ರವೆಂದರೆ ಪ್ರಾದೇಶಿಕ ಭಾಷಾ ಕ್ಷೇತ್ರ. ಅದರಲ್ಲಿ ಮುಖ್ಯವಾದುದು ಹಿಂದಿ ಭಾಷಾ ಕ್ಷೇತ್ರದ್ದು. ವಿದೇಶಿ ಬಂಡವಾಳ ಕೇವಲ ಇಂಗ್ಲೀಷ್ ಭಾಷೆಗೆ ಮಾತ್ರ ಸೀಮಿತಗೊಳ್ಳುವುದಿಲ್ಲ, ಅದು ಹಿಂದಿ ಮತ್ತಿತರೆ ಪ್ರಾದೇಶಿಕ ಭಾಷೆಗಳಿಗೂ ವಿಸ್ತರಣೆಯಾಗುತ್ತದೆ. ವಿದೇಶಿ ಮಾಧ್ಯಮಗಳ ಮೌಲ್ಯಗಳು ಭಾರತೀಯ ಭಾಷಾ ಪ್ರಕಟಣೆಗಳ ಮೂಲಕ ನಮ್ಮ ರಾಜಕೀಯ ಪ್ರಕ್ರಿಯೆಯಲ್ಲೂ ಪ್ರವೇಶ ಮಾಡಿಬಿಡುತ್ತವೆ.

ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಯಲ್ಲಿ, ವೃತ್ತ ಪತ್ರಿಕೆಗಳು ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಪಾತ್ರವನ್ನು ನಿರ್ವಹಿಸಲು ಸಾಧ್ಯವಿದೆ ಅಥವಾ ಕೋಮುವಾದಿ ಪ್ರತಿಗಾಮಿ ವಿಚಾರಗಳನ್ನು ಹರಡಲು ಸಾಧ್ಯವಿದೆ. ಬಾಬ್ರಿ ಮಸೀದಿ ಧ್ವಂಸದ ಸಮಯದಲ್ಲಿ ಮತ್ತು ಆನಂತರ ಕೆಲವು ಪ್ರಮುಖ ಹಿಂದೀ ಪತ್ರಿಕೆಗಳು ಉದ್ರೇಕಕಾರಿ ವಾತಾವರಣ ನಿರ್ಮಾಣ ಮಾಡುವ ಪಾತ್ರವನ್ನು ನಿರ್ವಹಿಸಿದವು, ಇದನ್ನು ಪತ್ರಿಕಾ ಮಂಡಳಿಯೇ ಸ್ಪಷ್ಟವಾಗಿ ಗುರುತಿಸಿದೆ. ವಿದೇಶಿ ಬಂಡವಾಳದೊಡನೆ ನಮ್ಮ ಪ್ರಜಾಪ್ರಭುತ್ವ ಜಾತ್ಯಾತೀತ ಮೌಲ್ಯಗಳನ್ನೇ ಬುಡಮೇಲು ಮಾಡುವ ಅಂಶಗಳು ನುಸುಳಿ ಮೇಲುಗೈ ಸಾಧಿಸಬಹುದು. ಹಲವಾರು ಪಾಶ್ಚಾತ್ಯ ಮಾಧ್ಯಮಗಳು ತಮ್ಮ ಲಾಭಕ್ಕಾಗಿ ಸೆಕ್ಸ್ ಮತ್ತು ಹಿಂಸೆಯನ್ನೇ ವೈಭವೀಕರಿಸುತ್ತವೆ. ಇವು ನಮ್ಮ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತವೆ.

ಈಗಾಗಲೇ ಹಲವಾರು ಪತ್ರಿಕೆಗಳು ಬಲಪಂಥೀಯ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಿವೆ. ಇದು ಕಳೆದ ದಶಕದಲ್ಲಿ ಭಾರತದ ರಾಜಕಾರಣದಲ್ಲಿ ಉಂಟಾದ ಬಲಪಂಥೀಯ ಬದಲಾವಣೆಯ ಫಲವಾಗಿದೆ.



ಈಗಾಗಲೇ ಅಂತರಾಷ್ಟ್ರೀಯ ಸುದ್ದಿಗಳು, ಕಾರ್ಯಕ್ರಮಗಳು ಪಾಶ್ಚಾತ್ಯ ಸುದ್ದಿ ಸಂಸ್ಥೆಗಳಾದ ಎ.ಪಿ., ರಾಯಟರ್ಸ್, ಎ.ಎಫ್.ಪಿ. ಯಂತಹವುಗಳ ಮೂಗಿನ ನೇರಕ್ಕೆ ವರದಿಯಾಗುತ್ತವೆ. ಜಾಗತೀಕರಣದ ತಂತ್ರ ಈಗ ಎಲ್ಲಾ ವಲಯಗಳನ್ನು ಹೊಕ್ಕುತ್ತಿದೆ.

ಮಾಧ್ಯಮದ ಮೇಲೆ ಬಿಜೆಪಿಯ ದಾಳಿ :

ಸ್ವತಂತ್ರ ಮಾಧ್ಯಮದ ಮೇಲೆ ಬಿಜೆಪಿ ಹರಿಹಾಯುತ್ತಿದೆ. ತೆಹಲ್ಕಾ ವರದಿ ನಂತರ ಅವರ ಮೇಲೆ ಬಿಜೆಪಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಅದನ್ನು ತೋರಿಸಿದೆ. ಗುಜರಾತ್ ಹತ್ಯಾಕಾಂಡಗಳ ವರದಿಯನ್ನು ವಾಜಪೇಯಿ ಸರ್ಕಾರ ಖಂಡಿಸಿದೆ. ಆದ್ದರಿಂದ ಮಾಧ್ಯಮ ಕ್ಷೇತ್ರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡುವುದು ಮಾಧ್ಯಮಗಳ ಸ್ವತಂತ್ರ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುವುದೇ ಆಗಿದೆ. ಆದ್ದರಿಂದ ಖ್ಯಾತ ಪತ್ರಕರ್ತ ಎನ್.ರಾಮ್ ಹೇಳಿದಂತೆ ನಮ್ಮ ಸಂವಿಧಾನವು ಭಾರತದ ನಾಗರೀಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತಿತರೆ ಮೂಲಭೂತ ಹಕ್ಕುಗಳನ್ನು ನೀಡಿದೆ. ಈ ಸ್ವಾತಂತ್ರಗಳನ್ನು ದುರುಪಯೋಗ ಪಡಿಸಿಕೊಳ್ಳಲು ವಿದೇಶಿ ಏಕ ಸ್ವಾಮ್ಯಗಳಿಗೆ ವಿಸ್ತರಿಸುವ ಅಗತ್ಯವಿಲ್ಲ.

ತನ್ನ ಪ್ರತಿಗಾಮಿ ವಿಚಾರಗಳಿಗೆ ಪ್ರಸಿದ್ಧವಾಗಿರುವ ಆರ್.ಎಸ್.ಎಸ್. ಕೇಂದ್ರ ಸರ್ಕಾರದ ನಿಲುವನ್ನು ಸಮರ್ಥಿಸಿದೆ. ಹಿಂದುತ್ವ ಶಕ್ತಿಗಳು ಹೆಚ್ಚು ಹೆಚ್ಚಾಗಿ ಸಾಮ್ರಾಜ್ಯಶಾಹಿ ಪೋಷಣೆಗೆ ಹಾತೊರೆಯುತ್ತಿವೆ.

ಇದು ಭಾರತ ಎಲ್ಲಾ ನಾಗರಿಕರಿಗೆ ಆತಂಕದ ವಿಚಾರವಾಗಿದೆ. ಆದ್ದರಿಂದ ನಾಗರಿಕರು, ಸಂಸತ್ತು, ಪತ್ರಿಕಾ ಸಂಪಾದಕರುಗಳು ಎಲ್ಲಾ ದೇಶ ಪ್ರೇಮಿಗಳು ಎನ್.ಡಿ.ಎ ಸರ್ಕಾರದ ಈ ದೇಶವಿರೋಧಿ ತೀರ್ಮಾನವನ್ನು ವಿರೋಧಿಸಬೇಕಾಗಿದೆ.


ವಿದೇಶಿ ಕಂಪನಿಗಳು ಮಾಧ್ಯಮಗಳು

ಆಧುನಿಕ ಸಮಾಜದಲ್ಲಿ ಮಾಧ್ಯಮವೆಂಬುದು ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ.

ರಾಟ

ರವನ್ನು ವಾಜಪೇಯಿ ಸರ್ಕಾರ ಕ್ಕೆ ಅವಕಾಶ ನೀಡಿಲ್ಲ. ರಾಷ್ಟ್ರದ ಪನಿಗಳ ಎದುರು ಶರಣಾಗಿ ನವಿಲ್ಲ. ಹಾಗೆಯೇ ಗುಜರಾತ್ ಳ ಬಗ್ಗೆ ಇನ್ನೊಂದು ಲೇಖನ.

ಯ ನಿರೂಪಣೆ, ಹೊಸ ವಿಚಾರಗಳನ್ನು ಗೆ ತಿಳಿಸುವುದು... ಹೀಗೆ ಅತ್ಯಂತ ಗಂಭಿರ ರನ್ನು ಅದು ಸಮಾಜದಲ್ಲಿ ನಿರ್ವಹಿಸುತ್ತಾ ದೆ. ಅದರಲ್ಲೂ ಮುದ್ರಣ ಮಾಧ್ಯಮ ಾನಸದಲ್ಲಿ ತನ್ನ ಅಚ್ಚಳಿಯದ ಪ್ರಭಾವ ೆ. ಮಾಧ್ಯಮಗಳು ಯಾವ ಪಾತ್ರವನ್ನು



ಹಿಸುತ್ತವೆ ಎನ್ನುವುದು ಅದು ಯಾರ ಕೈಯಲ್ಲಿ ಂತ್ರಿಸಲ್ಪಡುತ್ತಿದೆ ಎಂಬುದರ ಮೇಲೆ ರ್ಧಾನವಾಗುತ್ತದೆ. ಜಾಗತೀಕರಣ ಈ ಳಲ್ಲಿ ಮಾಧ್ಯಮ ಕೇವಲ ಸೇವೆಯಾಗಿ ವಿಲ್ಲ, ಬಂಡವಾಳ ಹೂಡಿದವರಿಗೆ ವ್ಯಾಪಕ ಯ ತರುವ 'ಸರಕಾಗಿ' ಪರಿವರ್ತಿತವಾಗಿದೆ. *ಮಾಧ್ಯಮವೆಂಬುದು ವಿಪರೀತ ಲಾಭ ವ ಮತ್ತು ಅಭಿಪ್ರಾಯ ರೂಪಿಸುವ ನವಾಗಿರುವುದರಿಂದ ಆದರ ಮೇಲೆ ತ ಸಾಧಿಸಲು ಬಂಡವಾಳಗಾರರು, ರಾಷ್ಟ್ರೀಯ ಕಂಪನಿಗಳು, ಸಾಮ್ರಾಜ್ಯಶಾಹಿ ಗಳು ನಿರಂತರವಾಗಿ ಪ್ರಯತ್ನ ಪಡುತ್ತಿವೆ.* ಪ್ರಾಯ ನಿರೂಪಣೆಯಲ್ಲಿ ಪತ್ರಿಕೆಗಳು, ಧ್ಯಮಕ್ಕಿರುವ ಅಪಾರ ಶಕ್ತಿಯು ಕೆಲವು ಗಳಲ್ಲಿ ಸರ್ಕಾರವನ್ನೇ ಬದಲಾಯಿಸಲು, ಮೇಲು ಮಾಡಲು ಕಾರಣವಾಗಿದೆ. ೕರಿಕಾದ ಅಧ್ಯಕ್ಷರ ಚುನಾವಣೆಯಲ್ಲಿ ಪರ್ಟ್ ಮರ್ಡೋಕ್' ಮಾಲೀಕತ್ವದ 'ಸ್ಟಾರ್' . ನಿರ್ಣಾಯಕ ಪಾತ್ರ ವಹಿಸುತ್ತದೆ.

ಮಾಧ್ಯಮಕ್ಕೆ ಈ ಶಕ್ತಿ ಇರುವುದರಿಂದಲೇ ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ತಿ ಇಂದಿರಾಗಾಂಧಿಯವರು ಪತ್ರಿಕೆಗಳ , ಸಂಪಾದಕೀಯಗಳ ಮೇಲೆ ಹದ್ದಿನ ಕಣ್ಣಿನ ೕಲನೆ ನಡೆಸಿ ಸೆನ್ಸಾರ್‌ಷಿಗೆ ಒಳಪಡಿಸಿದ್ದು. ರ ವಿರುದ್ಧ ಪತ್ರಿಕೆಗಳು, ಸಂಪಾದಕೀಯವನ್ನೇ ಯದೆ ಖಾಲಿ ಬಿಟ್ಟು ಸಮರ ಸಾರಿದ್ದು ಈಗ ಾಸ.

ಪತ್ರಿಕೆಗಳಿಗೆ ಈ ಶಕ್ತಿಯಿರುವುದರಿಂದಲೇ ತ್ರ ಭಾರತದ ಎಲ್ಲಾ ಸರ್ಕಾರಗಳು ಈ ಾಕಾರ ನೀತಿಗಳ ಕುರಿತು ಎಚ್ಚರಿಕೆಯ ರ್ಧಾನಗಳನ್ನು ಕೈಗೊಳ್ಳುತ್ತಾ ಬಂದಿದೆ. ಆದರೆ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ತೃತ್ವದ ಎನ್.ಡಿ.ಎ ಸರ್ಕಾರ ಈ ಪರೆಯನ್ನು, ನೀತಿಗಳನ್ನು ಗಾಳಿಗೆ ತೂರಿ

ಪುಟ 8 ಕ್ಕೆ

ಮಾಧ್ಯಮ ಮಂಥನ

ಕೋಮುವಾದಕ್ಕೆ 'ಚಿತೆ' ಯಾವುದಯ್ಯಾ?

- ಎಲ್ಲಾ ಕೋಮುಗಲಭೆಗಳಲ್ಲಿ ಹಿಂದೂಗಳಿಗಿಂತ ಮುಸ್ಲಿಮರೇ ಹೆಚ್ಚಿನ ಸಂಖ್ಯೆಯಲ್ಲಿ ಸತ್ತಿದ್ದಾರೆ.
- ಮುಸ್ಲಿಮರಿಂದಲೇ ಗಲಭೆ ಆರಂಭವಾಯಿತು ಎಂಬ ಭಾವನೆ ಮೂಡಿಸುವ ತಂತ್ರವನ್ನು ಯೋಜಿತವಾಗಿ ಬಳಸಲಾಗುತ್ತದೆ.
- ಮುಸ್ಲಿಮರು ಸತ್ತರೂ ಹಿಂದೂಗಳು ಸತ್ತರೂ ಸಾವು ಸಾವೇ; ಅದು ಮಾನವ ಜೀವಿಯ ಸಾವು
- ಪತ್ರಕರ್ತ ಪದವೀಧರ ಆಗಿರಬೇಕೆಂದೇನೂ ಇಲ್ಲ; ಆದರೆ ಅವಶ್ಯವಾಗಿ ಜಾತ್ಯಾತೀತ ಆಗಿರಬೇಕು.
- ಕೋಮುವಾದ ಒಂದು ರಾಜಕೀಯ ಚದುರಂಗದಾಟ. ಇದನ್ನು ಸೋಲಿಸಬೇಕಿದೆ. ಇದು ಅವಶ್ಯವಾಗಿಯೂ ಒಂದು ರಾಜಕೀಯ ಸಂಘರ್ಷ. ಈ ವಿಚಾರದಲ್ಲಿ ರಾಜಕಾರಣಿಗಳು ಒಟ್ಟಾಗಲೇಬೇಕು.
- 2004ರ ಮಹಾಚುನಾವಣೆ ಕೋಮುವಾದಿ ಗಳನ್ನು ಸೋಲಿಸುವ ದಿಸೆಯಲ್ಲಿ ಒಂದು ಮಹಾ ಸಮರವೇ ಹೌದು.
- ಬಿಜೆಪಿಗೆ ತತ್ವ ಸಿದ್ಧಾಂತ ಏನೂ ಇಲ್ಲ. ಅಧಿಕಾರದ ರುಚಿಯಿಂದ ಅದು ಭ್ರಷ್ಟವಾಗಿದೆ. ಚುನಾವಣೆಗಳಲ್ಲಿ ಗೆಲ್ಲುವುದಷ್ಟೇ ಅದಕ್ಕೆ ಮುಖ್ಯ...

..... ಕೋಮುವಾದ ವಿರೋಧಿ ವೇದಿಕೆಯಲ್ಲಿ ಎಡಪಕ್ಷಗಳ ಮುಖಂಡರು, ಬುದ್ಧಿಜೀವಿಗಳು ಮಾಡಿದ ಭಾಷಣದ ಅಂಶಗಳಿವು ಎಂದು ಓದುಗರಿಗೆ ಭಾಸವಾಗಬಹುದು. ಆದರೆ ಇದು ಅರ್ಧ ಸತ್ಯ ಅಷ್ಟೆ. ಅಂದರೆ ಕೋಮುವಾದಕ್ಕೆ ಸಂಬಂಧಿಸಿದ ಕಾರ್ಯಕ್ರಮ ಹೌದು; ಆದರೆ ಭಾಷಣ ಮಾಡಿದವರು ಎಡಪಕ್ಷಗಳ ಮುಖಂಡರು ಖಂಡಿತಾ ಅಲ್ಲ. ಈ ಮಾತುಗಳು ಕೇಳಿಬಂದದ್ದು ಮಾಧ್ಯಮ ತಜ್ಞರ ದಿಗ್ಗಜರ ಬಾಯಿಯಿಂದ.

ವಿಶ್ವಕುಂದಾಪುರ

'ಕೋಮು ಸಂಘರ್ಷದ ವರದಿಗಾರಿಕೆ - ಗುಜರಾತ್ ಪಾಠ 2002' ಎಂಬ ಕಾರ್ಯಾಗಾರ ದಲ್ಲಿ ಮತೀಯವಾದಿ ಶಕ್ತಿಗಳು ಹಾಗೂ ಅವುಗಳ ರಾಜಕೀಯ ರಕ್ಷಕರು ತೀಕ್ಷ್ಣ ಪ್ರಹಾರಕ್ಕೆ ಒಳಗಾದರು. ಜೂನ್ ಎರಡನೇ ವಾರ (7-8) ಬೆಂಗಳೂರಿನಲ್ಲಿ ನಡೆದ ಎರಡು ದಿನಗಳ ಕಾರ್ಯಾಗಾರವನ್ನು ಮಾಧ್ಯಮದಲ್ಲಿ ಮಹಿಳೆಯರು ಜಾಲ, ಬೆಂಗಳೂರು (ಎನ್.ಡಬ್ಲ್ಯೂ. ಎಂ. ಬಿ) ಮತ್ತು ರಾಷ್ಟ್ರೀಯ ಕಾನೂನು ಕಾಲೇಜಿನ ಜಾತೀಯತೆ, ಕೋಮುವಾದ ಹಾಗೂ ಕಾನೂನು ಅಧ್ಯಯನ ಕೇಂದ್ರ ಸಂಯುಕ್ತವಾಗಿ ಇದನ್ನು ವ್ಯವಸ್ಥೆಗೊಳಿಸಿದ್ದವು. ಕರ್ನಾಟಕ ಸರಕಾರದ ವಾರ್ತಾ ಇಲಾಖೆಯ ಬೆಂಬಲವಿತ್ತು.

ಗುಜರಾತ್ ಕೋಮುಗಲಭೆಯನ್ನು ಹೊರಜಗತ್ತಿಗೆ ತಿಳಿಸುವಲ್ಲಿ ಮುದ್ರಣ ಹಾಗೂ ಎಲೆಕ್ಟ್ರಾನಿಕ್ - ಈ ಎರಡೂ ಮಾಧ್ಯಮ ವಹಿಸಿದ ಪಾತ್ರ, ಗುಜರಾತಿ ಪತ್ರಿಕೆಗಳು ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳಲು ಪರಿಸ್ಥಿತಿಯನ್ನು ಬಳಸಿಕೊಂಡ ಹೇಯ ರೀತಿ, ವರದಿಗಾರರು ಎದುರಿಸಿದ ಸಂಕಷ್ಟ ಮೊದಲಾದವು ಕಾರ್ಯಾಗಾರದಲ್ಲಿ ಚರ್ಚೆಗೆ ಒಳಗಾದವು. ಕೆಲವೇ ಕೆಲ ಮುಖ್ಯ ಅಂಶಗಳನ್ನಷ್ಟೇ ಇಲ್ಲಿ ನೀಡಲಾಗಿದೆ.

ಗುಜರಾತ್ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಮಾಧ್ಯಮವಹಿಸಿದ ಪಾತ್ರ ಅಭಿನಂದನೀಯ ಎಂದು ಕಾರ್ಯಾಗಾರವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಶ್ಲಾಘಿಸಿದರು. ಅಲ್ಪಸಂಖ್ಯಾತರ ಹತ್ಯಾಕಾಂಡದ ಬಗ್ಗೆ ಪ್ರಧಾನಿ ಎ.ಬಿ.ವಾಜಪೇಯಿ ದಿನಕ್ಕೊಂದು ಬಗೆಯ ನಿಲುವು ತಳೆದದ್ದನ್ನು ಅವರು ಕಟುವಾಗಿ ಟೀಕಿಸಿದರು.

ರಾಷ್ಟ್ರೀಯ ಕಾನೂನು ಕಾಲೇಜಿನ ನಿರ್ದೇಶಕ ಡಾ.ಮೋಹನ್ ಗೋಪಾಲ, ಗುಜರಾತ್ ಗಲಭೆಗಳ ಸಂದರ್ಭದಲ್ಲಿ ದೇಶದ ಕಾನೂನು ವ್ಯವಸ್ಥೆ ವಿಫಲಗೊಂಡಿದ್ದನ್ನು ಬೆಟ್ಟು ಮಾಡಿ ತೋರಿಸಿದರು.

ಗುಜರಾತ್‌ನಲ್ಲಿ ಸಂವಿಧಾನ ಯಂತ್ರ ವಿಫಲ ವಾದಾಗ ಕಾನೂನು ಎಲ್ಲಿತ್ತು, ವೃದ್ಧ ಮಹಿಳೆಯನ್ನು ಕೊಲ್ಲುವಾಗ, ಗರ್ಭಿಣಿಯ ಹೊಟ್ಟೆ ಬಗೆಯುವಾಗ ಕಾನೂನು ಎಲ್ಲಿತ್ತು ಎಂಬಿತ್ಯಾದಿ ಮಾರ್ಮಿಕ ಪ್ರಶ್ನೆಗಳನ್ನು ಅವರು ಕೇಳಿದರು. ತಪ್ಪಿತಸ್ಥರನ್ನು ಶಿಕ್ಷಿಸುವುದಷ್ಟೇ ಕಾನೂನಿನ ಕೆಲಸವೇ ಎಂದೂ ಪ್ರಶ್ನಿಸಿದರು. ಶಾಂತಿ ನ್ಯಾಯದ ಬುನಾದಿ. ಶಾಂತಿ ನೆಲೆಸಿದ್ದಾಗ ಮಾತ್ರವೇ ನ್ಯಾಯ ದೊರಕಲು ಸಾಧ್ಯ. ವೈಯಕ್ತಿಕ ಸಂಬಂಧಗಳಲ್ಲೂ ಸಾಮಾಜಿಕವಾಗಿಯೂ ಶಾಂತಿಯಿರಬೇಕು, ಶಾಂತಿಗೆ ಅಹಿಂಸೆ ಬೇಕು. ಪರಸ್ಪರರನ್ನು ಗೌರವಿಸುವ ಮನೋಭಾವ ಇರಬೇಕು ಎಂದು ಮೋಹನ ಗೋಪಾಲ್ ನುಡಿದರು.

ಸಂಘಪರಿವಾರದ ಆಕ್ರಮಣಕಾರಿ ಕೃತ್ಯಗಳನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಅವರು, ಶಾಂತಿಯುತ ಅಹಿಂಸಾತ್ಮಕ ಸಂಧಾನದ ಅವಕಾಶಗಳು ಕಡಿಮೆ ಯಾಗುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು.

ಅಂತಃಕಲಹ

ಕೋಮುಗಲಭೆ ಕೇವಲ ಕೋಮುಗಲಭೆಯಲ್ಲ, ಅದು ಅಂತಃಕಲಹ ಎಂದವರು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಪ್ರಧಾನ ಸಂಪಾದಕ ಶೇಖರ ಗುಪ್ತಾ. ಕಳೆದ ಒಂದು ದಶಕದಲ್ಲಿ ಗುಜರಾತ್ ಕೋಮುಗಲಭೆಯೇ ದೊಡ್ಡ ಕೋಮುಗಲಭೆ ಎಂದರು. ಪತ್ರಿಕೆಗಳು ಹಾಗೂ ಟಿ.ವಿ. ಜಾಲಗಳು ಇಲ್ಲದಿದ್ದರೆ ಗುಜರಾತ್‌ನಲ್ಲಿ ಸಾವಿನ ಸಂಖ್ಯೆ ಇನ್ನೂ ಹೆಚ್ಚುತ್ತಿತ್ತು ಎಂದರು.

ಮಾಧ್ಯಮದಲ್ಲಿರುವವರು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಅವಶ್ಯ ಎಂದು ಪ್ರತಿಪಾದಿಸಿದರು.

'ಹಿಂದೂ ವಿರೋಧಿ' ಪತ್ರಿಕೆಗಳನ್ನು ಬಹಿಷ್ಕರಿಸಲು ವಿಎಚ್‌ಪಿ, ಬಜರಂಗದಳ ಕರೆ ಕೊಟ್ಟಿದ್ದನ್ನು ಪ್ರಸ್ತಾಪಿಸಿದರು. ಗುಜರಾತ್‌ನಲ್ಲಿ ಸ್ಥಳೀಯವಾಗಿ ಪತ್ರಕರ್ತರಿಗೆ ಭೀತಿ ಇರುವುದು ನಿಜ ಎಂದರು. ತೃತೀಯ ಶಕ್ತಿಯಾಗಿ ಕೆಲಸ ಮಾಡುವ ಸಾಮರ್ಥ್ಯ ಮಾಧ್ಯಮಕ್ಕಿದೆ ಎಂದು ಹೇಳಿದರು.

ಗುಜರಾತ್ ಕೋಮುಗಲಭೆ ವ್ಯವಸ್ಥಿತ ಕುಕೃತ್ಯ ಎನ್ನುವುದನ್ನು ಹಾಗೂ ಅದರಲ್ಲಿ ಬಿಜೆಪಿ ಸರಕಾರ ಹಾಗೂ ಸಂಘಪರಿವಾರದ ಪಾತ್ರದ ನಾನಾ ಮುಖಗಳನ್ನು ಬಯಲು ಮಾಡುವಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ನಿರ್ವಹಿಸಿದ ಕೆಲಸ ವ್ಯಾಪಕ ಶ್ಲಾಘನೆಗೆ ಒಳಗಾಗಿದೆ. ಈ ಪತ್ರಿಕೆಯ ಗಾಂಧಿನಗರದ ವಿಶೇಷ ಬಾತ್ಮಿದಾರ ದರ್ಶನ ದೇಸಾಯಿ ಖುದ್ದು ಹಾಜರಿದ್ದು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದು ಕಾರ್ಯಾಗಾರದ ವಿಶೇಷ ಅಂಶವಾಗಿತ್ತು.

ಮುಸ್ಲಿಮರ ಹತ್ಯಾಕಾಂಡವನ್ನು ಗುಜರಾತಿ ಪತ್ರಿಕೆಗಳ ಮಾಲಿಕರು ತಮ್ಮ ವಾಣಿಜ್ಯ ವರ್ಧನೆಗೆ ಹೇಗೆ ಬಳಸಿಕೊಂಡರು ಎನ್ನುವುದನ್ನು ಅವರು ಎಳೆಎಳೆಯಾಗಿ ಬಿಡಿಸಿಟ್ಟರು. ಕೋಮು ವಾದಕ್ಕಿಂತ ವಾಣಿಜ್ಯ ಹಿತಾಸಕ್ತಿಯೇ ಮೇಲುಗೈ ಪಡೆದಂತೆ ಕಾಣುತ್ತದೆ ಎಂದರು.

ಕಳೆದ ಎರಡು ತಿಂಗಳಲ್ಲಿ ಗುಜರಾತಿ ಪತ್ರಿಕೆಗಳ ಪ್ರಸಾರ ಹೆಚ್ಚಾಗಿದೆ. ಮುಸ್ಲಿಂ ವಿರೋಧಿ ಲೇಖನ - ವರದಿಗಳಿಂದಲೇ ತುಂಬಿರುತ್ತವೆ. ನಮ್ಮ ಓದುಗರ ಬಯಕೆಯನ್ನು ಪೂರ್ತಿಗೊಳಿಸಲು ಈ ರೀತಿ ಮಾಡಲಾಗುತ್ತದೆ ಎಂದು ಒಬ್ಬ ಸಂಪಾದಕರು ಸಮರ್ಥಿಸಿಕೊಂಡಿದ್ದನ್ನು ವಿಷಾದದಿಂದ ವಿವರಿಸಿದರು.

ಇದೇ ಮೊದಲಬಾರಿಗೆ ಹಿಂಸಾಚಾರ ಇಷ್ಟೊಂದು ವ್ಯಾಪಕ ಪ್ರಮಾಣದಲ್ಲಿ ಇತ್ತು. ರಾಜ್ಯಸರಕಾರ ಈ ಪ್ರಮಾಣದಲ್ಲಿ ಶಾಮೀಲಾಗಿದ್ದು ಕೂಡ ಇದೇ ಮೊದಲು ಎಂದ ದರ್ಶನ ದೇಸಾಯಿ, ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದ ಪರಿಸ್ಥಿತಿಯಲ್ಲಿ ಈ ಬಾರಿ ವರದಿ ಮಾಡ ಬೇಕಾಯಿತು ಎಂದರು. 1992ರಲ್ಲಿ ಬಾಬರಿ ಮಸೀದಿ ನಾಶದ ನಂತರ ಸೂರತ್‌ನಲ್ಲಿ ಭುಗಿಲೆದ್ದ ಗಲಭೆ ವೇಳೆ ಕೂಡ ಸರಿಸುಮಾರು ಇಂಥದ್ದೇ ಸ್ಥಿತಿಯಿತ್ತು ಎಂದರು.

ಗುಜರಾತ್ ವಿದ್ಯಮಾನಕ್ಕೆ ಸಂಬಂಧಿಸಿದಂತೆ ಗುಜರಾತಿ ಭಾಷಾ ಪತ್ರಿಕೆಗಳು ಹಾಗೂ ಇತರ, ಮುಖ್ಯವಾಗಿ ಇಂಗ್ಲೀಷ್ ಪತ್ರಿಕೆಗಳ ಮಧ್ಯೆ ಪೂರ್ಣ ವಿಭಜನೆ ಇರುವುದನ್ನು ದೇಸಾಯಿ ವಿವರಿಸಿದರು. ಮುಸ್ಲಿಂ ಪರ ಎನ್ನುವಂತೆ ಕಾಣುವ ತಮ್ಮ ವಸ್ತುನಿಷ್ಠ ವರದಿಗಳ ಕಾರಣದಿಂದ ಅಲ್ಲಿನ ಮಾಧ್ಯಮ ಮಿತ್ರರನೇಕರು ತಮ್ಮನ್ನು 'ದರ್ಶನ್ ಖಾನ್' ಎಂದು ಕರೆದಿದ್ದನ್ನು ನೋವಿನಿಂದ ಸ್ಮರಿಸಿಕೊಂಡರು.

ಬಲಪಂಥೀಯವಾಗುತ್ತಿರುವ ಮಾಧ್ಯಮ ಗಮನ

ಮಾಧ್ಯಮಗಮನ ಹೆಚ್ಚೆಚ್ಚು ಬಲಪಂಥೀಯ ವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದವರು ಖ್ಯಾತ ಲೇಖಕ ಹಾಗೂ ವಿಶ್ಲೇಷಕ ಅಚಿನ್ ವನಾಯಕ್. ಬುದ್ಧಿಜೀವಿಗಳು ಐತಿಹಾಸಿಕವಾಗಿ ಅನ್ಯಾಯದ ಟೀಕಾಕಾರರು. ಒಂದು ಕಾಲದಲ್ಲಿ ಆಡಳಿತಗಾರರಿಗೆ ಸತ್ಯ ಹೇಳುವುದು ಬುದ್ಧಿಜೀವಿಗಳು ಹಾಗೂ ಪತ್ರಕರ್ತರ ಮುಖ್ಯ ಕೆಲಸವಾಗಿತ್ತು. ಆದರೆ ಈಗ ಆ ಮೌಲ್ಯ ನಶಿಸಿಹೋಗುತ್ತಿದೆ. ಮಾಧ್ಯಮದವರ ಗಮನ ಹೆಚ್ಚು ಬಲಪಂಥೀಯವಾಗುತ್ತಿದೆ ಎಂದು ವಿಷಾದಿಸಿದರು.

ರಾಷ್ಟ್ರೀಯತೆ ಅಥವಾ ವಿಶ್ವಮಾನವ ಮೌಲ್ಯಗಳು - ಈ ಎರಡರಲ್ಲಿ ಒಂದನ್ನು ಆಯ್ದುಕೊಳ್ಳಬೇಕು ಎಂದರು.

ಕೋಮುಗಲಭೆಗಳಿಂದ ಮಹಿಳೆಯರು ಅನುಭವಿಸಬೇಕಾದ ಸಮಸ್ಯೆಗಳ ವಿಚಾರವಾಗಿ, ಮುಂಬಯಿ ಕೋಮುಗಲಭೆಗಳ ಬಗ್ಗೆ ವ್ಯಾಪಕವಾಗಿ ಬರೆದಿರುವ ಹಾಗೂ ಮುಂಬಯಿ ಮುಸ್ಲಿಂ ಜನರೊಡನೆ ಒಡನಾಡಿದ ಫ್ರೀಲ್ಯಾನ್ಸ್ ಪತ್ರಕರ್ತೆ ಜ್ಯೋತಿ ಪುನ್ವಾನಿ ಅನೇಕ ಅನುಭವಗಳನ್ನು ಹಂಚಿಕೊಂಡರು. 'ದ ಹಿಂದೂ' ಪತ್ರಿಕೆಯ (ಮುಂಬಯಿ) ಡೆಪ್ಯುಟಿ ಸಂಪಾದಕಿ ಕಲ್ಪನಾ ಶರ್ಮಾ 'ಗುಜರಾತ್ ಗಲಭೆಗಳ ವಿಚಾರವಾಗಿ ಪತ್ರಿಕೆಗಳ ಕವರೇಜ್ ಬಗ್ಗೆ ಮಾತನಾಡಿದರು.

ಬೆಂಗಳೂರಿನಿಂದ ಪ್ರಕಟವಾಗುವ ಪ್ರಧಾನ ಕನ್ನಡ ಹಾಗೂ ಇಂಗ್ಲಿಷ್ ಪತ್ರಿಕೆಗಳು ಯಾವ ರೀತಿ ಸ್ಪಂದಿಸಿದವು ಎನ್ನುವುದನ್ನು ಫ್ರೀಲಾನ್ಸ್ ಪತ್ರಕರ್ತೆ

ಪುಟ 8 ಕ್ಕೆ

ಜುಲೈ 28, 2002

ಉಪರಾಷ್ಟ್ರಪತಿ ಚುನಾವಣೆ - ಹೋರಾಟ ಅನಿವಾರ್ಯ

ಉಪರಾಷ್ಟ್ರಪತಿ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಬೈರೂನ್ ಸಿಂಗ್ ಶೆಖಾವತ್‌ರನ್ನು ಹೆಸರಿಸುವ ಮೂಲಕ ಬಿಡ್ಡಿ ಪಡೆಯ ಭಂಡ ರಾಜಕೀಯ ಪುನರಾವರ್ತನೆಯಾಗಿದೆ. ರಾಷ್ಟ್ರಪತಿ ಚುನಾವಣೆಯಲ್ಲಿ ಹಲವು ಹೆಸರುಗಳನ್ನು ತೇಲಿಬಿಟ್ಟು ಕೊನೆಗೆ 'ಕಲಾಂ'ರನ್ನು ಅಭ್ಯರ್ಥಿಯನ್ನಾಗಿಸಿ ಗುಜರಾತ್ ಘಟನೆಯ ಕಳಂಕವನ್ನು ತೊಳೆದುಕೊಳ್ಳುವ ನಾಟಕವಾಡಿತು. ಸಂಪ್ರದಾಯದಂತೆ ರಾಷ್ಟ್ರಪತಿ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಸರ್ವಾನುಮತದಿಂದ ಆಯ್ಕೆ ಮಾಡಿ ಆ ಹುದ್ದೆಯ ಘನತೆಯನ್ನು ಎತ್ತಿ ಹಿಡಿಯುವೆವೆಂದು ಹೇಳಲಾಗುತ್ತಿತ್ತು. ಇವೆಲ್ಲಕ್ಕೂ ತಿಲಾಂಜಲಿ ಇಟ್ಟ ಬಿಜೆಪಿ ಗಳು ಈಗ ಏಕಾಏಕಿ ಉಪರಾಷ್ಟ್ರಪತಿ ಸ್ಥಾನಕ್ಕೆ ಬೈರೂನ್ ಸಿಂಗ್ ಶೆಖಾವತ್‌ರನ್ನು ಹೆಸರಿಸಿದ್ದಾರೆ. ಈ ಬಾರಿಯಾದರೂ ಸರ್ವಸಮ್ಮತ ಅಭ್ಯರ್ಥಿಯನ್ನು ಕಣಕ್ಕಿಳಿಸುವ ವಿಚಾರದಲ್ಲಿ ವಿರೋಧ ಪಕ್ಷಗಳೊಂದಿಗೆ ವಿಚಾರ ವಿನಿಮಯ ನಡೆಸಬಹುದಿತ್ತು. ಸರ್ವಾನುಮತದಿಂದ ಆಯ್ಕೆಯಾಗಬೇಕು ಎಂದು ಹೇಳುತ್ತಿದ್ದ ಬಿಜೆಪಿಯವರು ಶೇಖಾವತ್‌ರನ್ನು ಹೆಸರಿಸುವ ಮುನ್ನ ವಿರೋಧ ಪಕ್ಷಗಳ ಅಭಿಪ್ರಾಯ ಕೇಳಲಿಲ್ಲವೇಕೆ? ಕಳೆದ ಒಂದು ತಿಂಗಳಿಂದ ಮಾಧ್ಯಮಗಳಲ್ಲಿ ಶೆಖಾವತ್ ಹೆಸರನ್ನು ತೇಲಿಬಿಟ್ಟು ಬಿಜೆಪಿ ಪಕ್ಷವು ವಿರೋಧ ಪಕ್ಷಗಳೊಂದಿಗೆ ಚರ್ಚಿಸದೇ ಏಕಾಏಕಿ ತನ್ನ ಅಭ್ಯರ್ಥಿಯನ್ನು ಘೋಷಿಸಿದ್ದಾರೆ. ಆ ಮೂಲಕ ತಮ್ಮ ನಿರ್ಧಾರವನ್ನು ಇತರ ಪಕ್ಷಗಳ ಮೇಲೆ ಹೇರುವ ತಂತ್ರವನ್ನು ಬಿಜೆಪಿಯು ಅನುಸರಿಸಿದ್ದಾರೆ. ಹೀಗಿರುವಾಗ ಸಹಜವಾಗಿಯೇ ವಿರೋಧ ಪಕ್ಷಗಳ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸೂಕ್ತ ನಿರ್ಧಾರ ಮಾಡಿದ್ದಾರೆ. ಫ್ಯಾಸಿಸ್ಟ್ ಕೋಮುವಾದಿ ಶಕ್ತಿಗಳನ್ನು ಅತ್ಯಗತ್ಯವಾಗಿ ಎದುರಿಸಬೇಕಾದುದರಿಂದ ಕಾಂಗ್ರೆಸ್‌ನ ಸುಶಿಲ್ ಕುಮಾರ್ ಶಿಂಧೆಯವರನ್ನು ಬೆಂಬಲಿಸುವ ಎಡಪಕ್ಷಗಳ ತೀರ್ಮಾನ ಸೂಕ್ತವಾದುದಾಗಿದೆ ಎಂದು ಸುರ್ಜಿತ್ ಹೇಳುತ್ತಾರೆ. ಈ ಬಗ್ಗೆ ಪತ್ರವನ್ನು ಪ್ರಧಾನಿಗೆ ಬರೆದಿದ್ದಾರೆ. ಈಗಿನ ಸಂದರ್ಭದಲ್ಲಿ ಗುಜರಾತ್‌ನಲ್ಲಿ ನಡೆದ ಜನಾಂಗೀಯ ಹತ್ಯಾಕಾಂಡ ಪುನರಾವರ್ತನೆಯಾಗದಂತೆ ತಡೆಯಬೇಕಾದರೆ ಅಗತ್ಯವಾಗಿ ಕಾಂಗ್ರೆಸ್‌ನ ಅಭ್ಯರ್ಥಿ ಶಿಂಧೆಯವರನ್ನು ಬೆಂಬಲಿಸಬೇಕಿದೆ.



ಕೃಪೆ : ದಿ ಹಿಂದೂ

ಬೆಂಗಳೂರಿನಲ್ಲಿ ಕ್ಯಾಪ್ಟನ್ ಲಕ್ಷ್ಮಿ...

ಪುಟ 5 ರಿಂದ

ಜನಪರ ಕಾಳಜಿ ಲಕ್ಷ್ಮಿಯವರಲ್ಲಿ ರಕ್ತಗತವಾಗಿರುವ ವಿಶೇಷ ಗುಣವಾಗಿದೆ ಎಂದು ಅಧ್ಯಕ್ಷತೆ ವಹಿಸಿದ್ದ ನ್ಯಾಯಮೂರ್ತಿ ಬಾಲಕೃಷ್ಣ ಹೇಳಿದರು. ಡಾ.ಲಕ್ಷ್ಮಿ ಸೆಹಗಲ್ ಇಡೀ ಭಾರತ ದೇಶದ ಸ್ತ್ರೀತ್ವವನ್ನು ಪ್ರತಿನಿಧಿಸುತ್ತಾರೆ ಎಂದ ಬಾಲಕೃಷ್ಣ ಈ ವೀರ ಮಹಿಳೆ ಜೀವಂತದಂತ ಕತೆ ಎಂದು ಬಣ್ಣಿಸಿದ್ದರು. ಇವರು ನಿಜ ಅರ್ಥದ ದೇಶಪ್ರೇಮಿ ಎಂದರು. ರಾಜಭವನವನ್ನು ಕೇಸರೀಕರಣಗೊಳಿಸುತ್ತಿರುವಂಥ ಇಂದಿನ ಸನ್ನಿವೇಶದಲ್ಲಿ ಜಾತ್ಯಾತೀತ ಮೌಲ್ಯಗಳ ರಕ್ಷಣೆಯಲ್ಲಿ ರಾಷ್ಟ್ರಪತಿ ಚುನಾವಣೆ ಮಹತ್ವ ಪಡೆದಿದೆ ಎಂದು ಜಸ್ಟೀಸ್ ಬಾಲಕೃಷ್ಣ ಅಭಿಪ್ರಾಯಪಟ್ಟರು.

ಆಳುವ ಎನ್‌ಡಿಎ/ಬಿಜೆಪಿ ರಾಷ್ಟ್ರಪತಿ ಅಭ್ಯರ್ಥಿ ವಿಚಾರದಲ್ಲಿ ಸಹಮತಕ್ಕೆ ಬರುವ ಅವಕಾಶವನ್ನು ಹಾಳುಮಾಡಿದರು ಎಂದು ಮಾಜಿ ಸಂಸತ್ ಸದಸ್ಯೆ ಸುಭಾಷಿಣಿ ಅಲಿ ಟೀಕಿಸಿದರು. ರಾಷ್ಟ್ರಪತಿ ಸ್ಥಾನ ಅಲಂಕಾರಿಕವಾದುದಲ್ಲ. ಈ ದೇಶದ ಸಂವಿಧಾನ, ಜಾತ್ಯಾತೀತತೆ, ಪ್ರಜಾಪ್ರಭುತ್ವ ರಕ್ಷಣೆ ಅಲ್ಲದೇ ಜನರ ಜೀವನವನ್ನು ರಕ್ಷಿಸುವ ಗುರುತರ ಹೊಣೆಗಾರಿಕೆ ರಾಷ್ಟ್ರಪತಿ ಮೇಲಿದೆ ಎಂದು ಅವರು ಹೇಳಿದರು.

ವಿಧಾನಪರಿಷತ್ತಿನ ಪ್ರತಿಪಕ್ಷ ನಾಯಕ ಕೆ.ಎಚ್.ಶ್ರೀನಿವಾಸ ಮಾತನಾಡಿ, ತಮ್ಮ ಅಣ್ಣನ ಬಳಿ ಸೈನಿಕ ಉಡುಪಿನಲ್ಲಿದ್ದ ತರುಣಿ ಲಕ್ಷ್ಮಿ ಸೆಹಗಲ್‌ರ ಭಾವಚಿತ್ರ ಇದ್ದುದನ್ನು ಭಾವಪರವಶತೆಯಿಂದ ನೆನಪಿಸಿಕೊಂಡರು. ಲಕ್ಷ್ಮಿ ಬಗ್ಗೆ ದೇಶ ವಿಸ್ಮೃತಿಯಿಂದ ಕೂಡಿತ್ತು. ಸ್ವಾತಂತ್ರ್ಯ ಸಮರದ ಉದ್ದಗಲ ಪರಂಪರೆ ಈ ವೀರರಮಣಿಯನ್ನು ದೇಶಕ್ಕೆ ಮತ್ತೆ ನೆನಪು ಮಾಡಿಕೊಟ್ಟು ಎಡಪಕ್ಷಗಳು ಹಾಗೂ ಇತರ ಶಕ್ತಿಗಳು ಅಭಿನಂದನಾರ್ಹರು ಎಂದು ಶ್ರೀನಿವಾಸ ಹೇಳಿದರು.

ಕ್ಯಾ. ಲಕ್ಷ್ಮಿ ಆಯ್ಕೆಯಾದರೆ ರಾಷ್ಟ್ರಪತಿ ಸ್ಥಾನದ ಘನತೆ ಹೆಚ್ಚಾಗಲಿದೆ ಎಂದು ಅವರು ನುಡಿದರು.

- ವಿಶ್ವ ಕುಂದಾಪುರ.

.... ಕೋಮುವಾದಕ್ಕೆ 'ಚಿತೆ' ಯಾವುದಯ್ಯಾ?

ಪುಟ 7 ರಿಂದ

ಅಮ್ಮು ಜೋಸೆಫ್ ವಿವರಿಸಿದರು. ಕೋಮು ಸೌಹಾರ್ದ ಚಟುವಟಿಕೆಗಳಿಗೆ ಪ್ರಚಾರ ಸಿಗದಿರುವುದನ್ನು ಗಮನಕ್ಕೆ ತಂದರು.

ಕರ್ನಾಟಕದಲ್ಲಿ ಮತಾಂಧ ಶಕ್ತಿಗಳು ನಡೆಸುತ್ತಿರುವ ಚಟುವಟಿಕೆಗಳು ಹಾಗೂ ಅವುಗಳನ್ನು ಎದುರಿಸುವಲ್ಲಿ ಮಾಧ್ಯಮದವರು ವಹಿಸಬೇಕಾದ ಎಚ್ಚರ - ಪಾತ್ರದ ಬಗ್ಗೆ 'ಲಂಕೇಶ್ ಪತ್ರಿಕೆ' ಸಂಪಾದಕಿ ಗೌರಿ ಲಂಕೇಶ್ ಮತ್ತು 'ಈ ಟಿವಿ' ವರದಿಗಾರ ಜಿ.ಎನ್.ಮೋಹನ್ ವಿವರವಾಗಿ ಮಾತನಾಡಿದರು.

ನಮ್ಮ ಪತ್ರಕರ್ತರು ಕೋಮುವಾದವನ್ನು ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬ ಮೂಲಭೂತ ಪ್ರಶ್ನೆಗಳನ್ನು ಮೋಹನ್ ಮುಂದಿಟ್ಟರು. ಕೋಮುಗಲಭೆಗಳನ್ನು ಕ್ರೈಮ್ ರಿಪೋರ್ಟಿಂಗ್ ಮಟ್ಟಕ್ಕೆ ಇಳಿಸಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು.

ಪ್ರಚಾರದ 'ಆಮ್ಲಜನಕ'

ಉಗ್ರಗಾಮಿಗಳು-ಭಯೋತ್ಪಾದಕರಿಗೆ ಪ್ರಚಾರದ ಆಮ್ಲಜನಕ ಒದಗಿಸಬಾರದು ಎಂದು 'ಟೈಮ್ಸ್ ಆಫ್ ಇಂಡಿಯಾ'ದ (ನವದೆಹಲಿಯ ಡೆಪ್ಯುಟಿ ಚೀಫ್ ಆಫ್ ಬ್ಯೂರೋ) ಸಿದ್ದಾರ್ಥ ವರದರಾಜನ್ ಎಚ್ಚರಿಕೆ ನೀಡಿದರು.

ಪ್ರಜೆಗಳ ಹಕ್ಕು ಬಾಧ್ಯತೆಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಧರ್ಮ - ದೇವರ ಹೆಸರನ್ನು ದುರುಪಯೋಗ ಮಾಡುವುದನ್ನು ಜನರಿಂದ ಪ್ರತ್ಯೇಕಗೊಳಿಸುವ ಕೆಲಸವನ್ನು ಪತ್ರಕರ್ತರು ಮಾಡಬೇಕು ಎಂದು ಸಿದ್ದಾರ್ಥ ಸಲಹೆ ಮಾಡಿದರು.

ಇಂಗ್ಲಿಷ್ ಪತ್ರಿಕೋದ್ಯಮಕ್ಕೆ ಮಹತ್ವದ ತಿರುವು ಕೊಟ್ಟ ಸಂಪಾದಕ ವಿನೋದ್ ಮೆಹ್ತಾ. ಅವರೀಗ 'ಔಟ್‌ಲುಕ್' ಸಂಪಾದಕರು. ಅವರು ತಮ್ಮ ಸುದೀರ್ಘ ಪ್ರಬಂಧದಲ್ಲಿ ಕೋಮುವಾದ ಕೋಮುವಾದಿಶಕ್ತಿಗಳನ್ನು ಸೋಲಿಸುವಲ್ಲಿ ಮಾಧ್ಯಮಕ್ಕೂ ಮಹತ್ವದ ಪಾತ್ರವಿದೆ ಎಂದು ಪ್ರತಿಪಾದಿಸಿದರು.

ಭಾರತದ ಜನಸಂಖ್ಯೆಯ ಶೇ 87 ಮಂದಿ ಹಿಂದುಗಳು. ಅವರಲ್ಲಿ ಬಹಳಷ್ಟು ಜನರು ಆರ್.ಎಸ್.ಎಸ್, ವಿ.ಎಚ್.ಪಿ ನಿಲುವುಗಳನ್ನು ಒಪ್ಪಿಕೊಳ್ಳುವುದಿಲ್ಲ. ಹಿಂದೂತ್ವ ವಿರೋಧಿ ಹೋರಾಟದಲ್ಲಿ ಇವರೇ ನಮ್ಮ ಸಹಜ ಮಿತ್ರರು ಎಂದು ಮೆಹ್ತಾ ನುಡಿದರು. ಅಲ್ಪಸಂಖ್ಯಾತರಲ್ಲಿ ಕೂಡ ಕೋಮುವಾದವನ್ನು ವಿರೋಧಿಸುವ ಜನರಿದ್ದಾರೆ. ಇವರೆಲ್ಲರನ್ನು ಗೆಲ್ಲುವುದು ನಮ್ಮ ಗುರಿಯಾಗಬೇಕು. ಅದರಲ್ಲಿ ನಾವು ಸೋತರೆ ಆಟ ಮುಗಿಸಿದಂತೆಯೇ ಎಂದವರು ಎಚ್ಚರಿಸಿದರು.

ಮತೀಯವಾದಿಗಳನ್ನು ಒಪ್ಪದ, ಆದರೆ ಅವರ ವಿರುದ್ಧ ಸಂಘರ್ಷಕ್ಕೂ ಇಳಿಯದ ಮೌನಿ ಬಹುಸಂಖ್ಯಾತರಿಗೆ (ಅಂದರೆ silent majority) ಸಂದೇಶ ತಲುಪಿಸುವುದು ಮುಖ್ಯ. ತುಂಬಾ ಯೋಚಿಸಿ, ಅನುನಯದಿಂದ ಆಕ್ರಮಣಕಾರಿಯಲ್ಲದ ರೀತಿಯಲ್ಲಿ ಈ ಕೆಲಸವನ್ನು ಮಾಡಬೇಕಿದೆ ಎಂದರು.

ಕೋಮುವಾದಿಗಳನ್ನು ರಾಜಕೀಯವಾಗಿ ಸೋಲಿಸಬೇಕಾಗಿದ್ದು 2004ರ ಮಹಾಚುನಾವಣೆ ಅದಕ್ಕೆ ಉತ್ತಮ ಅವಕಾಶ ಎಂದು ವಿನೋದ್ ಮೆಹ್ತಾ ಹೇಳಿದ್ದು ಮಾಧ್ಯಮದ ಮೇಲಿನ ಗುರುತರ ಜವಾಬ್ದಾರಿಯೇನೆಂಬುದರ ಸಂಕೇತವಾಗಿದೆ.

ರಾಷ್ಟ್ರೀಯ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ಶ್ಯಾಮ್, ವಿವೇಕ್, ಗೌರಿ ಮತ್ತು ಶ್ರೀಮಯ್ ಘೋಷ್ ಕೋಮುವಾದದ ವಿಷವನ್ನು ಎದುರಿಸುವುದಕ್ಕೆ ಸಂಬಂಧಿಸಿದಂತೆ ಕಾನೂನಿನ ಹಲವು ಆಯಾಮಗಳ ಮೇಲೆ ಬೆಳಕು ಚೆಲ್ಲಿದರು.

ಇಡೀ ದೇಶಕ್ಕೆ ದೊಡ್ಡ ಸವಾಲು ಹಾಕಿರುವ ಫ್ಯಾಸಿಸ್ಟ್ ಕೋಮುವಾದದ ವಿಚಾರದಲ್ಲಿ ಇಂಥ ಒಂದು ಗಂಭೀರ ಚಿಂತನೆ ನಡೆದಿದ್ದು ಸಕಾಲಿಕ. ಕರ್ನಾಟಕದಲ್ಲಿಯೇ ಧರ್ಮಾಂಧರ ವಿರುದ್ಧ ದನಿಯೆತ್ತುವ ಶಕ್ತಿಗಳು ಮಾಧ್ಯಮ ವಲಯದಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದರೆ ಎನ್ನುವ ಮಹತ್ವದ ಸಂಗತಿಯನ್ನು ಈ ಕಾರ್ಯಾಗಾರ ತೋರಿಸಿಕೊಟ್ಟಿತು. ಕರ್ನಾಟಕದ ನಾನಾ ಭಾಗಗಳಿಂದ ಸುಮಾರು 30 ವರದಿಗಾರರು ಭಾಗವಹಿಸಿದ್ದರು. ರಾಜ್ಯದ ವಿವಿಧೆಡೆ ಹಿಂದೂ ಹಾಗೂ ಮುಸ್ಲಿಂ ಮತಾಂಧ ಶಕ್ತಿಗಳು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂಬ 'ಪ್ರಥಮ ಮಾಹಿತಿ' ಕಲೆ ಹಾಕುವಲ್ಲಿ ಇದು ನೆರವಾಯಿತು. ಸಂಘಟಕರು ಅಭಿನಂದನಾರ್ಹರು. ಪತ್ರಕರ್ತರಲ್ಲಿ ಇರುವ ಜಾತ್ಯಾತೀತ ಧೋರಣೆಯನ್ನು ಕ್ರೋಢೀಕರಿಸಿ ಕೋಮುವಾದದ ವಿರುದ್ಧ ಪ್ರಬಲವಾದ ಜನಪರ ಆಂದೋಲನವನ್ನು ಕಟ್ಟಿ ಬೆಳೆಸುವ ಹಾಗೂ ಈ ಪ್ರಕ್ರಿಯೆಯನ್ನು ಮುಂದುವರಿಸುವ ಗುರುತರವಾದ ಹೊಣೆಗಾರಿಕೆಯನ್ನು ಪ್ರಗತಿಪರ ಸಂಘಟನೆಗಳು ಹೊರಬೇಕು.

ಕೋಮುವಾದದ ವಿರುದ್ಧ ಹೋರಾಟದಲ್ಲಿ ವರದಿಗಾರರಷ್ಟೇ ದೊಡ್ಡ ಜವಾಬ್ದಾರಿ ಡೆಸ್ಕ್‌ಗಳಲ್ಲಿ ಕೆಲಸ ಮಾಡುವ ಪತ್ರಕರ್ತರ ಮೇಲೆಯೂ ಇರುತ್ತದೆ. ಉಪಸಂಪಾದಕರ ಕೊಡುಗೆಯೂ ಮಹತ್ವದ್ದಿರುತ್ತದೆ ಎನ್ನುವುದನ್ನು ಮರೆಯಬಾರದು. ಮುಂದೆ ಇಂಥ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಇದನ್ನು ನೆನಪಿನಲ್ಲಿಟ್ಟುಕೊಂಡರೆ ಉತ್ತಮ.

○

ಮಾಧ್ಯಮದ ಮಾರಾಟ

ಪುಟ 7 ರಿಂದ

ಮುದ್ರಣ ಮಾಧ್ಯಮವನ್ನು ವಿದೇಶಿ ಬಂಡವಾಳಕ್ಕೆ ತೆರೆದು ವಾರ್ತಾ ಮತ್ತು ನಿಯತಕಾಲಿಕ ವಿಭಾಗಕ್ಕೆ ಶೇ. 26 ಮತ್ತು ನಿಯತಕಾಲಿಕವಲ್ಲದ ವಿಭಾಗಕ್ಕೆ ಶೇ. 74ರಷ್ಟು ವಿದೇಶಿ ನೇರ ಬಂಡವಾಳಕ್ಕೆ ಅನುಮತಿ ನೀಡಿದೆ. ಈ ಕ್ರಮವು ಭಾರತದ ಹಿತಾಸಕ್ತಿಗೆ ಸಂಪೂರ್ಣವಾಗಿ ಮಾರಕವಾಗಿದೆ. ಈ ಕ್ರಮದ ಮೂಲಕ ಕೇಂದ್ರ ಸಚಿವ ಸಂಪುಟ ಅದರಲ್ಲೂ ವಾರ್ತಾ ಮತ್ತು ಪ್ರಸಾರ ಮಂತ್ರಿ ಸುಷ್ಮಾ ಸ್ವರಾಜ್ ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ಸಂಪೂರ್ಣ ಶರಣಾಗಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ಜನರ ಅಭಿಪ್ರಾಯವನ್ನು ತಿಳಿಸಲು ಮತ್ತು ತಮ್ಮ ಪರವಾದ ಅಭಿಪ್ರಾಯ ರೂಪಿಸಲು ಮತ್ತು ದೇಶದ ಪ್ರಜಾಸತ್ತಾತ್ಮಕ ಹಂದರವನ್ನು ನಾಶಮಾಡಲು ಅನುಕೂಲವಾಗಿದೆ. ಈ ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಸಾರ್ವಭೌಮತ್ವವನ್ನು ಸಂಪೂರ್ಣವಾಗಿ ಒತ್ತೆಯಿಟ್ಟಿದೆ. ಈ ಹಂತದಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಅಮೇರಿಕಾ ಮತ್ತಿತರ ಪಾಶ್ಚಾತ್ಯ ದೇಶಗಳೂ ಕೂಡ ಮುದ್ರಣ ಮಾಧ್ಯಮದಲ್ಲೂ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಿಲ್ಲ ಎಂಬುದು. ಏಕೆಂದರೆ ಮುದ್ರಣ ಮಾಧ್ಯಮವನ್ನು ವಿದೇಶಿ ಬಂಡವಾಳಕ್ಕೆ ತೆರೆಯುವುದೆಂದರೆ ಅಪಾಯಕ್ಕೆ ಆಹ್ವಾನ ನೀಡಿದಂತೆಯೇ. ರಾಷ್ಟ್ರದ ಹಿತಾಸಕ್ತಿಗಳ ರಕ್ಷಕರು ಎಂದು ತಮ್ಮನ್ನು ಘೋಷಿಸಿಕೊಂಡವರೆ ಬಲಿಷ್ಠ ಬಹುರಾಷ್ಟ್ರೀಯ ಕಂಪನಿಗಳೆದುರು ಸೋತು ಸುಣ್ಣವಾಗಿ ಹಲ್ಲುಗಿಂಜುತ್ತಿದ್ದಾರೆ. ಇದನ್ನು ದೇಶಪ್ರೇಮಿ ಜನರೆಲ್ಲ ವಿರೋಧಿಸಬೇಕು.

ಖಾವಿ ಕೊಲೆಗಾರರು-ಪಿಸ್ತೂಲ್ ಸರದಾರರು

ಗುಜರಾತ್‌ನ ಹತ್ಯಾಕಾಂಡ ವ್ಯವಸ್ಥಿತ ಪಿತೂರಿಯಂತೆ ಇನ್ನೂ ಮುಂದುವರಿದಿರುವಾಗಲೇ, ಈ ಕಿಚ್ಚು ರಾಜ್ಯದಾದ್ಯಂತ ಹತ್ತಿ ಉರಿಸಲು ಸಂಘ ಪರಿವಾರ ಸಿದ್ಧಗೊಂಡಿದೆ. ತಮ್ಮ ನೀಚ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು 'ಗೌರವಯಾತ್ರೆ', 'ಶೋಭಾಯಾತ್ರೆ' ಯೋಜಿಸಿದೆ. ಈ ಯಾತ್ರೆಯಲ್ಲಿ ಬಳಸಲೆಂದೇ ಸಂಗ್ರಹಿಸಲಾದ ಮಾರಕ ಅಸ್ತ್ರಗಳು ಸಿಕ್ಕಿರುವುದು ಸಂಘ ಪರಿವಾರದ ಸಂಚಿನ ಪ್ರಮಾಣವನ್ನು ಬಯಲಿಗಿಡುತ್ತದೆ.

ನ್ಯೂಟನ್‌ರ ಕ್ರಿಯೆಗೆ ಪ್ರತಿಕ್ರಿಯೆ ವಾದವನ್ನು ಮಂಡಿಸಿ ಬಿ.ಜೆ.ಪಿ.ಯ ವಕ್ತಾರರು ಕೇಂದ್ರ ಸರ್ಕಾರ ಗೋಧ್ರಾ ನಂತರದ ಹತ್ಯಾಕಾಂಡವನ್ನು ಸಮರ್ಥಿಸಿಕೊಳ್ಳುತ್ತಿರುವಾಗಲೇ, ಫೋರೆನ್ಸಿಕ್ ಲ್ಯಾಬ್‌ನ ವರದಿ ಹೊರಬಿದ್ದಿದೆ. ಅದರ ಪ್ರಕಾರ ಗೋಧ್ರಾ ರೈಲು ನಿಲ್ದಾಣದ ದುರಂತ ಸಂಭವಿಸಿದ್ದು ಹೊರಗಿನಿಂದಲ್ಲ ಬದಲಿಗೆ ಒಳಗಿನಿಂದ ದಹಿಸುವ ದ್ರಾವಣವನ್ನು ಸುರಿಯಲಾಗಿದೆ ಎಂಬ ಸತ್ಯಾಂಶ ಬೆಳಕಿಗೆ ಬಂದಿದೆ.

ಯೋಜಿತ ದುಷ್ಕೃತ್ಯ

ಇದೇ ಸಂದರ್ಭದಲ್ಲಿಯೇ ಅಹಮದಾಬಾದಿನ ಹೊರ ವಲಯದಲ್ಲಿರುವ ಪ್ರೇಮ್ ದರವಾಜಾ ಪ್ರದೇಶದ 'ಸೂರ್ಯೋದಾಸ್ ಜಿ' ದೇವಸ್ಥಾನದ ಶಿವದಾಸ್ ರಮಾನಂದಿ ಎಂಬ ಅರ್ಚಕನನ್ನು 9 ಕಂಟ್ರಿ ಪಿಸ್ತೂಲ್‌ಗಳನ್ನು ಹೊಂದಿದ್ದಾನೆಂದು ಬಂಧಿಸಲಾಗಿದೆ. ಆತನ ಕಾರಿನ ಚಾಲಕ - ವಿಚಾರಣೆಯ ಸಂದರ್ಭದಲ್ಲಿ ಕೊಟ್ಟ ಸುಳಿವಿನ ಮೇರೆಗೆ ಆತನ ಬಳಿ ಇದ್ದ 1 ಮತ್ತು ಕನ್ಬಾ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಕುಂಜಡ್ ಗ್ರಾಮದ 'ಗೋಕುಲಧಾಮ ಗೋಶಾಲಾ'ದಲ್ಲಿ ಉಳಿದ 8 ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಗೋಶಾಲೆ ಬಂಧಿತ ಶಿವದಾಸ್‌ನಿಗೆ ಸೇರಿದ್ದು. ಪೊಲೀಸರ ಪ್ರಕಾರ ಗುಜರಾತ್ ಹತ್ಯಾಕಾಂಡದ ಸಂದರ್ಭದಲ್ಲಿ ಮಾರಲ್ಪಟ್ಟ 200 ಪಿಸ್ತೂಲುಗಳಲ್ಲಿ ಈ 9 ಪಿಸ್ತೂಲುಗಳೂ ಸೇರಿವೆ ಎಂದರೆ ಗುಜರಾತಿನ ಹತ್ಯಾಕಾಂಡ ಅಥವಾ ಗೋಧ್ರಾ ದುರ್ಘಟನೆಗಳು ಕ್ರಿಯೆ, ಪ್ರತಿಕ್ರಿಯೆಗಳಲ್ಲ ಬದಲಿಗೆ ನಿರ್ದಿಷ್ಟ ಗುರಿಯೊಂದಿಗೆ ಯೋಜನಾಬದ್ಧವಾಗಿ ನಡೆಸಿದ ದುಷ್ಕೃತ್ಯಗಳೆಂಬುದು ಸಾಬೀತಾಗುತ್ತದೆ ಮತ್ತು ಜುಲೈ 12 ರಂದು ನಡೆಯುವ ಜಗನ್ನಾಥ ಯಾತ್ರೆಯಂದು ನಡೆಸಲು ಯೋಜಿಸಿರುವ ಗಲಭೆಗೆ ಈ ಆಯುಧಗಳು ಬಳಕೆಯಾಗಲಿದ್ದವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಕಾರಣ ಜಗನ್ನಾಥ ಯಾತ್ರೆಯ ದಾರಿಯಲ್ಲಿ ಈ ದೇವಾಲಯವಿದೆ.

ಬಿಜೆಪಿ ಮತ್ತದರ ಸಂಘ ಪರಿವಾರಗಳು ಇಂತಹ ಕೃತ್ಯಗಳಿಗೆ ಸದಾ ಬೆಂಬಲ, ಪ್ರಚೋದನೆ ನೀಡುತ್ತವೆಂಬುದಕ್ಕೆ ಉದಾಹರಣೆ ಎಂದರೆ ಶಿವದಾಸ್‌ನನ್ನು ಬಂಧಿಸಿದ ತಕ್ಷಣದಿಂದ ವಿ.ಎಚ್.ಪಿ.ಗಳೇ ಹೆಚ್ಚಿದ್ದ ಪರಿವಾರ ಅವನ ಬಿಡುಗಡೆಗೆ ಒತ್ತಾಯಿಸಿ ಮತ ಪ್ರದರ್ಶನ ನಡೆಸಿದರು ಮತ್ತು ಅತ್ಯಂತ ವಿಧೇಯ ಸೇವಕನಂತೆ ರಾಜ್ಯದ ಗೃಹ ಮಂತ್ರಿ ಗೋರ್ಧನ್ ಜಡಾಪಿಯಾರಿಂದ ಪೊಲೀಸರಿಗೆ ಶಿವದಾಸ್‌ನಿಗೆ ಪೊಲೀಸ್ ಕಸ್ಟಡಿಯಲ್ಲಿರುವಾಗಲೇ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡುವ ಆದೇಶ ಬಂತು. ಅಲ್ಲಿಂದ ಮತ್ತೆ ಠಾಣೆಗೆ ಹಿಂದಿರುಗಲು ಮಹಂತ ಶಿವದಾಸ್ ನಿರಾಕರಿಸಿದಾಗ ಸ್ವತಃ ಗೃಹ ಮಂತ್ರಿಯೇ ಖುದ್ದಾಗಿ ದೂರವಾಣಿಯಲ್ಲಿ ಆತನೊಡನೆ ಮಾತನಾಡಿ ಸಾರ್ವಜನಿಕ ಮುಜುಗರ ತಪ್ಪಿಸಲು ದಯಮಾಡಿ ಠಾಣೆಗೆ ಹಿಂದಿರುಗಿ ಎಂದು ಬೇಡಿಕೊಂಡಿದ್ದಾಗಿ ವರದಿಗಳು ಹೇಳುತ್ತವೆ.

ಈಗಾಗಲೇ ಬಹಳಷ್ಟು ಬೆಳಕಿಗೆ ಬಂದು ವರದಿಯಾಗಿರುವಂತೆ 'ಗುಜರಾತ್ ಹತ್ಯಾಕಾಂಡ' ಯೋಜನಾಬದ್ಧ ಕ್ರಿಯೆಗಳೆಂಬುದಕ್ಕೆ ಮೇಲಿನದೂ ಒಂದು ಉದಾಹರಣೆ ಅಷ್ಟೆ. ಇದೇ ಸಂದರ್ಭದಲ್ಲಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ನಡೆಸಿದ ಸಾರ್ವಜನಿಕ ವಿಚಾರಣೆ ನೀಡಿದ ವರದಿ, ಹಾಕಿದ ಒತ್ತಾಯಗಳಿಂದಾಗಿ ನರ ಹಂತಕ ಮೋದಿ ಮತ್ತವರ ಸರ್ಕಾರ ನಡೆಸಲು ಉದ್ದೇಶಿಸಿದ್ದ 'ಶೋಭಾಯಾತ್ರೆ'ಯನ್ನು ತಕ್ಷಣದಲ್ಲಿ ಕೈ ಬಿಡಲಾಗಿದೆ. ಆದರೆ ಬಿಜೆಪಿ ವಕ್ತಾರರು ಹೇಳುವಂತೆ ಸರಿಯಾದ ಸಮಯದಲ್ಲಿ ಶೋಭಾ ಯಾತ್ರೆ ನಡೆಯಲಿದೆ. ಎಂದರೆ ಚುನಾವಣೆ ಹತ್ತಿರ ಬಂದಾಗ ಇಂತಹ ಯಾತ್ರೆಯೊಂದನ್ನು ಮಾಡಿ ಜನರನ್ನು ಭಾವೋದ್ರೇಕಗೊಳಿಸಿ, ಚುನಾವಣೆ ಗೆಲ್ಲುವ ಪ್ರಯತ್ನವಿದು.



ಬಿಜೆಪಿಯ ನಿಜವಾದ ಮುಖ ಇದು. ಅದರ ರಾಜಕೀಯ ಲಾಭಕ್ಕಾಗಿ ಎಂತಹ ರಕ್ತಪಾತ ನಡೆಸಲೂ ಹೇಸದ, ರಾಷ್ಟ್ರೀಯ ಐಕ್ಯತೆ, ಸಮಗ್ರತೆಯನ್ನೇ ಧೂಳೀಪಟ ಮಾಡುವ ದುಷ್ಟಕೂಟವದು. ತನ್ನ ಸಂಕುಚಿತ ಲಾಭಕ್ಕಾಗಿ ತನ್ನವರನ್ನೇ ಕಗ್ಗೊಲೆ ಮಾಡಲೂ ಹೇಸದ ಪರಿವಾರವೆಂದು ಗೋಧ್ರಾ ಫೋರೆನ್ಸಿಕ್ ವರದಿಯಿಂದ ಸಾಬೀತಾಗಿದೆ.

ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ಘಟನೆಗಳನ್ನು ನೋಡಿದರೆ, ಬಿಜೆಪಿ ಮತ್ತದರ ಪರಿವಾರ ಕೋಮು ವಿಷದ ಮೂಲಕ, ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ಬಿತ್ತಿ, ತಾನು ಕಳೆದುಕೊಂಡಿರುವ ನೆಲೆಗಳನ್ನು ಮರಳಿ ಪಡೆಯಲು ಪ್ರಯತ್ನ ನಡೆಸುತ್ತಿವೆ. ಗುಜರಾತಿನ ಕರ್ಮಕಾಂಡ ತೊಳೆಯುವ ಮತ್ತು ಅಲ್ಲಿನ ಸರ್ಕಾರಕ್ಕೆ ಬೆನ್ನುತಟ್ಟುವ ಕ್ರಿಯೆಯಾಗಿ ಉಪ ಪ್ರಧಾನಿಯಾದ ನಂತರ ಗುಜರಾತ್‌ಗೆ ಅದ್ವಾನಿ ಮತ್ತೊಮ್ಮೆ ಭೇಟಿ ನೀಡಿದ್ದಾರೆ. ನರೇಂದ್ರ ಮೋದಿಯ ಸಾಧನೆಗಳನ್ನು ಶ್ಲಾಘಿಸಿದ ಅಧ್ವಾನಿ, ಹಿಂದೆಲ್ಲ ಕೋಮುಗಲಭೆಗಳು ಅತ್ಯಂತ ಕ್ಷುಲ್ಲಕ ಕಾರಣಕ್ಕೆ ನಡೆಯುತ್ತಿದ್ದು, ಈಗ ಒಂದು ಭಯಂಕರ ಘಟನೆಯ ಪರಿಣಾಮವಾಗಿ ಕೋಮುಗಲಭೆ ಬುಗಿಲೆದ್ದಿದೆ ಎಂದು ಮತ್ತೊಮ್ಮೆ ಇಡೀ ಹತ್ಯಾಕಾಂಡ ಗೋಧ್ರಾಕ್ಕೆ ಪ್ರತಿಕ್ರಿಯೆ ಎಂಬ ಬಿಜೆಪಿಯ ಹಳೇ ವಾದವನ್ನೇ ಪುನರುಚ್ಚರಿಸಿದ್ದಾರಲ್ಲದೇ ನರೇಂದ್ರ ಮೋದಿಯ ಶೋಭಾ ಯಾತ್ರೆಯನ್ನು ಸಮರ್ಥಿಸಿದ್ದಾರೆ.


ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಬಿಜೆಪಿ ನಡೆಸಲು ಉದ್ದೇಶಿಸಿರುವ ರಥಯಾತ್ರೆಯಿಂದ ಉಂಟಾಗಬಹುದಾದ ಪರಿಣಾಮಗಳ ಕುರಿತು ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ನೀಡಿದ ಎಚ್ಚರಿಕೆಯನ್ನು ಶ್ಲಾಘಿಸಿದೆ. ನೊಂದವರಿಗೆ ನಿರಾಶ್ರಿತರಿಗೆ ನೀಡಬೇಕಾದ ಪರಿಹಾರ, ಪುನರ್ವಸತಿಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಪ್ರಮುಖ ಆದ್ಯತೆಗಳಾಗಬೇಕೆಂಬ ಅಭಿಪ್ರಾಯವನ್ನು ಪುನರುಚ್ಚರಿಸಿದೆ.

ಈಗಾಗಲೇ ಗುಜರಾತಿನಲ್ಲಿ ರಥಯಾತ್ರೆ ಪ್ರಾರಂಭ ವಾಗಿದೆ. ಅದು ಆರಂಭವಾದದ್ದು ಶುಕ್ರವಾರವೂ ಆಗಿದ್ದು ಗುಜರಾತಿನ ಜನತೆ ಅದರಲ್ಲೂ ಅಲ್ಪಸಂಖ್ಯಾತರು ಆತಂಕಕ್ಕೆ ಒಳಗಾಗಿದ್ದಾರೆ. ಯಾತ್ರೆ ಸಂದರ್ಭಕ್ಕೆ 5000 ತುಕಡಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ ಯಾದರೂ ಹತ್ಯಾಕಾಂಡದ ಸಂದರ್ಭದಲ್ಲಿ ಪೊಲೀಸರ ವರ್ತನೆಗಳು ಹಲವು ಕಡೆ ಹಿಂಸೆಗೆ ಪೂರಕವಾಗಿಯೇ ಇದ್ದುದ್ದರಿಂದ ಇದೇನಾಗಬಹುದೆಂಬ ಶಂಕೆ ಎಲ್ಲರನ್ನೂ ಕಾಡುತ್ತಿದೆ.

- ಕೆ.ಎಸ್.ವಿಮಲಾ


ಹಿಂದೂ ಕೋಮುವಾದಿಗಳಿಂದ ಹತ್ಯೆಯಾದ ಶ್ರೀನಿವಾಸ್ ಬಜಾಲ್ ಕುಟುಂಬಕ್ಕೆ

ಸಹಾಯ ಮಾಡಿ



ಸಂಗಾತಿಗಳೇ,

ಮಂಗಳೂರಿನ ಸಂಗಾತಿ ಶ್ರೀನಿವಾಸ ಬಜಾಲ್ ಹಿಂದೂ ಯುವಸೇನೆ ಗೂಂಡಾಗಳಿಂದ ಬರ್ಬರವಾಗಿ ಹತ್ಯೆಯಾಗಿ ತಿಂಗಳಾಗುತ್ತಾ ಬರುತ್ತಿದೆ. ಹತ್ಯೆಯಾದ ದಿನದಿಂದ ಇಲ್ಲಿಯವರೆಗೂ ಸಾಲು ಸಾಲಾಗಿ ಪ್ರತಿಭಟನೆಗಳು, ಖಂಡನೆಗಳು ರಾಜ್ಯವ್ಯಾಪಿಯಾಗಿ, ದೇಶವ್ಯಾಪಿಯಾಗಿ ಹರಿಯತೊಡಗಿವೆ. ಅತ್ಯಂತ ಪ್ರತಿಭಾವಂತ, ಉತ್ಸಾಹಿ ಸಂಘಟಕ, ಜನರ ಜೀವದ ಗೆಳೆಯ ಶ್ರೀನಿವಾಸ್ ನೂರಾರು, ಸಾವಿರಾರು ಯುವಜನರ ಎದೆಯಾಳದಲ್ಲಿ ಸ್ಫೂರ್ತಿಯ ಸಂಕೇತವಾಗಿ ಪುಟಿದಿದ್ದಾನೆ. ಆತನ ಸಾವು ವ್ಯರ್ಥವಾಗಬಾರದು. ಅವನ ಹೆಸರನ್ನು ಹೋರಾಟದ ಸಾಗರದಲ್ಲಿ ಜೀವಂತವಿಡಲು ಹತ್ತು ಹಲವು ಕಾರ್ಯಕ್ರಮಗಳನ್ನು ಮಂಗಳೂರಿನಲ್ಲಿ ಮತ್ತು ರಾಜ್ಯದಲ್ಲಿ ಆಯೋಜಿಸಲು ಡಿವೈಎಫ್‌ಐ ಈಗಾಗಲೇ ಕಾರ್ಯೋನ್ಮುಖವಾಗಿದೆ.



ಅದೇ ವೇಳೆಗೆ ತನ್ನ ಸರ್ವಸ್ವವನ್ನೂ ಸಂಘಟನೆಗಾಗಿ ಯುವಜನ ಶ್ರೇಯೋಭಿವೃದ್ಧಿಗಾಗಿ ಧಾರೆಯೆರೆದ ಶ್ರೀನಿವಾಸ್ ಕುಟುಂಬವೀಗ ಅತ್ಯಂತ ಕಷ್ಟದ ಬದುಕನ್ನು ಸಾಗಿಸುತ್ತಿದೆ. ಒಂದು ಕಣ್ಣಿಲ್ಲದ, ಅನಾರೋಗ್ಯಪೀಡಿತರಾದ ಇಬ್ಬರು ಅಕ್ಕಂದಿರು, ವಯಸ್ಸಾದ ತಾಯಿ ಹಾಗೂ ಒಬ್ಬ ಸೋದರ. ಮನೆಯಲ್ಲಿ ಬಡತನ ಅನುಭವಿಸುತ್ತಿದ್ದರೂ ಸಮಾಜಕ್ಕೆ, ನಾಡಿಗೆ 'ದೀಪ'ವಾಗಿ ಬೆಳಗಿ ಮಾಯವಾದ ಶ್ರೀನಿವಾಸನ ಗುರಿಯನ್ನು ನನಸಾಗಿಸಲು ಶ್ರಮಿಸಬೇಕೆಂದು ಅಗಲುವಿಕೆಯ, ನೋವಿನ ಕಣ್ಣೀರನ್ನು ಒರೆಸಿ ಅವರ ಗೆಳೆಯರಿಗೆ ಸ್ಫೂರ್ತಿ ನೀಡಿದ್ದಾರೆ.

ಶ್ರೀನಿವಾಸ್ ಬಜಾಲ್‌ರವರ ಬಲಿದಾನದ ಸ್ಫೂರ್ತಿಯನ್ನು ನಾಡಿನಾದ್ಯಂತ ಇರುವ ಸಾವಿರಾರು ಯುವಜನರ ನಡುವೆ ಚೈತನ್ಯದ ನಡಿಗೆಯನ್ನಾಗಿ ತೆಗೆದುಕೊಂಡು ಹೋಗಲು ಹಲವಾರು ಪ್ರಗತಿಪರ ಸಂಘಟನೆಗಳು ತೀರ್ಮಾನಿಸಿವೆ. ಮಾತ್ರವಲ್ಲ 'ದುಡಿಯುತ್ತಾ ಮನೆಗೆ ಬೆನ್ನೆಲುಬಾಗಿ'ದ್ದ ಮಗನನ್ನು ಕಳಕೊಂಡು ಅನಾಥಗೊಂಡಿರುವ ಕುಟುಂಬಕ್ಕೆ ರಾಜ್ಯದಾದ್ಯಂತ ಸುಮಾರು 2 ಲಕ್ಷ ರೂ.ಗಳನ್ನು ಸಂಗ್ರಹಿಸಿ ಆಗಸ್ಟ್ 3ನೇ ವಾರದಲ್ಲಿ ನೀಡಲು ತೀರ್ಮಾನಿಸಿದೆ. ಈ ಮಹತ್ಕಾರ್ಯದಲ್ಲಿ 'ಐಕ್ಯರಂಗ' ವಾರಪತ್ರಿಕೆ ತನ್ನನ್ನು ತೊಡಗಿಸಿಕೊಳ್ಳಲು ತೀರ್ಮಾನಿಸಿದ್ದು ಇದಕ್ಕಾಗಿ ಪತ್ರಿಕೆಯಲ್ಲಿ 'ಹುತಾತ್ಮ ಕಾಂ.ಶ್ರೀನಿವಾಸ್ ಬಜಾಲ್ ಕುಟುಂಬ ಪರಿಹಾರ ನಿಧಿ' ಕಾಲಂ ಪ್ರಕಟಿಸುತ್ತಿದ್ದು ವೈಯಕ್ತಿಕವಾಗಿ ಅಥವಾ ವಿವಿಧ ಸಂಘಟನೆಗಳ ಮೂಲಕವೂ ತಮ್ಮ ಹಣವನ್ನು ಡಿಡಿ/ಚೆಕ್ಕು/ ಎಂಓ ಮೂಲಕ Democratic Youth Federation of India, Karnataka State Committee ಈ ಹೆಸರಿಗೆ ಕಳುಹಿಸುವುದು. ಪ್ರತಿವಾರ ಸಂಗ್ರಹವಾದ ಹಣದ ವಿವರ, ಹೆಸರುಗಳನ್ನು ಪ್ರಕಟಿಸಲಾಗುವುದು.

ನೀವು ಕಳುಹಿಸುವಾಗ 'ಶ್ರೀನಿವಾಸ್ ಬಜಾಲ್ ಕುಟುಂಬ ಸಹಾಯ ನಿಧಿ' ಎಂಬುದನ್ನು ತಪ್ಪದೇ ನಮೂದಿಸಿ. ನೀವು ಕಳುಹಿಸಬೇಕಾದ ಹಣ ಆಗಸ್ಟ್ 20 ರೊಳಗೆ ನಮ್ಮ ಕೈಸೇರಲಿ.

ಇಲ್ಲಿಯವರೆಗಿನ ಸಂಗ್ರಹ ವಿವರ

	ಹೆಸರು	ಸಂಗ್ರಹವಾದ ಹಣ
1.	ಎಡರಂಗ ಸರ್ಕಾರದ 25ನೇ ವರ್ಷ ಆಚರಣೆ, ಬೆಂಗಳೂರು ಕಾರ್ಯಕ್ರಮದಲ್ಲಿ	2,389
2.	ಕ್ಯಾ. ಲಕ್ಷ್ಮಿ ಸೆಹಗಲ್ ನಾಗರಿಕ ಸ್ವಾಗತ ಸಮಾರಂಭದಲ್ಲಿ ಸಂಗ್ರಹ	2,305.00
3.	ಡಿವೈಎಫ್‌ಐ ರಾಜ್ಯ ಸಮಿತಿ, ಮಹಾಬಲಿಪುರಂ ಶಿಬಿರದಲ್ಲಿ ಸಂಗ್ರಹ	2,000.00
	ಒಟ್ಟು	6,694.00

ಎನ್ರೋನ್ ಹಗರಣ ದಿವಾಳಿ ಬೆನ್ನಲ್ಲೇ ಇನ್ನೆರಡು ಖ್ಯಾತ ದೈತ್ಯ ಬಹುರಾಷ್ಟ್ರೀಯ ಕಂಪನಿಗಳಲ್ಲಿ ವರ್ಲ್ಡ್‌ಕಾಮ್, ಕ್ಸೆರಾಕ್ಸ್ - ಹಗರಣಗಳು ಬಯಲಾಗಿವೆ. ಹಗರಣ ಬಯಲಾಗುತ್ತಿದ್ದಂತೆ ವರ್ಲ್ಡ್‌ಕಾಮ್ ದಿವಾಳಿಯ ಅಂಚಿನಲ್ಲಿದೆ. ಇನ್ನೂ ಹಲವು ಕಂಪನಿ ಅವ್ಯವಹಾರಗಳು ವರದಿಯಾಗುತ್ತಿವೆ. ಎಷ್ಟೋ ಪ್ರಸಿದ್ಧ ಕಂಪನಿಗಳ ಉಸಿರುಕಟ್ಟಿಸುವ ನಾಗಾಲೋಕದ ಬೆಳವಣಿಗೆ ಮತ್ತು ಭಾರೀ ಲಾಭದ ಸುಗ್ಗಿ ಮೋಸದ ಮೇಲೆ ಆಧಾರಿತ. ಈ ಬಗ್ಗೆ ಎಲ್ಲರಿಗೂ ಅರಿವಾಗುತ್ತಿದ್ದಂತೆ ಅಮೇರಿಕದ ಆರ್ಥಿಕತೆ ಬಗ್ಗೆ ವಿಶ್ವಾಸ ಕುಸಿದಿದೆ. ಎಲ್ಲಾ ಹಗರಣದ ಕಂಪನಿಗಳ ಬೋರ್ಡ್ ಮುಖ್ಯಸ್ಥರು, ಸದಸ್ಯರಿಗೂ ಆಳುವವರಿಗೂ ಇರುವ ನಂಟೂ ಇದರ ಜತೆ ಬಯಲಾಗುತ್ತಿದೆ. ಅಮೇರಿಕದ ಬಂಡವಾಳಶಾಹಿ ಮಾರುಕಟ್ಟೆ ಆರ್ಥಿಕ ಕೊಳೆತು ನಾರುತ್ತಿದೆ. ಇದು ಸೂಟು-ಬೂಟಿನ ದರೋಡೆಕಾರರ ಆರ್ಥಿಕ. ಇದಕ್ಕೆ ತೀವ್ರ ಶಸ್ತ್ರ ಚಿಕಿತ್ಸೆ ಅಗತ್ಯ ಎಂದು ವ್ಯವಸ್ಥೆಯಲ್ಲಿ ದೃಢ ವಿಶ್ವಾಸ ಹೊಂದಿದ್ದವರೂ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಹಗರಣಗಳು ಅಲ್ಲಿಗೆ ಈವರೆಗೆ ಹರಿಯುತ್ತಿದ್ದ ವಿದೇಶಿ ಬಡವಾಳಕ್ಕೆ ನಡುಕ ತಂದಿದೆ. ಅದರಲ್ಲಿ ಭಾರೀ ಏರುಪೇರಾಗಿ ಅಮೆರಿಕದ ಆರ್ಥಿಕ ಕುಸಿಯಬಹುದು ಎಂಬ ಸಂದೇಹ ಬಲವಾಗುತ್ತಿದೆ. ಈ ಬೆಳವಣಿಗೆ ಆಕಸ್ಮಿಕವಲ್ಲ. ತಳ್ಳಿ ಹಾಕಬಹುದಾದ 'ಅಪವಾದ'ವೂ ಅಲ್ಲ. ಇದು ಬಂಡವಾಳಶಾಹಿ ವ್ಯವಸ್ಥೆಯ ಮೂಲಭೂತ ಕರಾಳ ಸ್ವರೂಪ ಬೆಳಕಿಗೆ ಬಂದಿರುವುದಷ್ಟೆ ಎಂದು ವಿವರಿಸುವ ಲೇಖನ.

ವರ್ಲ್ಡ್‌ಕಾಮ್-ಕ್ಸೆರಾಕ್ಸ್ ಮೆಗಾ ಹಗರಣ-ಲೂಟಿ ಬಯಲು

ಸೂಟುಬೂಟಿನ ದರೋಡೆಗಾರರ ಕಾರುಬಾರಿಗೆ ಕಡಿವಾಣ?

ಶರತ್‌ಚಂದ್ರ

ಎನ್ರೋನ್ ಮತ್ತು ಗ್ಲೋಬಲ್ ಕ್ರಾಸಿಂಗ್‌ನ ಮೆಗಾ ಹಗರಣಗಳು ಈಗಾಗಲೇ ಅಮೆರಿಕಾದ ಆರ್ಥಿಕದಲ್ಲಿ, ಅದರ ಬಗ್ಗೆ ವಿಶ್ವಾಸದಲ್ಲಿ ನಡುಕ ತಂದಿತ್ತು. ಇವು 'ಆಕಸ್ಮಿಕ'. ಇವು 'ಅಪವಾದ'ಗಳು ಎಂಬ ಸಮಜಾಯಿಷಿ ಒಂದು ಕಡೆ. ಇನ್ನೊಂದು ಕಡೆ ಇಂತಹ ಹಗರಣಗಳು ಇನ್ನು ನಡೆಯದಂತೆ 'ಮಟ್ಟ ಹಾಕುತ್ತೇವೆ' ಎಂಬ ಅಧ್ಯಕ್ಷ ಬುಶ್‌ರಾದಿಯಾಗಿ ಅಮೆರಿಕನ್ ರಾಜಕೀಯ, ಆರ್ಥಿಕ ನಾಯಕರ ಘರ್ಜನೆ.



ಇವೆರಡನ್ನೂ ನಗೆಪಾಟಲು ಮಾಡುವ ಇನ್ನೆರಡು ಮೆಗಾ ಹಗರಣಗಳು ಬೆಳಕಿಗೆ ಬಂದಿವೆ. ಅಮೆರಿಕಾದ ಎರಡನೇ ಅತಿದೊಡ್ಡ ದೂರ ಸಂಪರ್ಕ ಒದಗಿಸುವ ಕಂಪನಿ ವರ್ಲ್ಡ್‌ಕಾಮ್'!, ಜಗತ್ಪ್ರಸಿದ್ಧ 'ಫೋಟೋಕಾಪಿ'ಗೆ ಇನ್ನೊಂದು ಹೆಸರಾದ 'ಕ್ಸೆರಾಕ್ಸ್'. ಇವೆರಡಕ್ಕೂ 'ಪ್ರತಿಷ್ಠಿತ' 'ಉತ್ತಮ ಚಾರಿತ್ರ್ಯದ' ಕಂಪನಿಗಳು ಎಂಬ ಹೆಸರು ಇದ್ದವು.

ವರ್ಲ್ಡ್‌ಕಾಮ್ ಲೆಕ್ಕಪತ್ರದಲ್ಲಿ 380 ಕೋಟಿ ಡಾಲರು 'ಗೋಲ್‌ಮಾಲ್'

'ವರ್ಲ್ಡ್‌ಕಾಮ್' ನ ಹಗರಣಗಳ ಬಗ್ಗೆ ವಿವರಗಳನ್ನು ಕೊಟ್ಟವರು ಅದರ ಮುಖ್ಯಸ್ಥರೇ. ಕಂಪನಿ ನಿಜವಾಗಿಯೂ ನಷ್ಟದಲ್ಲಿದೆ (ಸುಮಾರು 122 ಕೋಟಿ ಡಾಲರು). ಹಿಂದಿನ ಕಂಪನಿ ಮುಖ್ಯಸ್ಥರು ಮತ್ತು ಹಣಕಾಸು ಮುಖ್ಯಸ್ಥರು ಕಂಪನಿ ನಷ್ಟ ಸಾರ್ವಜನಿಕರಿಗೆ ತಿಳಿಯದಂತೆ ಕಂಪನಿಯ ಲೆಕ್ಕಪತ್ರಗಳಲ್ಲಿ 'ಗೋಲ್‌ಮಾಲ್' ಮಾಡಿದ್ದಾರೆ. ಸುಮಾರು 380 ಕೋಟಿ ಡಾಲರುಗಳಷ್ಟು 'ಖರ್ಚ'ನ್ನು 'ಹೂಡಿಕೆ' ಎಂದು ತೋರಿಸಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಆದರೆ ಕಂಪನಿಯ ಬಳಿ 200 ಕೋಟಿ ಡಾಲರು ನಗದು ಹಣ ಇದೆ. ಆದ್ದರಿಂದ ಕಂಪನಿ ದಿವಾಳಿಯಾಗಬೇಕಾಗಿಲ್ಲ.

'ವರ್ಲ್ಡ್‌ಕಾಮ್' ನ ಈ ತಪ್ಪೊಪ್ಪಿಗೆ ಎಲ್ಲರನ್ನೂ ದಂಗುಬಡಿಸಿತು. ಅದರ ಶೇರಿನ ಮಾರುಕಟ್ಟೆ ಬೆಲೆ 62 ಡಾಲರಿನಿಂದ 26 ಸೆಂಟ್ಸ್‌ಗೆ ಕುಸಿಯಿತು. ಅಮೆರಿಕದ ಎರಡನೇ ಅತಿದೊಡ್ಡ ದೂರಸಂಪರ್ಕ ಸೇವೆಯ ಕಂಪನಿ ರಾತ್ರೋರಾತ್ರಿ ದಿವಾಳಿಯ ಅಂಚಿಗೆಬಂತು. ಈ ಬಿಕ್ಕಟ್ಟಿನಿಂದ ಆ ಕಂಪನಿಯ ಬಳಕೆದಾರರು, ಶೇರುದಾರರು, ಬ್ಯಾಂಕರುಗಳು, ಮಾರಾಟಗಾರರು ಎಲ್ಲರಿಗೂ ವಿಶ್ವಾಸಘಾತವಾಗಿದೆ. ಈ ಬಿಕ್ಕಟ್ಟಿಗೆ 'ವರ್ಲ್ಡ್‌ಕಾಮ್' ನ ಪರಿಹಾರ 17 ಸಾವಿರ ಉದ್ಯೋಗಿಗಳನ್ನು (ಕಂಪನಿಯ ಐವರಲ್ಲಿ ಒಬ್ಬ ಉದ್ಯೋಗಿ) ಮನೆಗೆ ಕಳಿಸುವುದು. 'ವರ್ಲ್ಡ್‌ಕಾಮ್' ಈ ಮೆಗಾ ಹಗರಣದ ಮೂಲಕ ಮಾರುಕಟ್ಟೆ ವದಂತಿಗಳ ಗಾಳಿಯಲ್ಲಿ ತೇಲುವ ಸಾಮಾನ್ಯ ಶೇರುದಾರರಿಗೆ ಮಾತ್ರ 'ಟೋಪಿ' ಹಾಕಿದ್ದಲ್ಲ. ಕಂಪನಿಗಳ ಆಯವ್ಯಯ ಲೆಕ್ಕಪತ್ರವನ್ನು ಕೂಲಂಕುಷವಾಗಿ ಪರಿಶೋಧಿಸುವ 'ಬುದ್ಧಿವಂತ' ಹೂಡಿಕೆದಾರರಿಗೂ 'ಟೋಪಿ' ಹಾಕಿ ಹೈರಾಣಾಗಿಸಿ.

ಬುಶ್ ಮಿತ್ರರೇ ಯಾಕೆ ಮೆಗಾ ಹಗರಣಗಳು?

ಇಂತಹ ಭಾರಿ ಗೋಲ್‌ಮಾಲ್ ಕಂಪನಿಯ ಲೆಕ್ಕಪತ್ರಗಳನ್ನು ಕಾನೂನು ಪ್ರಕಾರ ಪರಿಶೋಧಿಸುವ 'ಆಡಿಟರ್' ಗಳ ಹದ್ದಿನ ಕಣ್ಣು ತಪ್ಪಿಸಿದ್ದು ಹೇಗೆ? ಎಂಬ ಪ್ರಶ್ನೆ ಎಲ್ಲರ ಬಾಯಲ್ಲೂ. ಇದಲ್ಲದೆ ಎಲ್ಲಾ ಕಂಪನಿಗಳ ಲೆಕ್ಕಪತ್ರಗಳನ್ನು ಮಾರುಕಟ್ಟೆ ಚಲನವಲನಗಳ ಮೇಲೆ ಕಣ್ಣಿಡುವ ಸೆಕ್ಯುರಿಟಿಸ್ ಎಂಡ್ ಎಕ್ಸ್‌ಚೇಂಜ್ ಕಮಿಷನ್ ನಿದ್ದೆ ಮಾಡುತ್ತಿತ್ತೆ? ಸರ್ಕಾರದ ಕಂಪನಿಗಳ ವ್ಯವಹಾರದ ಇಲಾಖೆ ಏನು ಮಾಡುತ್ತಿತ್ತು? ಎಂಬೆಲ್ಲಾ ಪ್ರಶ್ನೆಗಳ ಸುರಿಮಳೆಯಾಗಿದೆ.

ಎನ್ರೋನ್‌ನ 'ಆಡಿಟರ್' ಆಗಿದ್ದ 'ಆರ್ಥರ್ ಆಂಡರ್‌ಸ್ಯಾನ್' ಎಂಬ ಖ್ಯಾತ (ಎನ್ರೋನ್ ಹಗರಣದ ನಂತರ ಕುಖ್ಯಾತ) ಹಣಕಾಸು ಪರಿಶೋಧಕ ಸಂಸ್ಥೆ 'ವರ್ಲ್ಡ್‌ಕಾಮ್' ಗೂ ಆಡಿಟರ್ ಎಂಬುದು ಕಾಕತಾಳೀಯವಲ್ಲ. 'ಎನ್ರೋನ್' ನಲ್ಲಿ ಲೆಕ್ಕಪತ್ರ ತಿದ್ದಿದ, ಇತರ 'ಗೋಲ್‌ಮಾಲ್' ಮುಚ್ಚಿಹಾಕಲು ಸಹಾಯ ಮಾಡಿದ ಆರೋಪ 'ಆರ್ಥರ್..' ಮೇಲೆ ಈಗಾಗಲೇ ಇದೆ. ಇದಲ್ಲದೆ ಸರಕಾರದ ತನಿಖೆಗೆ ಸಿಲುಕದಂತೆ, ಮುಖ್ಯ ದಾಖಲೆ ಪತ್ರಗಳನ್ನು ಸುಟ್ಟು ಹಾಕಿದ 'ಕ್ರಿಮಿನಲ್' ಆಪಾದನೆಯೂ ಇದೆ. ಈ ಮೆಗಾ ಹಗರಣದಲ್ಲೂ 'ಆರ್ಥರ್...' ಶಾಮೀಲಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ.

'ಎನ್ರೋನ್' ಮತ್ತು 'ವರ್ಲ್ಡ್‌ಕಾಮ್' ಹಗರಣಗಳಿಗೆ ಇನ್ನೊಂದು 'ಅಚ್ಚರಿ' ತರುವ ಸಾಮ್ಯ ಎರಡು ಕಂಪನಿಗಳ ಮುಖ್ಯಸ್ಥರೂ ಬುಶ್‌ರ ಆತ್ಮೀಯ ಗೆಳೆಯರು. 'ವರ್ಲ್ಡ್‌ಕಾಮ್'ನ ಮಾಜಿ ಮುಖ್ಯಸ್ಥ ಬುಶ್‌ರ ಗೆಳೆಯ. ಕೆಲವೇ ತಿಂಗಳ ಹಿಂದೆ ಆತನನ್ನು ಕಿತ್ತುಹಾಕಲಾಗಿತ್ತು. ಗೋಲ್‌ಮಾಲ್ ನಡೆದದ್ದು ಆತನ ಅವಧಿಯಲ್ಲೇ! ಬುಶ್ ಅಧ್ಯಕ್ಷ ಸ್ಪರ್ಧೆಗೂ ಆಳುವ ಪಕ್ಷಕ್ಕೂ ಭವಿಷ್ಯ ಫನಿಂಗ್ ಸೌಲಭ್ಯ ಹೊಂದಿಸುವವರು. 'ವರ್ಲ್ಡ್‌ಕಾಮ್' 750 ಕೋಟಿ ರೂ ರಾಜಕೀಯ ವ್ಯಕ್ತಿಗಳ 'ಚುನಾವಣಾ ನಿಧಿ'ಗೆ ಸುರಿದಿದೆ. ಕಳೆದ ವರ್ಷದಲ್ಲಿ ಸರ್ಕಾರದ ಅಧಿಕಾರಿಗಳ ಜತೆ 'ಲಾಬಿ' ಮಾಡಲು 1100 ಕೋಟಿ ರೂ ಖರ್ಚು ಮಾಡಿದೆ.


ವರ್ಲ್ಡ್‌ಕಾಮ್' ಗೋಲ್‌ಮಾಲ್ ಕಾಪಿ ಮಾಡಿದ 'ಕ್ಸೆರಾಕ್ಸ್'

ಕೆಲವೇ ದಿನಗಳಲ್ಲಿ ಕ್ಸೆರಾಕ್ಸ್‌ನ ಮೆಗಾ ಹಗರಣ ಬಯಲಿಗೆ ಬಂತು. ಅಲ್ಲೂ ಅದೇ ಕಥೆ. ಕಳೆದ ಐದು ವರ್ಷಗಳ ಲೆಕ್ಕಪತ್ರವನ್ನು ಪುನಃ ಪ್ರಕಟಿಸಲಾಗುವುದು ಎನ್ನುವ ಮೂಲಕ, ಆ ಅವಧಿಯಲ್ಲಿ ತೋರಿಸಿರುವ ಹೂಡಿಕೆ-ಖರ್ಚು-ಲಾಭದಲ್ಲಿ 'ಗೋಲ್‌ಮಾಲ್' ಆಗಿದೆ ಎಂದು ಒಪ್ಪಿಕೊಂಡಿದೆ. ಒಂದು ವರ್ಷದಲ್ಲೇ 200 ಕೋಟಿ ಡಾಲರಿನಷ್ಟು ಲೆಕ್ಕಪತ್ರದಲ್ಲಿ 'ಗೋಲ್‌ಮಾಲ್' ಆಗಿದೆ ಎನ್ನಲಾಗಿದೆ.

ಇದು ಸಾಲದೆಂಬಂತೆ ಇತ್ತೀಚಿನ (2000 ದ) ವರೆಗೆ ಭಾರತೀಯ ಘಟಕ ಮೋದಿ ಕ್ಸೆರಾಕ್ಸ್ ಸರ್ಕಾರಿ ಆರ್ಡರು ಪಡೆಯಲು ಭಾರಿ 'ಲಂಚ' ಕೊಟ್ಟಿದೆ ಎಂದು ಒಪ್ಪಿಕೊಂಡಿದೆ. ಒಂದು ವರ್ಷದಲ್ಲಿ 3 ರಿಂದ 3.5 ಕೋಟಿ ರೂ. ಲಂಚ ಕೊಟ್ಟಿತಂತೆ. ಎರಡು ವರ್ಷಗಳ ಹಿಂದೆ ಇದು 'ಬೆಳಕಿಗೆ ಬಂದು' ಇದನ್ನು ನಿಲ್ಲಿಸಲಾಗಿದೆ ಎಂದಿದೆ ಕ್ಸೆರಾಕ್ಸ್!

ಇನ್ನೂ ಹಲವು ಹಗರಣಗಳು ಬೆಳಕಿಗೆ ಬಂದಿವೆ. ಕೆಲವು ಕಂಪನಿಗಳಲ್ಲಿ ಕಂಪನಿ ಹಣವನ್ನು ಡೈರೆಕ್ಟರ್‌ಗಳ 'ಬೇನಾಮಿ' ಕಂಪನಿಗಳಿಗೆ ವರ್ಗಾವಣೆ ಮಾಡಿ ಬಂಡವಾಳಹೂಡಿಕೆ ರೂಪದಲ್ಲಿ ತೋರಿಸಿ ಲಾಭ ಬಾಚಿಕೊಂಡಿದ್ದಾರೆ. ಮೂಲ ಕಂಪನಿಯನ್ನು ದಿವಾಳಿ ಅಂಚಿಗೆ ತಂದಿದೆ. ಇನ್ನು ಹಲವು ಕಂಪನಿಗಳಲ್ಲಿ ಡೈರೆಕ್ಟರ್‌ಗಳಿಗೆ, ಅವರ ಕಂಪನಿಗಳಿಗೆ 'ಸಾಲ' ಕೊಡಲಾಗಿದೆ. 'ಶೇರುಗಳ ಒಳ ವ್ಯವಹಾರ' ಹೆಚ್ಚಿನ ಕಂಪನಿಗಳಲ್ಲಿ ಸಾಮಾನ್ಯ. ಕಂಪನಿ ಲಾಭ-ನಷ್ಟದ ಬಗ್ಗೆ 'ಒಳವಿವರಗಳು' ಮೊದಲೇ ಗೊತ್ತಿರುವ ಡೈರೆಕ್ಟರುಗಳು ಅದಕ್ಕೆ ಸರಿಯಾಗಿ ಶೇರುಗಳನ್ನು ಮಾರಿ ಅಥವಾ ಕೊಂಡು ದೊಡ್ಡ ಲಾಭ ಮಾಡಿಕೊಳ್ಳುತ್ತಿದ್ದರು. ಇನ್ನೂ ಹಲವು ಕಂಪನಿಗಳಲ್ಲಿ ಹೆಚ್ಚಿನ ಲಾಭ ತೋರಿಸಲು 'ಜಾಲಿ' ಮಾರಾಟಗಳನ್ನು ತೋರಿಸಲಾಯಿತು. ಇಂತಹ 'ಅಕ್ರಮ' ಗಳ ಪ್ರಮಾಣ ಹತ್ತಾರು ನೂರಾರು ಕೋಟಿಗಳಲ್ಲಿವೆ' ಹಲವು ಕ್ಷೇತ್ರಗಳಲ್ಲಿ ಮಾರುಕಟ್ಟೆ ವಿಶ್ಲೇಷಣೆ ಮಾಡಿ ಬಂಡವಾಳ ಹೂಡಿಕೆ ಬಗ್ಗೆ ಶಿಫಾರಸು ಮಾಡುವ ಹಣಕಾಸು ಕಂಪನಿಗಳು 'ಸುಳ್ಳು' ಮಾಹಿತಿ ಆಧಾರದ ಮೇಲೆ ಕೆಲವು ಕಂಪನಿಗಳ ಶೇರು ಬೆಲೆ ಕೃತಕವಾಗಿ ಹೆಚ್ಚುವಂತೆ ಮಾಡಿದವು. ಸಾಮಾನ್ಯವಾಗಿ ಇಂತಹ ಕಂಪನಿಗಳು ಶೇರು ಹೂಡಿಕೆದಾರರ ದೃಷ್ಟಿಯಿಂದ ವಸ್ತುನಿಷ್ಠ

(ಮುಂದಿನ ಪುಟಕ್ಕೆ)


ವರ್ಲ್ ಕಾಂ ಮುಖ್ಯ ಕಛೇರಿ

ಲಂಚಾವತಾರ ಅಂಡ್ ಕಂಪನಿ

"ಕ್ಸೆರಾಕ್ಸ್ ಹಗರಣ ಎಲ್ಲರಿಗೂ ಗೊತ್ತಿರುವ ಸತ್ಯವನ್ನು ಮತ್ತೊಮ್ಮೆ ಬೆಳಕಿಗೆ ತಂದಿದೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉದ್ದೇಶ ಸಾಧಿಸಲು ಯಾವುದೇ ದೇಶದಲ್ಲಿ ಲಂಚ, ಕಾನೂನುಬಾಹಿರ ಕ್ರಮ, ಬೆದರಿಕೆ, ಬುಡಮೇಲು ಕೃತ್ಯಗಳು- ಏನನ್ನೂ ಮಾಡಲು ಹೇಸುವುದಿಲ್ಲ. ಅಮೇರಿಕದಲ್ಲಿ ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಎರಡೂ ದೈತ್ಯ ಕಂಪನಿಗಳು - ಎನ್ರಾನ್ ಮತ್ತು ಕ್ಸೆರಾಕ್ಸ್-ಇಂಡಿಯಾದಲ್ಲಿ ಲಂಚಾವತಾರದ ಪ್ರಕರಣಗಳಲ್ಲೂ ಸಿಕ್ಕಿಹಾಕಿಕೊಂಡಿವೆ ಎಂಬುದು ಕಾಕತಾಳೀಯವಲ್ಲ.

ಹಿಂದೆ ಎನ್ರಾನ್ ಭಾರತದ ರಾಜಕೀಯ ನಾಯಕರಿಗೆ ಎರಡು ಕೋಟಿ ಡಾಲರು 'ಖರ್ಚು' ಮಾಡಿ 'ಶಿಕ್ಷಣ' ಕೊಟ್ಟಿದ್ದಾರೆ ಎಂದು ಅಮೇರಿಕನ್ ಪಾರ್ಲಿಮೆಂಟರಿ ತನಿಖಾ ಸಮಿತಿ ಮುಂದೆ ಕೇಳಿದ್ದರು ......

ಕ್ಸೆರಾಕ್ಸ್ ಹೇಳಿಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇಂಡಿಯಾದ ತನಿಖಾ ಮತ್ತು ಕಾನೂನು ಕ್ರಮ ತೆಗೆದುಕೊಳ್ಳುವ ಸಂಸ್ಥೆಗಳು ಲಂಚ ತೆಗೆದುಕೊಂಡವರನ್ನು, ಲಂಚ ಕೊಟ್ಟ ಕಂಪನಿ ಅಧಿಕಾರಿಗಳನ್ನೂ ಶಿಕ್ಷಿಸಬೇಕು'

- 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದಿಂದ

"ಅಮೆರಿಕದ ಬಂಡವಾಳಶಾಹಿ ವ್ಯವಸ್ಥೆ ಕೊಳೆತು ನಾರುತ್ತಿದೆ"

"'ಅಬ್ರಾಹಂ ಲಿಂಕನರ ಪ್ರಜಾಪ್ರಭುತ್ವ' ಎಂಎನ್‌ಸಿ(ಬಹುರಾಷ್ಟ್ರೀಯ ಕಂಪನಿ)ಗಳಿಗಾಗಿ, ಎಂಎನ್‌ಸಿಗಳ, ಎಂಎನ್‌ಸಿಗಳೇ ನಡೆಸುವ ಸರಕಾರ'ದ ಮಟ್ಟಕ್ಕೆ ಇಳಿದಿದೆ.

- ಕೆಲವು ಅಮೆರಿಕನ್ ಪತ್ರಿಕೆಗಳ ತಲೆಬರಹ ಮೆಗಾ ಹಗರಣಗಳ ಬಗ್ಗೆ

★ ★ ★

"ಅಮೆರಿಕಾದಲ್ಲಿ ಈಗ ನಾಚಿಕೆ ಇಲ್ಲದ ಸಂಸ್ಕೃತಿ ರೂಪುಗೊಂಡಿದೆ. ಅಲ್ಲಿ ಯಾವುದೇ ಕಂಪನಿ ಮುಖ್ಯಸ್ಥ ದರೋಡೆ ಮಾಡಿದರೂ ಅವರಿಗೆ ಅದು ತಪ್ಪು ಎಂದು ಅನಿಸುವುದಿಲ್ಲ. ಇದು ಒಂದು ರೀತಿಯ ನೈತಿಕ ಕ್ಯಾನ್ಸರ್"

- ಗಿಡೋ ರೊಸ್ಸಿ
ಇಟಲಿ ಟೆಲಿಕಾಂನ ಮಾಜಿ ಮುಖ್ಯಸ್ಥ

ಮೆಗಾ ಹಗರಣಗಳ- ಇಂಡಿಯನ್ ಕನೆಕ್ಷನ್

ಬೆಳಕಿಗೆ ಬಂದಿರುವ ಎರಡೂ ಮೆಗಾ ಹಗರಣಗಳಿಗೆ 'ಇಂಡಿಯನ್ ಕನೆಕ್ಷನ್' ಇದೆ ಎಂಬುದು ಕಾಕತಾಳೀಯವಲ್ಲ. ಬಹುರಾಷ್ಟ್ರೀಯ ಕಂಪನಿಗಳು ಮತ್ತು ಮಾರುಕಟ್ಟೆ ಆರ್ಥಿಕದಲ್ಲಿ ಕುರುಡು ನಂಬಿಕೆ ಮತ್ತು ನಿರ್ಬಂಧಗಳ ಅಭಾವದ ನೇರ ಫಲ. ವರ್ಲ್ಡ್‌ಕಾಮ್ ಜತೆ ವಿಎಸ್‌ಎನ್‌ಎಲ್‌ಗೆ ವ್ಯಾಪಾರ ಸಂಬಂಧ ಇದೆ. ಅಂತರಾಷ್ಟ್ರೀಯ ಟೆಲಿಫೋನ್ ಕರೆಗಳನ್ನು ಸಾಧ್ಯ ಮಾಡಲು ವರ್ಲ್ಡ್‌ಕಾಮ್ ಪೂರ್ಣ ದಿವಾಳಿ ಆದರೆ, ಅದು ಪಾವತಿ ಮಾಡಬೇಕಾಗಿರುವ ಸುಮಾರು 600 ಕೋಟಿರೂ ವಿ.ಎಸ್.ಎನ್.ಎಲ್‌ಗೆ ನಾಮ ಆದೀತು.

ಕ್ಸೆರಾಕ್ಸ್‌ನ ಇಂಡಿಯಾದ ಅಡಿಯಾಳು ಕಂಪನಿ ಮೊದಿ-ಕ್ಸೆರಾಕ್ಸ್ ಹಲವು ವರ್ಷಗಳು ಸರ್ಕಾರಿ ಅಧಿಕಾರಿಗಳಿಗೆ ದೊಡ್ಡ ಪ್ರಮಾಣದಲ್ಲಿ ಲಂಚ ಕೊಡುತ್ತಿತ್ತು. ಒಂದು ವರ್ಷದಲ್ಲಿ 3-3.5 ಕೋಟಿ ರೂ ಲಂಚ ಕೊಡಲಾಗಿದೆ ಎಂದು ಒಪ್ಪಿಕೊಂಡಿದೆ. ಹಿಂದಿನ ಮೆಗಾ ಹಗರಣದಲ್ಲಿ ಇಂಡಿಯಾದ ನಾಗರಿಕರಿಗೆ ಆರು ಸಾವಿರ ಕೋಟಿ ರೂ. ನಾಮ ಆಗಿದೆ. ಸ್ಟೇಟ್ ಬ್ಯಾಂಕ್, ಐಡಿಬಿಐ, ಐಎಫ್‌ಸಿಐ ಮುಂತಾದ ಸಾರ್ವಜನಿಕ ಕ್ಷೇತ್ರದ ಹಣಕಾಸು ಸಂಸ್ಥೆಗಳ ಎನ್ರೋನ್‌ನ ಅಡಿಯಾಳು ದಾಬೋಲ್ ಕಂಪನಿಯಲ್ಲಿ ಆರು ಸಾವಿರ ಕೋಟಿ ತೊಡಗಿಸಿದ್ದವು. ಎನ್ರೋನ್ ದಿವಾಳಿಯಾಗುತ್ತಿದ್ದಂತೆ ಇದನ್ನು ಹಿಂದೆ ಪಡೆಯಲು ನಮ್ಮ ಕಾನೂನಿನಲ್ಲಿ ಯಾವುದೇ ಅವಕಾಶವಿಲ್ಲ. ಜಾಗತೀಕರಣದ ಜ್ವರದಲ್ಲಿ ನಮಗೆ ಅವರ ಮೇಲೆ ಅಷ್ಟೇ ವಿಶ್ವಾಸ.

ಶ್ಲೇಷಣೆ (ಯಾವುದೇ ಕಂಪನಿಗೆ ಪರವಾಗಿರದೆ) ಮಾಡುತ್ತದೆ ಎಂಬುದು ನಿರೀಕ್ಷೆಯಾಗಿತ್ತು. ರಿಲ್ ಅಂಚ್‌ನಂತಹ ಪ್ರತಿಷ್ಠಿತ ಹಣಕಾಸು ಂಪನಿಗಳಲ್ಲಿ ಇಂತಹ ಕಾನೂನು ಬಾಹಿರ ಕೆಲಸಕ್ಕೆ ಳಿದಿವೆ ಎಂಬುದು ಬೆಳಕಿಗೆ ಬಂದಿದೆ. ಇಂತಹ ಕ್ರಮಗಳು 'ಆಡಿಟರ್' ಕಂಪನಿಗಳು, ರ್ಕಾರದ ಆಡಿಟರ್‌ಗಳು ಶಾಮೀಲಾಗದೆ ಡೆಯಲು ಸಾಧ್ಯವಿಲ್ಲ- ಅದೂ ಹಲವು ರ್ಷಗಳವರೆಗೆ - ಎಂಬುದೂ ಸ್ಪಷ್ಟ.

ೂಟು-ಬೂಟಿನ ದರೋಡೆಕಾರರದ್ದೇ ಾರುಬಾರು

ಅಮೇರಿಕಾದ ಪಾರದರ್ಶಕ ಲೆಕ್ಕಪತ್ರವ್ಯವಸ್ಥೆ, ೇಶದ ಆರ್ಥಿಕವನ್ನು (ಪ್ರಭಲ ಆರ್ಥಿಕ ಾಜಕೀಯ ನಾಯಕರ ಹಸ್ತಕ್ಷೇಪವಿಲ್ಲದೆ) ಸ್ತುನಿಷ್ಠವಾಗಿ ನಿರ್ದೇಶಿಸುವ ಅಭಿವೃದ್ಧಿ ಾರುಕಟ್ಟೆ ವ್ಯವಸ್ಥೆ ಎಲ್ಲಾ ಬೊಗಳೆ ಎಂದು ಈ ೀರಿಯಲ್' ಮೆಗಾ ಹಗರಣಗಳಿಂದ ಷ್ಟವಾಗುತ್ತಿದೆ. ಮೊದಲು ದೇವತಾಪುರುಷರು ರಾಧ್ಯಮೂರ್ತಿಗಳಾಗಿದ್ದ ಕಂಪನಿಯ ುಖ್ಯಸ್ಥರೆಲ್ಲಾ ಸೂಟುಬೂಟಿನಲ್ಲಿರುವ ರೋಡೆಕಾರರು ಎಂದು ಎಲ್ಲರಿಗೂ ಗೊತ್ತಾಗಿದೆ. ಾರುಕಟ್ಟೆ ನಿರ್ಬಂಧನೆಗಳನ್ನು ಬಲಪಡಿಸಬೇಕು. ಎಲ್ಲಾ ದರೋಡೆಕಾರರನ್ನು ಶಿಕ್ಷಿಸಬೇಕು ಎಂಬ ಗು ಇಲ್ಲಿದೆ. ಇಡೀ ವ್ಯವಸ್ಥೆ ಕೊಳೆತು ನಾರುತ್ತಿದೆ. ದನ್ನು ಶುದ್ಧಪಡಿಸಬೇಕು ಎಂಬ ಒತ್ತಾಯ ರುತ್ತಿದೆ. ಇಲ್ಲದಿದ್ದರೆ ಇಡೀ ವ್ಯವಸ್ಥೆಯ ಮೇಲೆ ದೇಶ ಬಂದು ಕುಸಿದುಬೀಳಬಹುದು ಎಂಬ ತಂಕ ಹರಡಿದೆ.


ಅಧ್ಯಕ್ಷ ಬುಶ್ ಮತ್ತು ಅದರ ಸಂಪುಟದ ಹೋದ್ಯೋಗಿಗಳು ಈ ಬಗ್ಗೆ ಕ್ರಮಗಳನ್ನು ಕೊಳ್ಳುತ್ತೇವೆ ಎಂದು ಗರ್ಜಿಸುತಿದ್ದಾರೆ. ಆದರೆ ಅವರ ಚರಿತ್ರೆ ಬಗ್ಗೆ ಹೊರಬರುತ್ತಿರುವ ಸುದ್ದಿಗಳು ಆತಂಕವನ್ನು ಇನ್ನಷ್ಟು ಹೆಚ್ಚಿಸಿವೆ. ಮೊದಲನೆಯದಾಗಿ ಈವರೆಗೆ ಬೆಳಕಿಗೆ ಬಂದ ಮೆಗಾ-ಹಗರಣಗಾರರಿಗೂ ಬುಶ್ ಸಂಪುಟದ ಹಲವರಿಗೂ ಆಳುವ ರಿಪಬ್ಲಿಕನ್ ಪಕ್ಷಕ್ಕೂ ಇರುವ ಭಾರೀ ನಂಟು ಬೆಳಕಿಗೆ ಬಂದಿದೆ. ಸಾಲದೆಂಬಂತೆ ಬುಶ್ ಸ್ವತಃ ಉಪಾಧ್ಯಕ್ಷ ಟೋನಿ ಮತ್ತು ಹಲವು ಪ್ರಮುಖ ಸಂಪುಟದ ಸದಸ್ಯರು ಹಿಂದೆ ಕಂಪನಿ ಮುಖ್ಯಸ್ಥ, ಬೋರ್ಡ್ ಸದಸ್ಯರಾಗಿದ್ದವರು. ಇವರೂ ಇಂತಹ 'ಅಕ್ರಮ' ಗಳಲ್ಲಿ ತೊಡಗಿದ್ದರು. ಅವರ ಮೇಲೆ ಇಂತಹ ಹಲವು 'ಅಕ್ರಮ'ಗಳ ಬಗ್ಗೆ ತನಿಖೆ ನಡೆಯುತ್ತಿದೆ. ಇಂತಹ 'ಚರಿತ್ರೆ' ಇರುವವರು ಕೊಳೆತಿರುವ ವ್ಯವಸ್ಥೆಯನ್ನು ಶುದ್ಧಪಡಿಸಬಲ್ಲರೇ ಎಂಬ ಬಗ್ಗೆ ಆತಂಕ ಇನ್ನಷ್ಟು ಹೆಚ್ಚುತ್ತಿದೆ. ಇಂತಹ ಆರ್ಥಿಕ-ರಾಜಕೀಯ ಬಿಕ್ಕಟ್ಟಿನ ಬಗ್ಗೆ ವಿರೋಧಪಕ್ಷ ದೊಡ್ಡ ರಾಜಕೀಯ ವಿಚಾರ ಎಬ್ಬಿಸಬಹುದು ಎಂಬ ನಿರೀಕ್ಷೆಯೂ ಸುಳ್ಳಾಗಿದೆ. ಈ ಮೆಗಾ-ಹಗರಣದ ದೈತ್ಯ ಕಂಪನಿಗಳು ಎರಡೂ ಪಕ್ಷಗಳಿಗೂ 'ಧನಸಹಾಯ'ವನ್ನು ಸಮವಾಗಿ ಹರಡಿವೆ. ಆದ್ದರಿಂದ ಇಡೀ ರಾಜಕೀಯ ಆರ್ಥಿಕ ಅಂದರೆ ಬಂಡವಾಳಶಾಹಿ ವ್ಯವಸ್ಥೆ ಮೇಲೆ ತೀವ್ರ ಸಂದೇಹ ಮೂಡಿದೆ. ಇಡೀ ವ್ಯವಸ್ಥೆ ಬುಡದಲ್ಲಿ ನಡುಗುತ್ತಿದೆ.

ಕೊಳೆತು ನಾರುತ್ತಿರುವ ವ್ಯವಸ್ಥೆಯ ನಿಜ ಸ್ವರೂಪ

ವ್ಯವಸ್ಥೆಯ ಕುಸಿತ, ನೈತಿಕ ಪತನಕ್ಕಿಂತ ಹೆಚ್ಚಾಗಿ ಈ ಬಿಕ್ಕಟ್ಟಿನ ಆರ್ಥಿಕ ಪರಿಣಾಮಗಳು ಅಮೇರಿಕಾದ ದೊಡ್ಡ ಜನವಿಭಾಗಗಳಿಗೆ ತೀವ್ರವಾಗಿ ತಕ್ಷಣ ತಟ್ಟಲಿದೆ. ಈ ಹಗರಣಗಳಲ್ಲಿ ಲೂಟಿಯಾದವರು ಈ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿದ್ದ ಸಾಮಾನ್ಯ ಹೂಡಿಕೆದಾರರು. ಈ ಹಗರಣಗಳು ಕಂಪನಿಯನ್ನು ದಿವಾಳಿಗೆ ತಂದಾಗ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಕಳಕೊಳ್ಳುವವರು ಜನಸಾಮಾನ್ಯರು. ಒಂದು ಕಂಪನಿ ದಿವಾಳಿಯಾದಾಗ ಅದರ ಜತೆ ಆರ್ಥಿಕ ಸಂಬಂಧವಿರುವ ಇನ್ನೂ ಹಲವು ಕಂಪನಿಗಳ ಮೇಲೆ ತೀವ್ರ ದುಷ್ಪರಿಣಾಮಗಳಾಗುತ್ತವೆ. (ಸಂಬಂಧ ಗಹನವಾಗಿದ್ದರೆ ಅದೂ ದಿವಾಳಿಯಾಗಬಹುದು) ಇದಲ್ಲದೆ ಅಮೇರಿಕಾದ ಮಾರುಕಟ್ಟೆ ಹಿಂದೆ ತೋರಿಸಿದ್ದ ನಾಗಾಲೋಟದ ಬೆಳವಣಿಗೆ, ದೀರ್ಘ ಸುಗ್ಗಿಯಿಂದ ವಿದೇಶಿ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತಿತ್ತು. ರಫ್ತು ವ್ಯಾಪಾರಕ್ಕಿಂತ ಆಮದು ವ್ಯಾಪಾರ ಹೆಚ್ಚಿರುವ ಅಮೇರಿಕಾದ ಆರ್ಥಿಕದ ಭಾರೀ ಸುಗ್ಗಿಗೆ ಈ ವಿದೇಶಿ ಬಂಡವಾಳದ ಭೂತವೇ ಕಾರಣ. ಅದು ನಿಂತರೆ ಅಮೇರಿಕಾದ ಆರ್ಥಿಕ ಪೂರ್ತಿಯಾಗಿ ಕುಸಿದು ಬೀಳಬಹುದು ಎಂಬ ಆತಂಕ ಇದೆ.

ಇಂತಹ ಸನ್ನಿವೇಶದಲ್ಲಿ ಈ ಹಗರಣಗಳು 'ಅಪವಾದ', ಆಕಸ್ಮಿಕವೆಂದರೆ ಯಾರೂ ನಂಬುತ್ತಿಲ್ಲ. ಇದು ವ್ಯವಸ್ಥೆಯ ಅವಿಭಾಜ್ಯ ಅಂಗ. ಶೇರು ಮಾರುಕಟ್ಟೆಯೇ ಪ್ರಾಥಮಿಕ ಬಂಡವಾಳದ ಮೂಲವಾಗಿರುವ ಆರ್ಥಿಕದಲ್ಲಿ ಕಂಪನಿಯ ನಿರ್ವಾಹಕರ ಮೇಲೆ ಭಾರೀ ಲಾಭ ತೋರಿಸುವುದರ ಮೇಲೆ ಭಾರೀ ಒತ್ತಡ ಇರುತ್ತದೆ. ಅಲ್ಲದೆ ಅವರ ಆದಾಯದ ದೊಡ್ಡ ಭಾಗ ಶೇರುಗಳ ರೂಪದಲ್ಲಿ ಇರುವುದರಿಂದ, ಹೇಗಾದರೂ ಮಾಡಿ (ಲೆಕ್ಕಪತ್ರ ತಿದ್ದಿಯಾದರೂ) ಹೆಚ್ಚಿನ ಲಾಭ ತೋರಿಸಿ ಶೇರು ಮಾರುಕಟ್ಟೆ ಬೆಲೆ ಸತತವಾಗಿ ಏರಿಸುವ ಬಗ್ಗೆ ಸ್ವಾಭಾವಿಕ ಒತ್ತಡ ಇದೆ. ಇದನ್ನು ಮುಚ್ಚಿಹಾಕಲು ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ 'ಮಿತ್ರರು' ಇರಬೇಕಾದ್ದೂ, ಸ್ವಾಭಾವಿಕವೇ. ಈ ವ್ಯವಸ್ಥೆ ಕಿತ್ತುಹಾಕದಿದ್ದರೆ ಈ ಸೂಟುಬೂಟಿನ ದರೋಡೆಕಾರರದ್ದೇ ಕಾರುಬಾರು ಇರುತ್ತದೆ. ○

ಬ್ರೆಜಿಲ್- ಫುಟ್ಬಾಲ್ ವಿಶ್ವ ಸಾಮ್ರಾಟರು



ಕಳೆದ ಜೂನ್ 30 ರಂದು ಮುಕ್ತಾಯ ಗೊಂಡ ಫುಟ್ಬಾಲ್ ವಿಶ್ವ ಸಮರದ ಅಂತಿಮ ಫೈನಲ್‌ನಲ್ಲಿ ಬ್ರೆಜಿಲ್ ಜರ್ಮನಿಯನ್ನು 2 ಗೋಲುಗಳಿಂದ ಸೋಲಿಸಿ 17ನೇ ಫುಟ್ಬಾಲ್ ವಿಶ್ವಕಪ್ ಅನ್ನು ತನ್ನದಾಗಿಸಿಕೊಂಡಿತು. ಫುಟ್ಬಾಲ್‌ಗೆ ಇನ್ನೊಂದು ಹೆಸರೇ ಬ್ರೆಜಿಲ್. ಆ ದೇಶದ ಜೀವನದ ಒಂದು ಭಾಗ ಈ ಕ್ರೀಡೆ. ಕ್ರೀಡೆಗಳ ರಾಜ ಫುಟ್ಬಾಲ್ ಬ್ರೆಜಿಲ್‌ನ ಜನತೆಯ ಎಲ್ಲಾ ಆಶೋತ್ತರಗಳನ್ನು ಈಡೇರಿಸುತ್ತದೆ. ದಕ್ಷಿಣ ಅಮೆರಿಕಾ ಖಂಡದ ಅತಿ ದೊಡ್ಡ ದೇಶ ಬ್ರೆಜಿಲ್. ಕಾಫಿಗೆ ಪ್ರಸಿದ್ಧ, ಆರ್ಥಿಕವಾಗಿ ಜರ್ಜರಿತ ದೇಶ (ವಿಶ್ವಬ್ಯಾಂಕ್, ಐಎಂಎಫ್ ನೀತಿಗಳ ಪ್ರಯೋಗಗಳ ಪರಿಣಾಮ) ಬಡತನ, ದಾರಿದ್ರ್ಯ, ಮಾದಕ ವಸ್ತು ಸಾಗಾಣಿಕೆ, ಮಾಫಿಯಾ, ಕೊಲೆ, ಸುಲಿಗೆ, ದರೋಡೆ, ದಿನನಿತ್ಯದ ಕರ್ಮಕಾಂಡಗಳು. ಈ ಎಲ್ಲದರ ನಡುವೆ ಫುಟ್ಬಾಲ್ ಬ್ರೆಜಿಲ್ ಜನತೆಯ ಎಲ್ಲಾ ನೋವನ್ನು ಮರೆಸುತ್ತದೆ. ಇಂದು ವಿಶ್ವ ಬ್ರೆಜಿಲ್ ಅನ್ನು ಗುರುತಿಸುತ್ತಿರುವುದು ಫುಟ್ಬಾಲ್‌ನಿಂದಾಗಿ.

ಹದಿನೇಳನೆ ವಿಶ್ವಕಪ್ ಫುಟ್ಬಾಲ್ ಕಿರೀಟ ಧರಿಸುವುದರ ಮೂಲಕ ಬ್ರೆಜಿಲ್ ಮತ್ತೊಮ್ಮೆ ತನ್ನ ದೇಶದ ಜನತೆಯನ್ನು ಸಂಭ್ರಮದಲ್ಲಿ ಮುಳುಗಿಸಿದೆ. ಇದು ಬ್ರೆಜಿಲ್ ಗಳಿಸುತ್ತಿರುವ ಐದನೇ ವಿಶ್ವಕಪ್ ಕಿರೀಟ(ವಿಶ್ವದಾಖಲೆ). ಕಳೆದ ಮೂರು ಪಂದ್ಯಾವಳಿಗಳಲ್ಲಿ ಫೈನಲ್ ತಲುಪಿರುವ ಬ್ರೆಜಿಲ್ 1994 ರಲ್ಲಿ ಪ್ರಶಸ್ತಿ ಗೆದ್ದು 1998 ರಲ್ಲಿ ಅತಿತೇಯ ಫ್ರಾನ್ಸಿಗೆ ಹೀನಾಯವಾಗಿ ಸೋತಿತ್ತು. ಪುನಃ 2002 ರಲ್ಲಿ ಹಿಂದಿನ ಸೋಲಿನ ನೋವನ್ನು ಮರೆತು ವಿಜಯಿ ಯಾಗಿದೆ. ಬ್ರೆಜಿಲ್‌ಗೆ ವಿಶ್ವದಲೆಲ್ಲ ಅಭಿಮಾನಿ ಗಳು. ಮುಖ್ಯವಾಗಿ ದಕ್ಷಿಣ ಅಮೆರಿಕಾದ ಜನತೆ, ಏಷ್ಯಾದ ಜನತೆ ಬ್ರೆಜಿಲ್ ವಿಜಯದ ಸಂಭ್ರಮವನ್ನು ಆಚರಿಸಿವೆ. ಭಾರತದ ಫುಟ್ಬಾಲ್ ಮೆಕ್ಕಾ, ಕಲ್ಕತ್ತಾದಲ್ಲಿ ಸಹ ಬ್ರೆಜಿಲ್ ವಿಜಯದ ಸಂಭ್ರಮವನ್ನು ಆಚರಿಸಿವೆ. ಫುಟ್ಬಾಲ್ ಪ್ರಿಯ ಕಲ್ಕತ್ತಾದ ಜನತೆ ಹಿಂದಿನಿಂದಲೂ ಬ್ರೆಜಿಲ್‌ನ ಕಟ್ಟಾ ಅಭಿಮಾನಿಗಳು. ಸಾಂಬ ಕುಣಿತ ಬ್ರೆಜಿಲ್‌ನ ಪ್ರಸಿದ್ಧ ಜಾನಪದ ಕುಣಿತ. ಬ್ರೆಜಿಲ್‌ನ ಆಟಗಾರರು ಕಲಾತ್ಮಕವಾಗಿ ಆಡುವ ಫುಟ್ಬಾಲ್ ಅನ್ನು ವಿಶ್ವದೆಲ್ಲೆಡೆ ಸಾಂಬ ಡ್ಯಾನ್ಸ್ ಎಂದೇ ಕರೆಯಲಾಗುತ್ತದೆ. ಬ್ರೆಜಿಲ್ ಗೆದ್ದರೂ ಸುದ್ದಿ, ಸೋತರೂ ಸುದ್ದಿ. ಪ್ರತಿ ವಿಶ್ವಕಪ್ ಪಂದ್ಯಾವಳಿಗಳಿಂದ ಬ್ರೆಜಿಲ್‌ನ ಅಸಂಖ್ಯಾತ ತಾರೆಯರು ಉದಯಿಸಿದ್ದಾರೆ. ವಿಶ್ವದ ಅನಭಿಶಕ್ತ ಸಾಮ್ರಟ ಫೀಲೆ, ಝೀಕೋ, ರೊಮಾರಿಯೋ ಇದೀಗ ರೊನಾಲ್ಡೊ, ರಿವಾಲ್ಡೊ ಹಾಗೂ ಕೊನಾಲ್ಡಿನೋ ಎಲ್ಲರೂ ಬ್ರೆಜಿಲ್‌ನ ಜನಪ್ರಿಯ ಫುಟ್ಬಾಲ್ ತಾರೆಯರು. ಈ ವರ್ಷ ರೊನೋಲ್ಡೊ ಫೈನಲ್‌ನಲ್ಲಿ ಎರಡು ಗೋಲ್ ಗಳಿಸಿ ಬ್ರೆಜಿಲ್‌ನ ವಿಜಯವನ್ನು ಅನಾಯಾಸಕಗೊಳಿಸಿದ.

ಬಲಿಷ್ಠ ರಾಷ್ಟ್ರಗಳ ಹಿನ್ನಡೆ ಅಥಿತೇಯ ದ. ದ.ಕೋರಿಯಾದ ಹಿರಿಮೆ.

ಈ ಸಲದ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಫುಟ್ಬಾಲ್ ಪಂಡಿತರ ಭವಿಷ್ಯಗಳನ್ನು ಸುಳ್ಳಾಗಿಸಿ ಫುಟ್ಬಾಲ್‌ನ ದೈತ್ಯರಾಷ್ಟ್ರಗಳು ಸೋಲನುಭವಿಸಿವೆ. ಪ್ರಶಸ್ತಿ ಗೆಲ್ಲುವಲ್ಲಿ ಫೇವರಿಟ್ ಆಗಿದ್ದ ಅರ್ಜಂಟೈನಾ, ಹಿಂದಿನ ಛಾಂಪಿಯನ್ ಫ್ರಾನ್ಸ್, ಯೂರೋಪ್‌ನ ಬ್ರೆಜಿಲ್ ಎದು ಖ್ಯಾತವಾಗಿದ್ದ ಪೋರ್ಚುಗಲ್ ಮೊದಲ ಸುತ್ತಿನಲ್ಲಿ ನಿರ್ಗಮಿಸಿವೆ. ಯುರೋಪಿನ ದೈತ್ಯಶಕ್ತಿ ಇಟಲಿ ಇಂಗ್ಲೆಂಡ್, ಸ್ಪೈನ್ ಕ್ವಾರ್ಟರ್ ಫೈನಲ್ ಹಂತದಲ್ಲಿ ನಿರ್ಗಮಿಸಿದವು. ಫುಟ್ಬಾಲ್‌ನಲ್ಲಿ ಕುಬ್ಜರಾಗಿದ್ದ ಸೆನೆಗಲ್, ದ. ಕೋರಿಯಾ, ಟರ್ಕಿ ಜಪಾನ್ ದೈತ್ಯ ಹಂತಕರೆಂದು ಹೆಸರು ಗಳಿಸಿದವು. ಜಪಾನ್ ಎರಡನೇ ಸುತ್ತು ಪ್ರವೇಶಿಸಿತು. ಟರ್ಕಿ ಸೆಮಿಫೈನಲ್ಲಿ ಬ್ರೆಜಿಲ್‌ಗೆ ಸೋತಿತು. ಅಥಿತೇಯ ದ. ಕೋರಿಯಾ ಸಹಾ ಸೆಮಿಫೈನಲ್ ಪ್ರವೇಶಿಸಿ ವಿಶ್ವದೆಲ್ಲೆಡೆ ಅಚ್ಚರಿ ಮೂಡಿಸಿತು. ಹಾಗೂ ಇಡೀ ಕೋರಿಯಾ ಜನತೆಯನ್ನು ಸಂಭ್ರಮದಲ್ಲಿ ತೇಲಿಸಿತು. ಈ ಹಿಂದೆ 5 ಬಾರಿ ಅಂತಿಮ ಸುತ್ತು ಪ್ರವೇಶಿಸಿ ದ್ದರೂ ಒಂದೇ ಒಂದು ಪಂದ್ಯವನ್ನು ದ. ಕೋರಿಯಾ ಗೆದ್ದಿರಲಿಲ್ಲ. ಆದರೆ ಈ ಬಾರಿ ಸೆಮಿಫೈನಲ್ ಪ್ರವೇಶಿಸಿ ಈ ಹೆಗ್ಗಳಿಕೆ ಗಳಿಸಿದ ಐಕ್ಯೆಕ ಏಷ್ಯಾದ ರಾಷ್ಟ್ರವಾಗಯಿತು. ಡಚ್ ದೇಶವಾಸಿ ಪ್ರಸಿದ್ಧ ತರಬೇತುದಾರ ಗಸ್ ಹಿಂಡಿಂಕ್ ದ. ಕೋರಿಯಾವನ್ನು ತರಬೇತು ಗೊಳಿಸಿ ಸೆಮಿಫೈನಲ್ ತಲುಪಿಸಿ ವಿಶ್ವ ವಿಖ್ಯಾತನಾದ ದ.ಕೋರಿಯಾದ ಆಟಗಾರರು ದೇಶದ ಪ್ರತಿಷ್ಠೆಯೇ ಪಣಕ್ಕಿಟ್ಟಂತೆ ಆಟವಾಡಿ ದರು. ಬಲಿಷ್ಠ ಪೋರ್ಚುಗಲ್, ದೈತ್ಯ ಇಟಲಿ; ಸ್ಪೇನ್‌ಗಳನ್ನು ಮಣಿಸಿದ ದ. ಕೋರಿಯಾ ಸೆಮಿಫೈನಲ್‌ನಲ್ಲಿ ಕೇವಲ ಒಂದು ಗೋಲಿನಿಂದ ಜರ್ಮನಿಗೆ ಸೋತಿತು.

ಕಪ್ಪು ಖಂಡದ ಬೆಳಕಾದ ಸೆನೆಗಲ್

ಕಪ್ಪು ಖಂಡ ಆಫ್ರಿಕಾದ ಕರಿಯ ಆಟಗಾರರು ಇಂದು ವೃತ್ತಿಪರರಾಗಿ ಇಡೀ ಯೂರೋಪ್ ಅನ್ನು ಆವರಿಸಿದ್ದಾರೆ. ಈ ಸಲ ನೈಜಿರಿಯಾ, ಕ್ಯಾಮರೋನ್, ದ. ಆಫ್ರಿಕಾ, ಟುನಿಷಿಯಾ ಸೆನೆಗಲ್ ಅಂತಿಮ ಸುತ್ತಿಗೆ ಅರ್ಹತೆ ಪಡೆದಿದ್ದವು. ಆದರೆ ಹೊಸ ಸೇರ್ಪಡೆ ಸೆನೆಗಲ್ ಈ ಬಾರಿ ವಿಶ್ವದ ಗಮನ ಸೆಳೆಯಿತು. ಹಾಗೂ ಎರಡನೇ ಸುತ್ತನ್ನು ಪ್ರವೇಶಿಸಿದ ಏಕೈಕ ರಾಷ್ಟ್ರವಾಯಿತು. ಆರಂಭ ಪಂದ್ಯದಲ್ಲಿ ಹಿಂದಿನ ಪ್ರಶಸ್ತಿರ ವಿಜೇತ ಫ್ರಾನ್ಸ್ ಅನ್ನು ಸೋಲಿಸಿದ ಸೆನಗಲ್ ಮುಂದೆ ಉರುಗ್ವೆ ಡೆನ್ಮಾರ್ಕ್‌ನ್ನು ಹಿಂದೆ ಹಾಕಿ ಎರಡನೆ ಸುತ್ತು ಪ್ರವೇಶಿಸಿತು. ಹಾಗೂ ಫ್ರಾನ್ಸ್ ವಿರುದ್ಧ ತನ್ನ ವಿಜಯ ಆಕಸ್ಮಿಕ ವಲ್ಲವೆಂದು ಸಾಬೀತು ಪಡಿಸಿತು. (ಸೆನಗಲ್ ಫ್ರಾನ್ಸ್‌ನ ವಸಾಹತು ಆಗಿತ್ತು) ಎರಡನೇ ಸುತ್ತಿನಲ್ಲಿ ಬಲಿಷ್ಠ ಸ್ವೀಡನ್ ಅನ್ನು ಮಣಿಸಿದ ಸೆನಗಲ್ ಕ್ವಾರ್ಟರ್ ಫೈನಲ್‌ಗಳಲ್ಲಿ ಹೆಚ್ಚಿನ ಅವಧಿಯ ಆಟದಲ್ಲಿ ಟರ್ಕಿಗೆ ಏಕೈಕ ಗೋಲಿ ನಿಂದ ಸೋತಿತು. ಸೆನೆಗಲ್‌ನ ಒಂದೊಂದು ವಿಜಯದ ಹೆಜ್ಜೆ ಆಫ್ರಿಕಾ ಖಂಡದ ಗುಲಾಮ ಗಿರಿಯ ನೋವಿನ ಮರೆವಿನ ಬೆಳಕಾಯಿತು.

ದ.ಆಫ್ರಿಕಾ ಹಾಗೂ ಸೆನಗಲ್‌ನ ವಿಜಯ ವನ್ನು ಫುಟ್ಬಾಲ್ ಪಂಡಿತರು "ಫುಟ್ಬಾಲ್ ಇಂದು ಪ್ರಜಾಪ್ರಭುತ್ವ ರೀತಿಯಲ್ಲಿ ಸಾಗುವ ಹಾದಿ" ಎಂದು ಬಣ್ಣಿಸಿದ್ದಾರೆ. ಏಕೆಂದರೆ ಫುಟ್ಬಾಲ್ ಝಿನಲ್ಲಿ ಯೂರೋಪ್ ಹಾಗೂ ಲ್ಯಾಟಿನ್ ಅಮೇರಿಕಾ ರಾಜ್ಯಗಳದೇ ಪ್ರಭುತ್ವ ಈ ಸಲ ದ. ಕೋರಿಯಾ ಹಾಗೂ ಸೆನೆಗಲ್ ಈ ಪ್ರಬುತ್ವವನ್ನು ಒಡೆದುಹಾಕಿದವು. ಸೆನಗಲ್ ಹಾಗೂ ದ.ಕೋರಿಯಾ ವಿಜಯದಿಂದ ಆ ದೇಶದ ಆಟಗಾರರಿಗೆ ಯೂರೋಪಿನ ವೃತ್ತಿ ಪರ ಕ್ಲಬ್‌ಗಳ ಬೇಡಿಕೆ ಹೆಚ್ಚಾಗಿದೆ.

- ಆರ್.ಡಿ.ಮಿಲ್ಯಿಯೋರ್

ಕ್ಯಾಪ್ಟನ್ ಲಕ್ಷ್ಮಿಯವರಿಗೆ ಭವ್ಯ ಸ್ವಾಗತ



ಜುಲೈ 7 ರಂದು ಬೆಂಗಳೂರಿನ ನಾಗರಿಕರಿಗೆ ಪ್ರಾಯಶಃ ಅವಿಸ್ಮರಣೀಯ ದಿನಗಳಲ್ಲೊಂದು. ವಿಮಾನ ನಿಲ್ದಾಣದಿಂದ 7 ಕಿ.ಮಿ. ಉದ್ದಕ್ಕೂ ವಾಹನಗಳ ರ‍್ಯಾಲಿ, ಕಿವಿಗಡಚಿಕ್ಕುವ ಘೋಷಣೆಗಳು, ಹಾರ ತುರಾಯಿಗಳು, ನೆನಪಿನ ಕಾಣಿಕೆಗಳ ಭರಾಟೆ, ನಾಗರಿಕರಿಗೆ ಸಂಭ್ರಮವೋ ಸಂಭ್ರಮ. ರಾಷ್ಟ್ರಪತಿ ಚುನಾವಣೆಯ ಎಡರಂಗದ ಅಭ್ಯರ್ಥಿ ಕ್ಯಾ. ಲಕ್ಷ್ಮಿ ಸೆಹಗಲ್‌ರವರು ಬೆಂಗಳೂರಿಗೆ ಭೇಟಿ ನೀಡಿದಾಗ ಕಂಡುಬಂದ ದೃಶ್ಯವಿದು. ಸ್ವಾತಂತ್ರ್ಯ ಹೋರಾಟದ ವೀರ ನಾಯಕಿಗೆ ಸ್ವಾಗತ ಕೋರಲು ಕಾರ್ಯಕರ್ತರಲ್ಲಿ ಅದಮ್ಯ ಉತ್ಸಾಹ ಪುಟಿದೇಳುತ್ತಿತ್ತು. ಅವರನ್ನು ಸ್ವಾಗತಿಸಲು ಬೆಂಗಳೂರಿನ ನಾಗರಿಕರು, ಎಡಪಕ್ಷಗಳು ಹಾಗೂ ಜೆಡಿಎಸ್ ಪಕ್ಷವು ಸೇರಿದ್ದ ಸ್ವಾಗತ ಸಮಿತಿಯೊಂದನ್ನು ರಚಿಸಿದವು. ನಿವೃತ್ತ ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ವಿಧಾನಸಭೆಯ ಮಾಜಿ ಸಭಾಧ್ಯಕ್ಷ ಎಸ್.ರಮೇಶ್‌ಕುಮಾರ್, ಜೆಡಿಎಸ್ ನ ಮಹಾ ಪ್ರಧಾನ ಕಾರ್ಯದರ್ಶಿ ಸಿ.ನಾರಾಯಣ ಸ್ವಾಮಿ, ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಡಾ. ಸಿದ್ದನಗೌಡ ಪಾಟೀಲ್ ಹಾಗೂ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಈ ಸಮಿತಿಯ ಸಂಚಾಲಕರು.

ಕ್ಯಾ. ಲಕ್ಷ್ಮಿ ಸೆಹಗಲ್‌ರವರು ಮಾಜಿ ಸಂಸತ್ ಸದಸ್ಯೆ ಸುಭಾಷಿಣಿ ಅಲಿಯವರೊಂದಿಗೆ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ ಭವ್ಯವಾದ ಸ್ವಾಗತ ಕೋರಲಾಯಿತು. ವಿಮಾನ ನಿಲ್ದಾಣದಿಂದ ಸಮಾರಂಭ ನಡೆಯುವ ಸ್ಥಳದವರೆಗೆ ಭವ್ಯ ಮೆರವಣಿಗೆಯಲ್ಲಿ ಕ್ಯಾ. ಲಕ್ಷ್ಮಿಯವರ ಕರೆತರಲಾಯಿತು. ದಾರಿಯುದ್ದಕ್ಕೂ ನಾಗರಿಕರು ಐಎನ್‌ಎ ನಾಯಕಿಯ ಸಂಭ್ರಮದಿಂದ ಸ್ವಾಗತಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬೆಂಗಳೂರಿನ ಹೃದಯಭಾಗವಾದ ಟೌನ್‌ಹಾಲ್ ಸಲ್ಲಿಸ ಪುಟ್ಟ ಶೆಟ್ಟಿ ಪುರಭವನದ ವೇದಿಕೆಗೆ ಕ್ಯಾ. ಲಕ್ಷ್ಮಿಯವರನ್ನು ಕರೆತರುತ್ತಿದ್ದಂತೆ ಕಿ ವಂದನೆಯ ಘೋಷಣೆ ಮುಗಿಲು ಮುಟ್ಟಿದವು. ಸಮಾರಂಭ ನಡೆಯು ಸ್ಥಳದಲ್ಲಿ ಜನಮರುಳೋ ಜಾತ್ರೆ ಮರಳೋ ಎಂಬಂತೆ ವಿಪರೀ ಜನಸಾಗರ.

ಸಮಾರಂಭದ ಆರಂಭಕ್ಕೆ ಎಸ್‌ಯುಸಿಐ ಕಾರ್ಯಕರ್ತರಿಂದ ಕದ ಕದಂ ಎನ್ನುವ ಐಎನ್‌ಎ ಗೀತೆ ಹಾಡುವುದರೊಂದಿಗೆ ಸಮಾರಂ ಆರಂಭಗೊಂಡಿತು. ವೇದಿಕೆಯಲ್ಲಿ ಮುಖ್ಯ ಅತಿಥಿ ಲಕ್ಷ್ಮಿ ಸೆಹಗಲ್ ಸುಭಾಷಿಣಿ ಅಲಿ, ಸಿಪಿಐ(ಎಂ) ನಾಯಕರಾದ ವಿಜೆಕೆ ನಾಯರ್ ಜಿ.ವಿ.ಶ್ರೀರಾಮರೆಡ್ಡಿ, ಜಿ.ಎನ್.ನಾಗರಾಜ್, ಸಿಪಿಐನ ಸಿದ್ದನಗೌ ಪಾಟೀಲ್, ಜನತಾದಳ(ಜಾ)ನ ಸಿ.ನಾರಾಯಣ ಸ್ವಾಮಿ ಕೆ.ಹೆಚ್.ಶ್ರೀನಿವಾಸ್, ರಮೇಶ್ ಕುಮಾರ್, ಎ.ಕೆ.ಸುಬ್ಬಯ ಬಿ.ಟಿ.ಲಲಿತಾ ನಾಯಕ್, ಪ್ರೊ. ಚಂದ್ರಶೇಖರ ಪಾಟೀಲ್, ಕೊ.ಚನ್ನಬಸ ಮುಂತಾದವರು ಉಪಸ್ಥಿತರಿದ್ದರು. ನಿವೃತ್ತ ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

- ಜಗದೀಶ್ ಎ



ವಿಮಾನ ನಿಲ್ದಾಣದಲ್ಲಿ ಸ್ವಾಗತಕ್ಕಾಗಿ ಕಾದಿರುವ ನಾಗರಿಕರು




ಸ್ವಾಗತಕ್ಕೆ ಉತ್ತರವಾಗಿ ಹೋರಾಟದ ಮಹತ್ವವಿವರಿಸುತ್ತಾ



ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣ, ವಿರೋಧ ಪಕ್ಷದ ನಾಯಕ ಕೆ.ಹೆಚ್.ಶ್ರೀನಿವಾಸ್, ಕ್ಯಾ. ಲಕ್ಷ್ಮಿ ಹಾಗೂ ಸುಭಾಷಿಣಿ ಅಲಿ ಜೊತೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ



ಮೋಟಾರ್ ಕೇಡ್‌ನಲ್ಲಿ ಭವ್ಯ ಸ್ವಾಗತ



ಕಿಕ್ಕಿರಿದು ತುಂಬಿ ಹರಿದ ಜನವೋ ಜನ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಂಸ ಪ್ರಿಂಟರ್ಸ್, ...ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH